No. MAG (3)/NPP/77/2017-18
RNI No. KARKAN-2012/53684/Dtd. 19-12-2013

ವಾಗ್ರಚನೆಯೆಂಬುದು ಕರ್ಣಾಟವಯ್ಯ

# ನೊಳಂಬವಾಣಿ

NOLAMBAVANI Kannada Quarterly

ಕನ್ನಡ ತ್ರೈಮಾಸಿಕ

ಸಂಪಾದಕರು : ಡಾ. ಬಿ.ಸಿ.ರಾಕೇಶ್

| Volume-15 | April, May, June 2025 | Rs. 25/- | Page - 56 | Issue-2 |
| --- | --- | --- | --- | --- |
| ಸಂಪುಟ–15 | ಏಪ್ರಿಲ್, ಮೇ, ಜೂನ್ 2025 | ರೂ. 25/– | ಪುಟಗಳು – 56 | ಸಂಚಿಕೆ–2 |

## ದಾನಿಗಳ ಸಂಸ್ಮರಣಾ ದಿನಾಚರಣೆ : ದಿನಾಂಕ 04–04–2025 ಭಾನುವಾರ

ನೊಳಂಬ ಲಿಂಗಾಯತ ಸಂಘದ ವತಿಯಿಂದ
ಸಂಘದ ಸಮಾಜ ಸೇವಾ ಕಾರ್ಯಗಳಿಗೆ ಉದಾರವಾಗಿ ದಾನ
ನೀಡಿದವರನ್ನು ಗೌರವಿಸಲಾಯಿತು





## ದಾನಿಗಳ ಸಂಸ್ಮರಣಾ ದಿನಾಚರಣೆ : ದಿನಾಂಕ 04–04–2025 ಭಾನುವಾರ

















# ಸಂಪಾದಕೀಯ



ನಮಗಾಗಿ ತಮ್ಮ ಹೆಜ್ಜೆ ಗುರುತುಗಳನ್ನು ಬಿಟ್ಟವರಾರೂ ಸುಮ್ಮನೇ ಕುಳಿತು ಕಾಲಹರಣ ಮಾಡಿದವರಲ್ಲ ಎನ್ನುವುದನ್ನು ಅರ್ಥಮಾಡಿಕೊಂಡು ಅನುಸರಿಸೋಣ ಎಂಬಂತೆ, ಮಠ ಎಂದರೆ ಸನ್ಯಾಸಿಗಳು ವಾಸಿಸುವ ಸ್ಥಳ ಅಥವಾ ಕುಟೀರವೆಂದು ಅರ್ಥ ಸನ್ಯಾಸ ಜೀವನಕ್ಕೂ ಹಾಗೂ ಮಠಗಳಿಗೂ ಬಹು ಹತ್ತಿರದ ಸಂಬಂಧವಿದೆ. ಒಬ್ಬ ವ್ಯಕ್ತಿ ಸನ್ಯಾಸಿಯಾಗಲು ಆತನ ಜೀವನದ ಘಟನೆಗಳು ಹಾಗೂ ನಂಬಿಕೆಗಳು ಕಾರಣವಾಗಿರುತ್ತವೆ. ಪ್ರಾಚೀನ ಕಾಲದಲ್ಲಿ ಈ ರೀತಿ ಜೀವನ ತ್ಯಾಗ ಮಾಡಿದಂತಹ ಸಾಧು ಸನ್ಯಾಸಿಗಳು, ಪರ್ವತದ ಗುಹೆಗಳಲ್ಲಿ, ನದಿ ತೀರದಲ್ಲಿ ಕುಟೀರಗಳನ್ನು ಕಟ್ಟಿಕೊಂಡು ಅಥವಾ ಮರದ ಆಶ್ರಯದಲ್ಲಿ ವಾಸಿಸುತ್ತಿದ್ದರು. ಸನ್ಯಾಸಿಗಳಲ್ಲಿ ಕೆಲವರು ಒಂಟಿಯಾಗಿ ಇನ್ನು ಕೆಲವರು ಶಿಷ್ಯರೊಂದಿಗೆ ಇರುತ್ತಿದ್ದರು. ಈ ಶಿಷ್ಯರೆಲ್ಲರೂ ಹೆಚ್ಚಾಗಿ ವಿದ್ಯೆ ಕಲಿಯಲಿಕ್ಕಾಗಿ ಹೋಗುತ್ತಿದ್ದರು. ಇಲ್ಲಿ ವೇದ, ಉಪನಿಷತ್, ಧರ್ಮಶಾಸ್ತ್ರ ಇತ್ಯಾದಿಗಳನ್ನು ಕಲಿಸಲಾಗುತ್ತಿತ್ತು. ಲೌಕಿಕರಿಗೆ ಧಾರ್ಮಿಕ ಹಾಗೂ ಆಧ್ಯಾತ್ಮಿಕ ತತ್ವವಿಚಾರಗಳನ್ನು ಭೋದಿಸುತ್ತಿದ್ದರು. ಹೀಗೆ ಗುರು ಶಿಷ್ಯರು ಒಟ್ಟಿಗೆ ಇರುತ್ತಿದ್ದ ಸ್ಥಳಗಳನ್ನು ಆಶ್ರಮಗಳೆಂದು ಕರೆಯುತ್ತಿದ್ದರು. ಪ್ರಾಚೀನ ಕಾವ್ಯಗಳಾದ ರಾಮಾಯಣ, ಮಹಾಭಾರತಗಳಲ್ಲಿ ಇಂತಹ ಆಶ್ರಮಗಳ ವರ್ಣನೆ ಬರುತ್ತದೆ.

ಸನ್ಯಾಸ ಎಂಬುದು ವ್ಯಕ್ತಿಯೊಬ್ಬನ ವೈಯಕ್ತಿಕ ವಿಚಾರವಾಗಿದೆ. ಸನ್ಯಾಸಿಗಳು ಅಥವಾ ಗುರುಗಳು ಹಾಗೂ ಶಿಷ್ಯರು ವಾಸಿಸುತ್ತಿದ್ದ ಸ್ಥಳಗಳಿಗೆ ಗುರು ಆಶ್ರಮವೆಂದು ಕರೆಯಲಾಗುತ್ತಿತ್ತು. ಇಂತಹ ಕ್ಷೇತ್ರಗಳಿಗೆ ಬಂದು ಹೋಗುವ ಭಕ್ತರು ಇರುತ್ತಿದ್ದರು. ಕಾಲಾನಂತರದಲ್ಲಿ ಸನ್ಯಾಸಿಗಳು, ವಿದ್ಯಾರ್ಥಿಗಳು ಹಾಗೂ ಅನೇಕ ಶಿಷ್ಯರ ಬಳಗವು ಒಂದೇ ಕಡೆ ಸೇರಿಕೊಂಡ ಸಂಘಟನಾತ್ಮಕವಾದ ಈ ವಿಧಾನವೇ ಮಠದ ಉಗಮಕ್ಕೆ ಕಾರಣವಾಗಿರಬೇಕು. ವ್ಯಕ್ತಿ ಸಂಸಾರ ಜೀವನವನ್ನು ತ್ಯಜಿಸಿ ಸನ್ಯಾಸಿ ಆದಾಗ ಅವನಿಗೆ ವಾಸಸ್ಥಾನ ಅವಶ್ಯಕವಾಗಿ ಬೇಕಾಗುತ್ತದೆ. ಆಗ ಅದು ಮಠದ ಸ್ವರೂಪ ಪಡೆದುಕೊಳ್ಳುತ್ತದೆ. ಸನ್ಯಾಸ ಜೀವನದ ನಿಯಮಗಳನ್ನು ಪಾಲಿಸಲು ಒಂದು ಸಂಘಟನಾತ್ಮಕ ವ್ಯವಸ್ಥೆ ಬೇಕಾಗುತ್ತದೆ. ಇದನ್ನೇ ಮಠವೆಂದು ಕರೆಯಲಾಗಿದೆ. ಪ್ರಾಚೀನ ಭಾರತದಲ್ಲಿ ಮಠಗಳ ಕಲ್ಪನೆ ಅಷ್ಟಾಗಿ ಇರಲಿಲ್ಲ. ಆ ಕಾಲದಲ್ಲಿ ಕೇವಲ ಆಶ್ರಮಗಳು ಗುರುಕುಲಗಳಿದ್ದವು. ಇವುಗಳ ಜೊತೆಗೆ ಪ್ರಯಾಣಿಕರಿಗಾಗಿ ಧರ್ಮಛತ್ರವೆಂಬ ವಾಸಸ್ಥಳಗಳಿದ್ದ ಬಗ್ಗೆ ಉಲ್ಲೇಖಗಳು ದೊರಕುತ್ತವೆ. ಸಂಘಟನಾತ್ಮಕವಾದ ಧಾರ್ಮಿಕ ವ್ಯವಸ್ಥೆಯುಳ್ಳ ಇಂದಿನ ಮಠಗಳ ಸ್ವರೂಪವುಳ್ಳ ಮಠಗಳ ಉಲ್ಲೇಖಗಳು ಎಲ್ಲೂ ಕಂಡುಬರುವುದಿಲ್ಲ. ಧಾರ್ಮಿಕ ಹಾಗೂ ಆಧ್ಯಾತ್ಮಿಕ ಚಿಂತನೆಯುಳ್ಳ ವ್ಯಕ್ತಿಯೊಬ್ಬನು ತನ್ನೊಡನೆ ಸಾಮಾಜದ ಇತರರ ಕಲ್ಯಾಣವನ್ನು ಬಯಸುತ್ತ ತಾನು ವಾಸಿಸುತ್ತಿರುವ ಸ್ಥಳವನ್ನು ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳಿಗೆ ತೆರೆದಿಟ್ಟರೆ ಅದು ಮಠ ಎಂಬ ಅಭಿದಾನವನ್ನು ಪಡೆದುಕೊಳ್ಳುತ್ತದೆ. ಮಠ ಎಂಬ ಈ ಪದವನ್ನು ಮೂಲತಃ ಸಂಸ್ಕೃತದಿಂದ ಕನ್ನಡಕ್ಕೆ

## ನಿನಗೆ ಕೇಡಿಲ್ಲದಂತೆ

ತೆಗೆದುಕೊಳ್ಳಲಾಗಿದೆ. ಮಠ ಧಾತುವಿನಿಂದ ಮಠತಿ ರೂಪ ಸಿದ್ಧವಾಗುತ್ತದೆ. ಇದರ ಅರ್ಥವು ವಾಸಿಸು ಎಂದು ಸಂಸ್ಕೃತ ನಿಘಂಟುಕಾರನಾದ ಅಮರಸಿಂಹನು ತನ್ನ ಅಮರಕೋಶದಲ್ಲಿ ಮಠ ಛಾತ್ರಾದಿ ನಿಲಯಃ ಎಂದು ಹೇಳಿದ್ದಾನೆ. ಛಾತ್ರ ಎಂದರೆ ಶಿಷ್ಯ ಅಥವಾ ವಿದ್ಯಾರ್ಥಿ ಅಂದರೆ ಅಮರಸಿಂಹನ ಪ್ರಕಾರ ವಿದ್ಯಾರ್ಥಿಗಳು ವಾಸಿಸುವ ಸ್ಥಳವೆಂದೂ ಅರ್ಥೈಸಬಹುದಾಗಿದೆ.

ಪಾಶ್ಚಿಮಾತ್ಯ ವಿದ್ವಾಂಸರಾದ ಮಾಕ್ಡೋನೆಲ್ ಅವರ ಸಂಸ್ಕೃತ ಶಬ್ದಕೋಶದಲ್ಲಿ ಒಬ್ಬ ಸನ್ಯಾಸಿಯ ಇಲ್ಲವೆ ವಿದ್ಯಾರ್ಥಿಯ ಕುಟೀರ, ಒಂಟು ಪಾಠಶಾಲೆ ಎಂಬ ವ್ಯಾಖ್ಯಾನವಿದೆ. ಮೊದಲು ಮಠ ಪದವು ಮಂದಿರ, ದೇವಾಲಯಗಳ ಅರ್ಥದಲ್ಲಿ ರೂಢಿಯಲ್ಲಿತ್ತು. ಅನಂತರ ವಿದ್ಯಾರ್ಥಿಗಳ ಇಲ್ಲವೆ ಗುರುಗಳ ಆಶ್ರಮ, ವಿದ್ಯಾಲಯವೆನ್ನುವ ಅರ್ಥ ಬಳಕೆಯಲ್ಲಿ ಬಂದಿದೆ. ಆದುದರಿಂದಲೇ ಮಠ ಪದಕ್ಕೆ ಈ ಮೇಲಿನ ಅರ್ಥವಲ್ಲದೆ, ಶಾಲೆ, ವಿದ್ಯಾಕೇಂದ್ರ, ವಿಶ್ವವಿದ್ಯಾನಿಲಯ ಎಂಬ ಅರ್ಥಗಳೂ ಇವೆ. ಇಷ್ಟೇ ಅಲ್ಲದೆ ಪಾವಿತ್ರ್ಯವನ್ನು ಕಾಪಾಡಿಕೊಳ್ಳಲು ಬರುವ ಸ್ಥಳ ಎಂದೂ ಹೇಳುತ್ತಾರೆ. ವಿಶ್ವವಿದ್ಯಾನಿಲಯವನ್ನು Temple of learning ಎಂದು ಕರೆದಿರುವುದೂ ಗಮನಾರ್ಹ.

**ಡಾ. ರಾಕೇಶ್ ಬಿ.ಸಿ.**
ಸಂಪಾದಕರು



# ಅಧ್ಯಕ್ಷರ ಆಶಯ ನುಡಿ

ಆತ್ಮೀಯ ಚಂದದಾರರೆ ಹಾಗೂ ಸಮಾಜದ ಬಂಧುಗಳೆ ಎಲ್ಲರೂ ಕುಶಲವೆಂದು ಭಾವಿಸುತ್ತಾ ಈ ಸಂವತ್ಸರಲ್ಲಿ ನಾಡಿನಾದ್ಯಂತ ಮುಂಗಾರು ಮಳೆಯಾಗುತ್ತಿದ್ದು ನೆಲ ಹಸುರಾಗಿ ರಾಜ್ಯದ ಎಲ್ಲಾ ಅಣೆಕಟ್ಟುಗಳು ತುಂಬಿ ತನ್ನ ಸೌಂದರ್ಯವನ್ನು ಹೆಚ್ಚಿಸಿಕೊಂಡಿವೆ, ಮಳೆ ಮತ್ತು ಬೆಲೆಯ ನಡುವೆ ರೈತರ ಬದುಕು ಉತ್ತಮ ಸ್ಥಿತಿಗೆ ಬಂದಿವೆ ಎಂಬುದು ಎಲ್ಲರಿಗೂ ಹರ್ಷದಾಯಕ ಸಂಗತಿ, ಆದರೆ ಈ ಸಂವತ್ಸರದ ಆರಂಭದಲ್ಲಿ ಕಾಶ್ಮೀರದ ಪಹಲ್ಗಾಮ್‌ನ ಮೇಲೆ ಉಗ್ರರ ದಾಳಿ ನಡೆದು ಅಮಾಯಕ ಭಾರತೀಯ ಪ್ರಜೆಗಳು ಗುಂಡಿಗೆ ಬಲಿಯಾದದ್ದು ವಿಷಾದನೀಯ, ಇದಕ್ಕೆ ಪ್ರತಿಯಾಗಿ ನಮ್ಮ ಭಾರತ ಸರ್ಕಾರವು "ಆಪರೇಷನ್ ಸಿಂಧೂರ"ದ ಮೂಲಕ ಉಗ್ರರನ್ನು ಅವರಿರುವ ಜಾಗ ಗುರ್ತಿಸಿ ಧ್ವಂಸ ಮಾಡುವ ಮೂಲಕ ಉಗ್ರರಿಗೆ ಉತ್ತೇಜನ ನೀಡುತ್ತಿದ್ದ ಪಾಕಿಸ್ತಾನಕ್ಕೆ ತಕ್ಕ ಉತ್ತರ ನೀಡಿರುವುದು ಶ್ಲಾಘನೀಯ ವಿಷಯವಾಗಿದೆ, ವಿಶ್ವಸಂಸ್ಥೆ ಹಾಗೂ ಪ್ರಪಂಚದ ನಾನಾ ದೇಶಗಳು ಉಗ್ರರ ದಾಳಿಯನ್ನು ಖಂಡಿಸಿ ಭಾರತವನ್ನು ಬೆಂಬಲಿಸಿರುವುದು ನಮ್ಮ ಘನತೆ ಹಾಗೂ ಶಕ್ತಿಯನ್ನು ಇಮ್ಮಡಿಗೊಳಿಸಿದೆ.

ಜೂನ್ 2025ರ ಮೊದಲನೇ ವಾರದಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್.ಸಿ.ಬಿ. ಕ್ರಿಕೆಟ್ ತಂಡವು 18 ವರ್ಷಗಳ ನಂತರ ಗೆಲ್ಲುವ ಮೂಲಕ ಸಾವಿರಾರು ಕ್ರಿಕೆಟ್ ಪ್ರಿಯರ ಕನಸು ನನಸು ಮಾಡಿತು, ಆದರೆ ಗೆದ್ದ ಸಂಭ್ರಮದ ಆಚರಣೆಯ ವೇಳೆ ಕಾಲ್ತುಳಿತದಿಂದ ಉಂಟಾದ ಸಾವು ನೋವುಗಳು ಬಹಳ ದುರದೃಷ್ಟ ಸಂಗತಿಯಾಗಿದೆ. ಈ ಘಟನೆಯ ಜವಬ್ದಾರಿಯನ್ನು ಹೊರುವವರು ಯಾರೂ ಇರುವುದಿಲ್ಲ. ನ್ಯಾಯಾಂಗ ತನಿಖೆಗಳಾಗಿ ವಿಚಾರಣೆ ನಡೆದು ಏನೇ ವರದಿ ಬಂದರೂ ಮೃತರ ಜೀವಗಳು ಮತ್ತೆ ಬರಲಾರವು. ಆ ಕುಟುಂಬಗಳಿಗೆ ಆದ ನಷ್ಟ ಮತ್ತು ದುಃಖವನ್ನು ತಡೆಯುವುದು ಮಾತು ಮತ್ತು ಅಕ್ಷರಗಳಿಂದ ಸಾಧ್ಯವಾಗುವುದಿಲ್ಲ.

ಕಳೆದವಾರ "ಇಂಡಿಯಯನ್ ಏರ್‌ಲೈನ್ಸ್" ವಿಮಾನದ ಅಪಘಾತದಿಂದ 261 ಜನ ಪ್ರಯಾಣಿಕರು ಮರಣ ಹೊಂದಿರುವದು ಮತ್ತೊಂದು ಆಘಾತ. ಇವುಗಳನ್ನು ಗಮನಿಸಿದರೆ ಈ ಸಂವತ್ಸರದಲ್ಲಿ ಸಂತಸಕ್ಕಿಂತ ನೋವಿನ ಸಂಗತಿಗಳೇ ಹೆಚ್ಚಿನ ಪ್ರಮಾಣದಲ್ಲಿರುವುದು ಗೋಚರವಾಗುತ್ತಿದೆ. ನಾಣ್ನುಡಿಯಂತೆ "ಮೊದಲ ದಿನಗಳು ಕಷ್ಟ ಬಂದರೆ ಮುಂದಿನ ದಿನಗಳು ಸುಖಮಯವಾಗಿರುತ್ತವೆ" ಎಂಬ ಭಾವನೆಯಲ್ಲಿ ಹೆಜ್ಜೆ ಇಡಬೇಕಿದೆ.

ಈ ಸಂವತ್ಸರದಲ್ಲಿ ನಮ್ಮ ರಾಜ್ಯ ಹಾಗೂ ದೇಶದ ಹೆಸರಿಗೆ ಮುಕುಟವಿಟ್ಟಂತೆ ಕನ್ನಡ ಭಾಷೆಯಲ್ಲಿ ಬಾನು ಮುಷ್ತಾಕ್ ಬರೆದ "ಎದೆಯ ಹಣತೆ" ಎಂಬ ಕೃತಿಯು ಇಂಗ್ಲೀಷ್ ಭಾಷೆಗೆ ಅನುವಾದಗೊಂಡು ಪ್ರಪಂಚದ ಸಾಹಿತ್ಯ ಕ್ಷೇತ್ರದ ಶ್ರೇಷ್ಠ ಪ್ರಶಸ್ತಿಯಾದ "ಬೂಕರ್" ಪ್ರಶಸ್ತಿಯನ್ನು ಪಡೆದದ್ದು ಕನ್ನಡ ಸಾಹಿತ್ಯದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ಸಂಗತಿಯಾಗಿದೆ. ಈ ಕೃತಿ ಬರೆದ ಬಾನು ಮುಷ್ತಾಕ್ ಸಾಮಾನ್ಯ ಹಾಗೂ ಗ್ರಾಮಾಂತರ ಪ್ರದೇಶದ ಮಹಿಳೆಯಾಗಿರುವುದು ಮತ್ತೊಂದು ವಿಶೇಷವಾಗಿದ್ದು, ಈ ಕೃತಿಯನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿದ ದೀಪಾಬಸ್ತಿಯವರು ಸಹ ಸಾಧಕರ ಸಾಲಿನಲ್ಲಿ ಅಗ್ರಗಣ್ಯರಾಗಿದ್ದಾರೆ. ಈರ್ವರಿಗೂ ಸಹ ಅಭಿನಂದನೆಗಳು.

2025ರ ಏಪ್ರಿಲ್‌ನಿಂದ ಜೂನ್ ತಿಂಗಳ ಅವಧಿಯಲ್ಲಿ ಸಂಘದ ಕಾರ್ಯ ಚಟುವಟಿಕೆಯನ್ನು ಕಾರ್ಯದರ್ಶಿಗಳು ತಮ್ಮ ಗಮನಕ್ಕೆ ತಂದಿರುವುದರಿಂದ ಹೆಚ್ಚಾಗಿ ಪ್ರಸ್ತಾಪಿಸದೆ. ನೊಳಂಬ ರಾಜಧಾನಿಯಾಗಿದ್ದ ಈಗ ಆಂಧ್ರಪ್ರದೇಶಕ್ಕೆ ಸೇರಿರುವ ಹೇಮಾವತಿಯಲ್ಲಿ 52ಸೆಂಟ್ (0.26 ಗುಂಟೆ) ಜಮೀನನ್ನು ಅಲ್ಲಿನ ನೊಳಂಬೇಶ್ವರ ಟ್ರಸ್ಟ್‌ನವರು ನಮ್ಮ ಸಂಘದ ಕಾರ್ಯಚಟುವಟಿಕೆಗಳನ್ನು ಗಮನಿಸಿ ಸಂಘಕ್ಕೆ ದಾನವಾಗಿ ಬರೆದುಕೊಡಲು ಮುಂದೆ ಬಂದಿರುವುದು ಸಂತೋಷದ ವಿಷಯವಾಗಿದೆ. ಸಂಘದ ವತಿಯಿಂದ ನಮ್ಮ ಸಮಾಜ ಬಾಂಧವರ ಸಾಮಾಜಿಕ ಆರ್ಥಿಕ ಶೈಕ್ಷಣಿಕ ಅಂಶಗಳನ್ನು ಒಳಗೊಂಡು ಜಾತಿಗಣತಿ ಮಾಡುವ ಕಾರ್ಯಕ್ಕೆ ಚಾಲನೆ ನೀಡಿರುವುದರಿಂದ ತಾವುಗಳೆಲ್ಲಾ ಸಹಕರಿಸಬೇಕಾಗಿ ಕೋರುತ್ತಾ, ಮುಂದಿನ ದಿನಗಳು ತಮ್ಮೆಲ್ಲರಿಗೂ ಸಂತಸ ತರಲಿ ಎಂದು ಹಾರೈಸುತ್ತೇನೆ.

ಶರಣು ಶರಣಾರ್ಥಿಗಳು
**ಶ್ರೀ ಬಿ.ಕೆ.ಚಂದ್ರಶೇಖರ್**
ಅಧ್ಯಕ್ಷರು
ನೊಳಂಬ ಲಿಂಗಾಯತ ಸಂಘ (ರಿ.), ಬೆಂಗಳೂರು.

# ನೊಳಂಬ ಲಿಂಗಾಯತ ಸಂಘದ ಕಾರ್ಯ ಚಟುವಟಿಕೆಗಳು

1. ದಿನಾಂಕ : 04.04.2025ರಂದು ಶುಭ ಶುಕ್ರವಾರ 1ನೇ ಬ್ಲಾಕ್ ರಾಜಾಜಿನಗರದಲ್ಲಿ ನೂತನವಾಗಿ ನಿರ್ಮಿಸಿರುವ ವಾಣಿಜ್ಯ ಸಂಕೀರ್ಣದ ಪೂಜಾ ಕಾರ್ಯಕ್ರಮವನ್ನು ಜರುಗಿಸಲಾಯಿತು.

2. ದಿನಾಂಕ: 04.04.2025 ರಂದು ಭಾನುವಾರ ಸಂಘದ ಅಧ್ಯಕ್ಷರಾದ ಶ್ರೀ ಬಿ.ಕೆ.ಚಂದ್ರಶೇಖರ್‌ರವರ ಅಧ್ಯಕ್ಷತೆಯಲ್ಲಿ ಮಾಜಿ ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿ ಯವರಿಂದ **"ವಾಣಿಜ್ಯ ಸಂಕೀರ್ಣ"** ಉದ್ಘಾಟನೆ ಮಾಡಿ ಲೋಕಾರ್ಪಣೆ ಮಾಡಲಾಯಿತು. ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಸಕ್ರೀಯವಾಗಿ ಭಾಗವಹಿಸಿದ್ದರು.

ಅಂದೇ **"ದಾನಿಗಳ ಸಂಸ್ಮರಣಾ ದಿನಾಚರಣೆ"** ಯನ್ನು ಆಚರಿಸಲಾಯಿತು. ದಾನಿಗಳನ್ನು ಕುರಿತು ವಿದ್ವಾನ್ ಎಂ.ಜಿ.ಸಿದ್ದರಾಮಯ್ಯ ಅಧ್ಯಕ್ಷರು, ಜಿಲ್ಲಾ ಶರಣ ಸಾಹಿತ್ಯ ಪರಿಷತ್, ತುಮಕೂರು ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

3. ದಿನಾಂಕ: 14.04.2025 ರಂದು ಹುಬ್ಬಳ್ಳಿಯಲ್ಲಿ ನೊಳಂಬ ವೀರಶೈವ ಸಂಘದ ವತಿಯಿಂದ ಜರುಗಿದ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರದ ಶ್ರೀ ಬಿ.ಕೆ.ಚಂದ್ರಶೇಖರ್, ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಹಾಗೂ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೆ.ಬಿ. ಶಶಿಧರ್‌ರವರು ಭಾಗವಹಿಸಿ ಕಾರ್ಯಕ್ರಮ ನಡೆಸಿಕೊಟ್ಟರು.

4. ದಿನಾಂಕ: 05.05.2025 ರಂದು ಅಧ್ಯಕ್ಷರು ಮತ್ತು ನಿರ್ದೇಶಕರು ಆಂಧ್ರಪ್ರದೇಶದ ಹೆಂಜೇರುವಿನಲ್ಲಿರುವ **"ಶ್ರೀ ಸಿದ್ಧೇಶ್ವರಸ್ವಾಮಿ ದೇವಸ್ಥಾನಕ್ಕೆ"** ಭೇಟಿ ನೀಡಿ ದೇವಸ್ಥಾನದ ಕಾರ್ಯದ ಬಗ್ಗೆ ಆಡಳಿತ ಮಂಡಳಿಯೊಂದಿಗೆ ಸಮಾಲೋಚನೆ ನಡೆಸಿದರು.



**ಕೆ.ಬಿ.ಶಶಿಧರ್ ಕಾಮನಕೆರೆ**
ಗೌರವ ಕಾರ್ಯದರ್ಶಿ
ನೊಳಂಬ ಲಿಂಗಾಯತ ಸಂಘ (ರಿ)
ಬೆಂಗಳೂರು.

5. ದಿನಾಂಕ: 27.05.2025ರಂದು ಸಂಘದ ಕಾರ್ಯದರ್ಶಿ, ಖಜಾಂಚಿ, ಸಹ-ಕಾರ್ಯದರ್ಶಿ ಹಾಗೂ ನಿರ್ದೇಶಕರುಗಳು ತಿಪಟೂರು ತಾ॥ ರಂಗಾಪುರ ಮಠದ ಸ್ವಾಮೀಜಿಗಳನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

6. ಕಡೂರಿನಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಸಮುದಾಯ ಭವನದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

7. ಪದಾಧಿಕಾರಿಗಳು, ನಿರ್ದೇಶಕರುಗಳು ಮತ್ತು ಇಂಜಿನಿಯರ್‌ಗಳು ಸಂಘದಿಂದ ಜರುಗುತ್ತಿರುವ ಕಾಮಗಾರಿಗಳನ್ನು ಆಗಿದಾಂಗ್ಗೆ ಭೇಟಿ ನೀಡಿ ಕಾಮಗಾರಿಗಳು ಸುಲಲಿತವಾಗಿ ಜರುಗಲು ಮಾರ್ಗದರ್ಶನ ಮಾಡುತ್ತಿದ್ದಾರೆ.

8. ದಿನಾಂಕ: 22.06.2025ರಂದು ಭಾನುವಾರ ಉಪಸಮಿತಿ ಹಾವೇರಿಯಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

9. ದಿನಾಂಕ: 29.06.2025ರಂದು ಭಾನುವಾರ ಉಪಸಮಿತಿ ಅಜ್ಜಂಪುರದಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

10. 14 ಮತ್ತು 15, ಜನವರಿ 2026ರಲ್ಲಿ ಶ್ರೀಗುರು ಸಿದ್ಧರಾಮೇಶ್ವರರ ಜಯಂತಿ ಮಹೋತ್ಸವವನ್ನು ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಸಲು ಕಾರ್ಯಕಾರಿ ಮಂಡಳಿ ಸಭೆಯಲ್ಲಿ ತೀರ್ಮಾನಿಸಲಾಯಿತು.

11. ಸಂಘದ ಅಧ್ಯಕ್ಷರಾದ ಶ್ರೀ ಬಿ.ಕೆ.ಚಂದ್ರಶೇಖರ್‌ರವರ ಸಮ್ಮುಖ ದಲ್ಲಿ ಸಂಘದ ಅಭಿವೃದ್ಧಿ ಕಾರ್ಯಗಳು ಸುಲಲಿತವಾಗಿ ನಡೆಯಲು ಮಾಸಿಕ, ದ್ವೈಮಾಸಿಕ ಸಭೆ ಹಾಗೂ ಕಾಮಗಾರಿ ಸಭೆಗಳನ್ನು ನಡೆಸಲಾಗುತ್ತಿದೆ.


# ಬಸವಣ್ಣ ಉತ್ತು, ಬಿತ್ತಿ, ಬೆಳೆದ ಬೀಜಗಳು ನಾವು

## (ಬಸವ ಜಯಂತಿ ಪ್ರಯುಕ್ತ ವಿಶೇಷ ಲೇಖನ)

ಕನ್ನಡ ನಾಡಿನ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಚರಿತ್ರೆಯಲ್ಲಿ ಬಸವಣ್ಣನವರ ಹೆಸರು ಮೊದಲ ಸ್ಥಾನದಲ್ಲಿ ಚಿರಸ್ಥಾಯಿಯಾಗಿ ನಿಲ್ಲುತ್ತದೆ. ವಿಶ್ವದ ಅತ್ಯುತ್ತಮ ಧರ್ಮಗಳಲ್ಲಿ ಒಂದೆನಿಸಿಕೊಂಡಿರುವ 'ಲಿಂಗಾಯತ' ಧರ್ಮ ಸ್ಥಾಪಕನೂ, ಸಮಾಜ ಸುಧಾರಕನೂ, ಚಾಲುಕ್ಯ ಸಾಮ್ರಾಜ್ಯದ ಪ್ರಭಾವಯುತ ಆದರ್ಶಪ್ರಾಯ ಪ್ರಧಾನಮಂತ್ರಿಯೂ ಆಗಿ, 'ನ ಭೂತೋ ನ ಭವಿಷ್ಯತಿ' ಎಂಬಂತೆ, ಪ್ರಸ್ತುತ ಕರ್ನಾಟಕ ರಾಜ್ಯದ ಸಾಂಸ್ಕೃತಿಕ ನಾಯಕ ಎಂಬ ಹೆಗ್ಗಳಿಕೆಗೆ ಪಾತ್ರನಾಗಿ, ಬಹುನೆಲೆಗಳಲ್ಲಿ ತಮ್ಮ ಸ್ವಾರ್ಥರಹಿತ ತ್ಯಾಗಸಹಿತ ಸಾರ್ಥಕ ಸೇವೆಯಲ್ಲಿ ಉರಿಯುಂಡ ಕರ್ಪೂರದಂತೆ, ಜೀವನದುದ್ದಕ್ಕೂ ತನ್ನನ್ನು ತಾನು ಸವೆಸಿಕೊಂಡು ಸಂಗಮನಾಥನಲ್ಲಿ ಲೀನವಾಗಿ ಹೋದ ಬಸವಣ್ಣನವರನ್ನು ಅಂದಿನ ಶರಣ ಶ್ರೇಷ್ಠರಲ್ಲೊಬ್ಬರಾದ ಅಲ್ಲಮಪ್ರಭುದೇವರು "ಯುಗದ ಉತ್ಸಾಹ" ಎಂದಿರುವುದು ಅತಿಶಯೋಕ್ತಿ ಏನೂ ಅಲ್ಲ. ಮಾನವರ ಒಳಿತಿಗಾಗಿ ಹುಟ್ಟಿಬಂದ ಬಸವಣ್ಣನವರನ್ನು 'ಅವತಾರಪುರುಷ, ಮಹಾಕಾರಣಿಕ' ಎಂದಿರುವುದು. ಇಂದಿನ ಜನರು ಭಕ್ತಿಗೌರವಗಳಿಂದ ಪೂಜಿಸುತ್ತಾ, ಧ್ಯಾನಕ್ಕೆ ಮೂಲ ಬಸವಣ್ಣ ಎನ್ನುತ್ತಾ, ನಾವು ಬಸವಣ್ಣನವರು ಉತ್ತು ಬಿತ್ತಿದ ಬೀಜಗಳ ಬೆಳೆ ಎಂದು ಹೇಳಿಕೊಂಡು, ಹೆಮ್ಮೆಯಿಂದ ಸಂತೋಷಪಡುವರು.

ಇಂದಿಗೆ 890 ವರ್ಷಗಳ ಹಿಂದೆ (ಶ.ವ. 1134) ಹುಟ್ಟಿಬಂದ ಬಸವಣ್ಣ ತನ್ನ ಜೀವಿತಾವಧಿಯ 62 ವರ್ಷಗಳಲ್ಲಿ, ಬಾಲ್ಯ 8 ವರ್ಷ ಹುಟ್ಟೂರಿನ ಬ್ರಾಹ್ಮಣ ಕೇರಿಯ ಓರಗೆಯ ಹುಡುಗರೊಟ್ಟಿಗೆ ಆಟ-ಓಟ, ಅಕ್ಷರಾಭ್ಯಾಸದಲ್ಲಿ ನಿರತನಾಗಿ, ಮುಂದಿನ 13 ವರ್ಷಗಳಷ್ಟು ಸಮಯವನ್ನು ಕೂಡಲ ಸಂಗಮದ ಸಂಗಮನಾಥ ವಿದ್ಯಾಶಿಕ್ಷಣ ಸಂಸ್ಥೆಯಲ್ಲಿ ಪ್ರಾಥಮಿಕ ಶಿಕ್ಷಣ ಪ್ರಾರಂಭಿಸಿ, ಪದವಿ ಶಿಕ್ಷಣ ಮುಗಿಸಿ 21ನೇ ವಯಸ್ಸಿನಲ್ಲಿ ಮಂಗಳವೇಡೆ ಮಂಡಲಾಧಿಪತಿ ಬಿಜ್ಜಳನ ಆಸ್ಥಾನದ ಆಡಳಿತ ಕಾರ್ಯಾಲಯದಲ್ಲಿ ಲೆಕ್ಕಪತ್ರ ಕಾರಕೂನನಾಗಿ ಜೀವನ ನಿರ್ವಹಣೆಗಾಗಿ ದುಡಿಯಲು ಪ್ರಾರಂಭಿಸುತ್ತಾನೆ. 5 ವರ್ಷ ಕಳೆಯಲು ಮಂಡಲಾಧಿಪತಿ ಬಿಜ್ಜಳನು ಚಾಲುಕ್ಯ ಸಾಮ್ರಾಜ್ಯದ ಸಾಮ್ರಾಟನಾಗಿ ಕಲ್ಯಾಣ ನಗರಕ್ಕೆ ತೆರಳಲು, ಬಸವಣ್ಣನ ಪ್ರಾಮಾಣಿಕತೆ ದಕ್ಷತೆಗಳ ಅರಿವಿದ್ದ ಬಿಜ್ಜಳನು ಬಸವಣ್ಣನನ್ನು ರಾಜಧಾನಿ ಕಲ್ಯಾಣ ನಗರಕ್ಕೆ ಕರೆಸಿಕೊಂಡು ಸಾಮ್ರಾಜ್ಯದ ಬೊಕ್ಕಸದಲ್ಲಿ ಲೆಕ್ಕಪರಿಶೋಧಕ ಹುದ್ದೆಗೆ ನಿಯಮಿಸಿದನು. ಲೆಕ್ಕ ಪರಿಶೋಧಕ ಹುದ್ದೆಯಿಂದ ಬೊಕ್ಕಸದ ಅಧಿಕಾರಿಯಾಗಿ, ಅರ್ಥಮಂತ್ರಿಯಾಗಿ, ಪ್ರಧಾನ ಮಂತ್ರಿಯಾಗಿ 30 ವರ್ಷಗಳಷ್ಟು ಧೀರ್ಘ ಅವಧಿಯವರೆಗೆ ಸಾಮ್ರಾಜ್ಯದ ಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ ಬಸವಣ್ಣ ಚಾಲುಕ್ಯ ಸಾಮ್ರಾಜ್ಯದ ಅರ್ಥವ್ಯವಸ್ಥೆಯನ್ನು ಸದೃಢಗೊಳಿಸಿ ಸಾಮ್ರಾಜ್ಯ ಸಮೃದ್ಧ, ಸಂಪದ್ಭರಿತವಾಗಲು ಶ್ರಮಿಸಿದ್ದಷ್ಟೇ ಅಲ್ಲ, ಸಾಮ್ರಾಜ್ಯದ ಸನಾತನ ಧರ್ಮದ ಸಮಾಜೋ-ಧಾರ್ಮಿಕ ಅವ್ಯವಸ್ಥೆಯನ್ನು ಸರಿಪಡಿಸಲು ಹೆಣಗಾಡಿ ಸೋತುಹೋದದ್ದರ ಫಲವಾಗಿ ಸನಾತನ ಧರ್ಮದ ಅನೀತಿ, ಅಮಾನವೀಯ, ಜನವಿರೋಧಿ ನೀತಿಗಳ ವಿರುದ್ಧ, ಜನಪರವಾದ ಮಾನವೀಯ ಮೌಲ್ಯಾಧಾರಿತ ಹೊಸತೊಂದು ಧರ್ಮದ ಉದಯಕ್ಕೆ ಕಾರಣನಾದ. ಈ ಪ್ರಾಸ್ತಾವಿಕ ನುಡಿಗಳೊಂದಿಗೆ ಬಸವಣ್ಣನವರ ಜೀವಿತಾವಧಿಯ 62 ವರ್ಷಗಳಲ್ಲಿ ಮಾನವನ ಒಳಿತಿಗಾಗಿ ಬಸವಣ್ಣನವರಿಂದಾದ ಮಹತ್ಕಾರ್ಯಗಳನ್ನು ವಿಸ್ತರಿಸಿ ಹೇಳುವ ಉದ್ದೇಶ ಹೊಂದಿರುವ ಈ ಲೇಖನವನ್ನು ದಯವಿಟ್ಟು ಓದಿ.

ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದ 'ಬಾಗೇವಾಡಿ' ಗ್ರಾಮ ಅಂದಿನ ಚಾಲುಕ್ಯ ಸಾಮ್ರಾಜ್ಯದ ಮಂಗಳವೇಡೆ ಮಂಡಲದ ಆಡಳಿತ ವ್ಯಾಪ್ತಿಯಲ್ಲಿ ಬಾಗೇವಾಡಿಪುರ ಹೆಸರಿನಲ್ಲಿ ಒಂದು ಉಪ ಆಡಳಿತ ಕೇಂದ್ರವಾಗಿತ್ತು. ಬಾಗೇವಾಡಿಪುರದ ಆಡಳಿತಾಧಿಕಾರಿಯಾಗಿದ್ದ ಬ್ರಾಹ್ಮಣ ವರ್ಗಕ್ಕೆ ಸೇರಿದ ಮಾದರಸರ ಮಗನೇ ಬಸವಣ್ಣ. ಬಸವಣ್ಣ ಆರೇಳು ವಯಸ್ಸಿನ ಬಾಲಕನಾಗಿ, ಬ್ರಾಹ್ಮಣ ಕೇರಿಯ ಓರಗೆಯ ಬ್ರಾಹ್ಮಣ ಹುಡುಗರೊಟ್ಟಿಗೆ ಗುರುಕುಲದಲ್ಲಿ ಅಕ್ಷರಾಭ್ಯಾಸದಲ್ಲಿ ನಿರತನಾಗಿ, ಬಿಡುವಿನ ವೇಳೆ ಬ್ರಾಹ್ಮಣ ವಿದ್ಯಾರ್ಥಿಗಳಿಗಿಂತ



**ಚಂದ್ರಶೇಖರ ತಿ. ಚಿಂದಾಳ**
ಅಧ್ಯಕ್ಷರು, ಶ್ರೀಗುರು ಸಿದ್ಧರಾಮೇಶ್ವರ ಜ್ಞಾನಪ್ರಸಾರ ಕೇಂದ್ರ, "ಬಸವ ಚೇತನ", ತೋಟದ ಮನೆ, ಸಿದ್ಧರಾಮನಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
ಮೊ : 6366052331, 9449115995

ಭಿನ್ನವಾಗಿ ಊರಿನ ಬ್ರಾಹ್ಮಣ ಕೇರಿಯಿಂದಾಚೆ ಶೂದ್ರ ವರ್ಗದ ವಕ್ಕಲಿಗ, ನೇಕಾರ, ಗಾಣಿಗ, ಕುಂಬಾರ, ಕಮ್ಮಾರ, ಮೇದಾರ, ಮಡಿವಾಳ, ಹಡಪದ, ಅಂಬಿಗ, ಬ್ಯಾಡರ, ಸಿಂಪಿಗ ಮತ್ತು ಇನ್ನಿತರ ಶ್ರಮಜೀವಿ ಸಮುದಾಯದವರ ಕೇರಿ, ಕೇರಿಗಳನ್ನು ಹೊಕ್ಕು, ಸಮವಯಸ್ಸಿನ ಶೂದ್ರ ಹುಡುಗರೊಂದಿಗೆ ಆಟ ಓಟಗಳಲ್ಲಿ ಭಾಗಿಯಾಗುತ್ತಾ, ಶೂದ್ರ ವರ್ಗದ ಹಿರಿಯರನ್ನು ಅಜ್ಜ–ಅಜ್ಜಿ, ಅಪ್ಪ–ಅವ್ವ, ಅಣ್ಣ–ಅಕ್ಕ ಎಂದು ಬಾಯ್ತುಂಬ ಪ್ರೀತಿ ಗೌರವ ಅಕ್ಕರೆಯಿಂದ ಮಾತನಾಡಿಸುತ್ತಾ, ಊರಿನ ಎಲ್ಲಾ ಸಮುದಾಯದವರ ಕಣ್ಮಣಿಯಾಗಿ, 'ಅಯ್ನೋರೆ' ಎಂದು ಕರೆಸಿಕೊಳ್ಳುತ್ತಿದ್ದ ಬಸವಣ್ಣನಿಗೆ, ಊರ ಹೊರಗೆ ಅನತಿ ದೂರದಲ್ಲಿದ್ದ ಹೊಲಗೇರಿಗೆ ಹೋಗಿಬರಬೇಕೆಂಬಾಸೆಯಾಯ್ತು. ಊರಿನ ಎಲ್ಲಾ ಕೇರಿಗಳ ಕಸ ಕಡ್ಡಿ ಗುಡಿಸಿ ಗುಡ್ಡೆಹಾಕಿ, ಊರಿನ ಎಲ್ಲರ ಮನೆಯ ಹೊಲಸು ಬಳಿದು, ತೊಳೆದು, ತಲೆಮೇಲೆ ಹೊತ್ತು ಊರಿದಾಂಚೆ ಹೊತ್ತೊಯ್ದು ಎಸೆದು, ಹಿಂದಿರುಗುವ ಮುಂಚೆ ಎಲ್ಲರ ಮುಂದೆ ಕೈಚಾಚಿ ನಿಂತು, ಅವರು ಹಳಸಿದ ಅನ್ನ, ಕಟುಕಲು ರೊಟ್ಟಿ, ಮಿಕ್ಕ ಸಾರು, ಉಟ್ಟುತೊಟ್ಟು ಬಿಟ್ಟ ಮಾಸಿದ ಹರಕಲು ಅಂಗಿ, ಚಲ್ಲಣ, ಪಂಚೆ, ಮತ್ತಿತರ ತ್ಯಾಜ್ಯ ಬಟ್ಟೆಗಳನ್ನು ಪ್ರಸಾದವೆಂಬಂತೆ ಸ್ವೀಕರಿಸಿ, ಗಂಟುಕಟ್ಟಿ ಹೊತ್ತೊಯ್ಯುವ, ಮುಂಜಾನೆ ಹೊತ್ತೇರುವ ಮುಂಚೆ ಬಂದು ಹೊತ್ತಿಳಿಯುವ ಮುಂಚೆ ಗುಡಿಸಲು ಸೇರುವ, ಹೊಲಗೇರಿಯಿಂದ ಬರುವ ಹೊಲೆಯರ ಗಂಡು–ಹೆಣ್ಣುಗಳನ್ನು ದಿನವೂ ನೋಡುತ್ತಿದ್ದ ಬಸವಣ್ಣ, ಹೊಲಗೇರಿಗೆ ಹೋಗುವುದು ಇರಲಿ, ಊರೊಳಗೆ ದಿನವೂ ಬರುವ ಹೊಲೆಯರ ಗಂಡು ಹೆಣ್ಣುಗಳೊಡನೆ ಮಾತನಾಡಲೂ ಆಗದ ಪರಿಸ್ಥಿತಿ ಬಸವಣ್ಣನದಾಗಿತ್ತು. ಹೊಲಗೇರಿಗೆ ಹೋಗಿ ಅಲ್ಲಿಯ ಹಿರಿಯರೊಡನೆ ಮಾತನಾಡಿ, ತನ್ನ ವಯಸ್ಸಿನ ಹುಡುಗರೊಡನೆ ಆಟವಾಡಿ ಬರಬೇಕೆಂಬ ಆಸೆಯನ್ನು ಅದುಮಿಟ್ಟುಕೊಳ್ಳಲಾಗದ ಬಸವಣ್ಣ ಊರಿನ ಎಲ್ಲರ ಕಣ್ಣುತಪ್ಪಿಸಿ ಹೊತ್ತು ನೆತ್ತಿಯ ಮೇಲಿದ್ದ ಸಮಯದಲ್ಲಿ ಹೊಲಗೇರಿಯೊಳಗೊಕ್ಕ. ಮಣ್ಣು ಗೋಡೆಯ ಹುಲ್ಲು ಹೊದಿಕೆಯ ಗೂಡುಗಳಂತಿದ್ದ, ಅಡ್ಡಾದಿಡ್ಡಿಯಾಗಿ ಸಂದುಗೊಂದಿಗಳಿಂದ ಕೂಡಿದ, ಗುಡಿಸಲುಗಳ ಗುಂಪಿನೊಳಗೆ ಕಾಲಿಡುತ್ತಿದ್ದಂತೆ ಕಂಡ ದೃಶ್ಯವನ್ನು ನೋಡಿ ದಂಗಾಗಿ ಹೋದ. ಎಲ್ಲೆಂದರಲ್ಲಿ ಕೊಚ್ಚೆಯ ನೀರು ನಿಂತು ಜುಯ್ ಎಂದು ಹಾರಾಡುತ್ತಿದ್ದ ನೊಣ ಸೊಳ್ಳೆಗಳು, ಎಚ್ಚರಿಕೆಯಿಂದ ನಡೆಯುತ್ತಾ ಹೇಗೋ ಹೊಲಗೇರಿಯ ಜೋಪಡಿಯಂತ ದುರುಗಮ್ಮನ ಗುಡಿ ಮುಂದೆ ಬಂದು ನಿಂತ. ಸಮೀಪದ ದೊಡ್ಡದೊಂದು ಗುಂಡಿಯಲ್ಲಿ ಮಲೆತು ದುರ್ವಾಸನೆ ಬೀರುತ್ತಾ ನಿಂತ ನೀರಿನಲ್ಲಿ ಅರೆ ನಗ್ನರಾಗಿ ಹೆಗ್ಗಿಲ್ಲದೆ ಆಟವಾಡುತ್ತಿದ್ದ ಹೊಲೆಯರ ಹುಡುಗರನ್ನು ಕಂಡ ಬಸವಣ್ಣ ಅವರೊಡನೆ ಆಟವಾಡಬೇಕೆಂಬಾಸೆಯನ್ನು ಕೈಬಿಟ್ಟ, ಹೊಲೆಯ ಹಿರಿಯರೊಡನೆ ಮಾತನಾಡಬೇಕೆಂದು ಗುಡಿಸಲೊಂದರ ಒಳಗೆ ಹೊಕ್ಕ ಬಸವಣ್ಣ ಅಲ್ಲಿನ ಅಸಹನೀಯ ಸ್ಥಿತಿಯನ್ನು ನೋಡಿ, ಮನುಷ್ಯರು ವಾಸಮಾಡಲು ಯೋಗ್ಯವಲ್ಲದ ಜಾಗದಲ್ಲಿ ಕೊರಗುತ್ತಾ, ಕೆಮ್ಮುತ್ತಾ ಮಲಗಿದ್ದ ಮುದುಕನನ್ನು ಕಂಡು ಮಮ್ಮಲ ಮರುಗಿದ ಬಸವಣ್ಣ. ಊರ ಜನರ ಸೇವೆಗೆ ತೆರಳಿದ್ದ ಹೊಲೆಯರ ಗಂಡು ಹೆಣ್ಣುಗಳು ಹಿಂದಿರುಗಿ ಬರುವ ಮುಂಚೆ ಭಾರವಾದ ಮನಸ್ಸು ಹೊತ್ತು ಹೊಲಗೇರಿಯಿಂದ ನಿರ್ಗಮಿಸಿ ಬ್ರಾಹ್ಮಣ ಕೇರಿ ಸೇರಿದ. ಮರುದಿನ ಮುಂಜಾನೆ ಹೊತ್ತಿಗೆ ಅದು ಹೇಗೋ ಬಸವಣ್ಣ ಹೊಲಗೇರಿ ಹೊಕ್ಕುಬಂದ ಸುದ್ದಿ ಬ್ರಾಹ್ಮಣ ಕೇರಿಯ ಸಮಸ್ತರಿಗೂ ತಿಳಿದುಹೋಯ್ತು. ಸೂತಕದ ಜೋಲುಮುಖ ಹೊತ್ತ ಬ್ರಾಹ್ಮಣ ಗಂಡಸರು, ಹೆಂಗಸರು, ಮಕ್ಕಳು, ಮರಿ ಸಹಿತ ಪುರವರಾಧೀಶ ಮಾದರಸರ ಮನೆಯ ಮುಂದೆ ನಿಂತು, ಬ್ರಾಹ್ಮಣ್ಯ ಹಾಳಾಯ್ತು ಎಂದು ಬೊಬ್ಬೆ ಹೊಡೆಯಲಾರಂಭಿಸಿ, ನ್ಯಾಯಕ್ಕಾಗಿ ಬೇಡಿಕೆ ಇಟ್ಟರು. ಮಾದರಸರು ಮನೆ ಮುಂದೆ ನಿಂತು ಕೂಗಾಡುತ್ತಿದ್ದ ಎಲ್ಲರನ್ನೂ ಸಮಾಧಾನಗೊಳಿಸಿ, ಬಸವಣ್ಣ ಇನ್ನೂ ಚಿಕ್ಕವ. ಬ್ರಾಹ್ಮಣ್ಯ ಎಂದರೇನೆಂದು ಅರಿಯದ ವಯಸ್ಸು. ಬ್ರಾಹ್ಮಣ ಜಾತಿಯಲ್ಲಿ ಜನ್ಮಿಸಿದರೂ ಉಪನಯನ ಸಂಸ್ಕಾರವಿಲ್ಲದ (ಯಜ್ಞೋಪವೀತ, ಜನಿವಾರ) ಧರಿಸದ ಯಾರೆ ಆದರೂ ಬ್ರಾಹ್ಮಣನಾಗಲಾರ. ಬಸವಣ್ಣನಿಗೆ ಇನ್ನೂ ಉಪನಯನ ಸಂಸ್ಕಾರವಾಗಿಲ್ಲ ಮತ್ತು ಯಜ್ಞೋಪವೀತ (ಜನಿವಾರ) ಧಾರಣೆಯೂ ಆಗಿಲ್ಲ. ಸನಾತನ ಧರ್ಮದ ಮನುಸ್ಮೃತಿ ಮತ್ತು ಶಾಸ್ತ್ರದನ್ವಯ, ಚಾತುರ್ವರ್ಣದ ಯಾವುದೇ ವರ್ಗಕ್ಕೆ ಸೇರದವನಾಗಿರುವುದರಿಂದ ಅವನು ಹೊಲಗೇರಿಗೆ ಹೋಗಿ ಬಂದದ್ದರಲ್ಲಿ ತಪ್ಪೇನೂ ಇಲ್ಲ. ಮುಂದಿನ ವಾರ ಅವನ ಉಪನಯನ ಮತ್ತು ಜನಿವಾರ ಧಾರಣಾ ಸಮಾರಂಭವನ್ನು ಏರ್ಪಡಿಸಲಾಗಿದೆ. ತಾವೆಲ್ಲರೂ ತಪ್ಪದೆ ಸಮಾರಂಭಕ್ಕೆ ಆಗಮಿಸಿ ವಟುವನ್ನು ಆಶೀರ್ವದಿಸಿ, ಶುಭಕೋರಿ, ಫಲ ತಾಂಬೂಲ ಸ್ವೀಕರಿಸಿ, ದಕ್ಷಿಣೆಯೊಂದಿಗೆ ಭೋಜನ ಸ್ವೀಕರಿಸಿ ಹೋಗಲು ಆಹ್ವಾನಿಸುತ್ತೇನೆ ಎಂದ ಮಾದರಸರು ಎಲ್ಲರನ್ನೂ ಬೀಳ್ಕೊಟ್ಟರು. ಬೂರಿಭೋಜನ ಮತ್ತು ದಕ್ಷಿಣೆಯ ಆಸೆಯಿಂದ ಬಂದಿದ್ದ ಎಲ್ಲ ಬ್ರಾಹ್ಮಣರು ಬ್ರಾಹ್ಮಣ್ಯ ಮರೆತು ಮನೆ ಸೇರಿದರು.

ಒಂದು ಶುಭ ದಿನದಂದು ಬಸವಣ್ಣನ ಉಪನಯನ ಸಮಾರಂಭ ಬ್ರಾಹ್ಮಣ ಕೇರಿಯ ಎಲ್ಲಾ

ಬ್ರಾಹ್ಮಣ ಗಂಡು, ಹೆಣ್ಣು, ಮಕ್ಕಳು, ಮರಿಗಳ ಸಮ್ಮುಖದಲ್ಲಿ ವೈಭವದಿಂದ ಪ್ರಾರಂಭವಾಗಿ, ಮಹೋತ್ಸವದ ವಿವಿಧ ಪೂಜಾವಿಧಿಗಳೆಲ್ಲಾ ಮುಗಿದ ನಂತರ, ಹೋಮಕುಂಡದ ಮುಂದಿನ ಆಸನದಲ್ಲಿ ಬಸವಣ್ಣನನ್ನು ಕೂರಿಸಿ ಉಪನಯನ ಸಂಸ್ಕಾರದ ಅಂತ್ಯದ ಬಹುಮುಖ್ಯ ವಿಧಿಯಾದ ಯಜ್ಞೋಪವೀತ ಧಾರಣೆ ಮತ್ತು ಮಂತ್ರಬೋಧನೆಗಾಗಿ ಪುರೋಹಿತರು ಸಜ್ಜಾದರು. ಜನಿವಾರ ಧಾರಣಾಪೂರ್ವ ವಿಧಿವಿಧಾನಗಳೆಲ್ಲ ಮುಗಿದ ನಂತರ ಪುರೋಹಿತರು ಬಸವಣ್ಣನ ಕೊರಳಿಗೆ ಜನಿವಾರ ತೊಡಿಸಲು ಅನುವಾದಾಗ, ಬಸವಣ್ಣನ ಸಹಜಪ್ರಜ್ಞೆಯು ಜಾಗೃತವಾಗಿ, ಜನಿವಾರ ತೊಡಿಸಲು ಬಂದ ಪುರೋಹಿತರನ್ನು ತಡೆದು, ನನಗಿಂತ ಹಿರಿಯಳಾದ ಅಕ್ಕ ನಾಗಮ್ಮನಿಗೆ ಮೊದಲು ಉಪನಯನ ಸಂಸ್ಕಾರ ಮತ್ತು ಯಜ್ಞೋಪವೀತ (ಜನಿವಾರ) ಧಾರಣೆಯಾಗಲಿ ಆನಂತರ ಅವಳಿಗಿಂತ ಕಿರಿಯನಾದ ನನಗೆ ಆಗಲಿ ಎಂದು ಕುಳಿತಿದ್ದ ಆಸನದಿಂದ ಮೇಲೆದ್ದು ನಿಂತ ಬಸವಣ್ಣ. ಬಸವಣ್ಣನ ಅನಿರೀಕ್ಷಿತ ನಡೆಯಿಂದ ಸ್ತಂಭೀಭೂತರಾಗಿ ಎದ್ದುನಿಂತ ಪುರೋಹಿತರು, ಸನಾತನ ಧರ್ಮದ ಮನು ಮಹರ್ಷಿ ಸ್ಮೃತಿ ಶಾಸ್ತ್ರದ ಪ್ರಕಾರ ಹೆಣ್ಣು ಬ್ರಾಹ್ಮಣಳಾಗಿ ಹುಟ್ಟಿದ್ದರೂ ಅವಳಿಗೆ ಉಪನಯನ ಸಂಸ್ಕಾರ ಕೊಡಲಾಗದು. ಉಪನಯುನ ಸಂಸ್ಕಾರವಿಲ್ಲದೆ ಉಜ್ಞೋಪವೀತ ಧಾರಣೆಯಾಗದು, ಮಗು ಶಾಸ್ತ್ರದನ್ವಯ ನಿಶಿದ್ಧ ಎಂದರು. ಪುರೋಹಿತರು ಹೇಳಿದ್ದನ್ನು ಕೇಳಿದ ಬಸವಣ್ಣ ಕೆರಳಿ ಸಿಡಿದೆದ್ದು ಅವನ್ಯಾವನ್ರಿ ಮನು, ಏನ ನ್ಯಾಯ ಹೇಳಿದ್ದಾನೆ, ಗಂಡಿಗೊಂದು ನ್ಯಾಯ, ಹೊಲೆಯರಿಗೊಂದು ನ್ಯಾಯ. ಧರ್ಮ ಎಂದಮೇಲೆ ಎಲ್ಲರಿಗೂ ಒಂದೇ ಇರಬೇಕಲ್ಲವೇನ್ರಿ. ಬಸವಣ್ಣನ ಮಾತಿನಿಂದ ಪೆಚ್ಚಾಗಿ ನಿಂತ ಪುರೋಹಿತರಿಗೆ ಏನು ಮಾಡಬೇಕೆಂದೇ ಹೊಳೆಯದಾದಾಗ ಕೊನೆಯ ಅಸ್ತ್ರವಾಗಿ ನೀನು ಹೀಗೆಲ್ಲಾ ಸನಾತನ ಧರ್ಮದ ಮನು ಮಹರ್ಷಿಯನ್ನು ಹೀಯಾಳಿಸಿ ಅವಮಾನಿಸಿದರೆ ನಿನ್ನನ್ನು ಬ್ರಾಹ್ಮಣ್ಯದಿಂದ ಬಹಿಷ್ಕರಿಸಲಾಗುವುದು ಎಂದು ಹೆದರಿಸಿದರು. ಅದಕ್ಕೂ ಅಂಜದ ಬಸವಣ್ಣ, ಬ್ರಾಹ್ಮಣನಾಗಲೀ, ಹೊಲೆಯನಾಗಲೀ, ಗಂಡಾಗಲೀ, ಹೆಣ್ಣಾಗಲೀ ಅವರವರ ಒಳಗಿರುವ ಆತ್ಮ ಒಂದೇ ಅಲ್ಲವೇನ್ರೀ. ಬೇರೆ ಬೇರೆ ಎಂದು ತಿಳಿದು ಬ್ರಾಹ್ಮಣ್ಯ ಶ್ರೇಷ್ಠ ಎಂದು ಹೇಳುವ ನಿಮ್ಮ ಬ್ರಾಹ್ಮಣ್ಯಕ್ಕೆ ನಾನೇ ಬಹಿಷ್ಕಾರ ಹಾಕುತ್ತೇನೆ ಎನ್ನುತ್ತಾ ತಂದೆ, ತಾಯಿ, ಬಂಧು, ಬಳಗ, ಹುಟ್ಟಿದ ಊರು, ಕೇರಿ ತೊರೆದು ನಿರ್ಗಮಿಸಿದ. ಮೂಕವಿಸ್ಮಿತರಾಗಿ ಬೆಪ್ಪಾಗಿ ನೋಡುತ್ತಾ ನಿಂತರು ನೆರೆದಿದ್ದ ಬ್ರಾಹ್ಮಣರು.

ಕನ್ನಡ ನಾಡಿನ ಉತ್ತರ ಭಾಗದ ಜೀವ ನದಿಗಳೆಂದೇ ಕರೆಯಲಾಗುವ ಕೃಷ್ಣಾ ಮತ್ತು ಮಲಪ್ರಭಾ ನದಿಗಳೆರಡು ಒಂದನ್ನೊಂದು ಕೂಡುವ ಸಂಗಮನಾಥನ ದಿವ್ಯಕ್ಷೇತ್ರ ಕೂಡಲಸಂಗಮ. ಸನಾತನ ಶೈವಧರ್ಮದ ಎರಡು ಕವಲುಗಳಲ್ಲಿ ಒಂದಾದ ಆಗಮೋಕ್ತ ಶೈವಧರ್ಮದ ನಾಲ್ಕು ಶಾಖೆಗಳಲ್ಲಿ ಕಾಳಾಮುಖ ಶಾಖೆಯ ನಾಥಪಂಥಕ್ಕೆ ಸೇರಿದ ಈ ಕ್ಷೇತ್ರದ ಧರ್ಮಾಧಿಕಾರಿಗಳಾಗಿದ್ದರು ಶ್ರೀ ಶಿವಯೋಗಿ ಈಶಾನ್ಯರು. ಕೂಡಲಸಂಗಮ ಸಂಗಮನಾಥನ ಕಾರಣದಿಂದ ಪ್ರಸಿದ್ಧ ಯಾತ್ರಾ ಸ್ಥಳವಾಗಿದ್ದರೂ, ಬಹುದೊಡ್ಡ ವಿದ್ಯಾಕೇಂದ್ರವಾಗಿ ಹೆಸರು ಗಳಿಸಿತ್ತು. ಸಂಗಮನಾಥ ವಿಶ್ವವಿದ್ಯಾಲಯದ (ಘಟಿಕಾ ಸ್ಥಾನ) ಅಡಿ ಸಾಮಾನ್ಯ ಜ್ಞಾನ, ಶಾಸ್ತ್ರ ಮುಂದಾಗಿ, ಸಮಾಜ ಶಾಸ್ತ್ರ, ರಾಜಕೀಯ ಶಾಸ್ತ್ರ, ಗಣಿತ ಶಾಸ್ತ್ರ, ತತ್ವಶಾಸ್ತ್ರ ಮೊದಲಾದ ಅನೇಕ ಶಾಸ್ತ್ರಗಳ ಪ್ರಾಥಮಿಕ ಹಂತದಿಂದ ಉನ್ನತಮಟ್ಟದವರೆಗೆ ಶಿಕ್ಷಣ ನೀಡಲಾಗುತ್ತಿತ್ತು. ಕ್ಷೇತ್ರದ ಧರ್ಮಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಈಶಾನ್ಯ ಗುರುಗಳು ಸಂಗಮನಾಥ ವಿಶ್ವವಿದ್ಯಾಲಯುದ ಕುಲಪತಿಗಳಾಗಿ, ತತ್ವಶಾಸ್ತ್ರ ಮಹಾವಿದ್ಯಾಲಯದ ಪ್ರಾಚಾರ್ಯರೂ ಆಗಿದ್ದರು. ಇಲ್ಲಿ ದೊರೆಯುತ್ತಿದ್ದ ಉಚ್ಚಮಟ್ಟದ ಶಿಕ್ಷಣದಿಂದಾಗಿ ನಾಡಿನಾದ್ಯಂತದಿಂದ ಶಿಕ್ಷಣಾರ್ಥಿಗಳು ಬರುತ್ತಿದ್ದುದು ಸಾಮಾನ್ಯವಾಗಿತ್ತು. ಶ್ರೀ ಶಿವಯೋಗಿ ಈಶಾನ್ಯ ಗುರುಗಳ ದಕ್ಷ ನೇತೃತ್ವದಿಂದಾಗಿ ಸಂಗಮನಾಥ ಕ್ಷೇತ್ರ ಹಾಗೂ ವಿಶ್ವವಿದ್ಯಾಲಯ ನಾಡಿನ ಆಳರಸರ ಮತ್ತು ಜನಸಾಮಾನ್ಯರ ಮೆಚ್ಚುಗೆ ಗಳಿಸಿ, ಆರ್ಥಿಕ ಸಹಾಯ ಹರಿದುಬರುತ್ತಿತ್ತು. ಒಂದು ದಿನ ಶ್ರೀ ಶಿವಯೋಗಿ ಈಶಾನ್ಯ ಗುರುಗಳು ತಮ್ಮ ಗೃಹದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಎಂಟು ವರ್ಷಗಳ ಹಿಂದಿನ ಘಟನೆಯೊಂದು ನೆನಪಾಗಿ ನೆನೆಯತೊಡಗಿದರು. ಆ ದಿನ ಧ್ಯಾನಾವಸ್ಥೆಯಲ್ಲಿ ಆಳವಾಗಿ ಮುಳುಗಿದ್ದಾಗ ಕಂಡ ದೃಶ್ಯದಿಂದ ಎಚ್ಚರಗೊಂಡ ಶಿವಯೋಗಿ ಈಶಾನ್ಯ ಗುರುಗಳು ಬಾಗೇವಾಡಿ ಪುರದತ್ತ ನಡೆದು, ಪುರವರಾಧೀಶ ಮಾದರಸರ ಮನೆಯ ಮುಂದೆ ನಿಂತು 'ಓಂ ನಮಃ ಶಿವಾಯ' ಮಂತ್ರ ಘೋಷಣೆ ಮಾಡಿದ್ದು, ಮನೆಯೊಳಗಿದ್ದ ಮಾದರಸ ದಂಪತಿಗಳು ಹೊರಗೆ ಬಂದು ಶಿವಯೋಗಿಗಳನ್ನು ಭಕ್ತಿ ಗೌರವದಿಂದ ಬರಮಾಡಿಕೊಂಡು, ಹಿಂದಿನ ದಿನ ಹುಟ್ಟಿದ ತಮ್ಮ ಗಂಡುಮಗು ಕಣ್ಣುಮುಚ್ಚಿ ಉಸಿರಾಡುವುದೊಂದನ್ನು ಬಿದು ದೇಹದ ಚಲನೆ ಇಲ್ಲದೆ ಕೊರಡಿನಂತೆ ಮಲಗಿದ್ದ ತಮ್ಮ ಮಗುವನ್ನು ತೋರಿಸುತ್ತಾ ದುಃಖಿಸತೊಡಗಿದ್ದು, ಶಿವಯೋಗಿ ಈಶಾನ್ಯ ಗುರುಗಳು ಮಗುವಿನ ಹಣೆಗೆ ವಿಭೂತಿ ಧರಿಸಿ, ಓಂ ನಮಃ ಶಿವಾಯ ಮಂತ್ರ ಪಠಿಸುತ್ತ ಮೈಮೇಲೆ ಕೈಯಾಡಿಸುತ್ತಾ ಏಳು ಮಗು ಇನ್ನೂ ಎಷ್ಟು ಹೊತ್ತು ಯೋಗಧ್ಯಾನಾವಸ್ಥೆಯಲ್ಲಿರುವೆ ಎನ್ನುತ್ತಾ ಓಂ

ನಮಃ ಶಿವಾಯ ಮಂತ್ರ ಮೂರು ಸಾರಿ ಪಠಿಸುವುದರೊಳಗಾಗಿ ಮಗು ಎಚ್ಚರಗೊಂಡು ಅಳಲು ಪ್ರಾರಂಭಿಸಿದ್ದು, ಮಗುವಿಗೆ ಎಂಟು ವರ್ಷ ತುಂಬಲು ಅವನನ್ನು ಕೂಡಲಸಂಗಮ ಕ್ಷೇತ್ರದ ಶಿಕ್ಷಣ ಸಂಸ್ಥೆಗೆ ಸೇರಿಸಲು ಹೇಳಿ ಅಲ್ಲಿಂದ ನಿರ್ಗಮಿಸಿದ್ದು, ತಮ್ಮ ಸ್ಮೃತಿ ಪಟಲದಲ್ಲಿ ಹಾದುಹೋದಂತಾಗಿ, ಎಚ್ಚರಗೊಂಡ ಶಿವಯೋಗಿ ಈಶಾನ್ಯ ಗುರುಗಳು ಬ್ರಾಹ್ಮಣ್ಯಕ್ಕೇ ಬಹಿಷ್ಕಾರ ಹಾಕಿ ಬಾಗೇವಾಡಿ ಪುರದಿಂದ ನಿರ್ಗಮಿಸಿದ ಬಸವಣ್ಣ ಬಂದು ಸೇರಿದ್ದು ಕೂಡಲಸಂಗಮಕ್ಷೇತ್ರದ ಸಂಗಮನಾಥನ ಸನ್ನಿಧಿಗೆ. ಸಂಗಮದಲ್ಲಿ ಮಿಂದು ಶುಚಿರ್ಭೂತನಾಗಿ ಸಂಗಮನಾಥನ ದರ್ಶನ ಪಡೆದ ಎಂಟು ವರ್ಷ ವಯಸ್ಸಿನ ಬಾಲಕ ಬಸವಣ್ಣ ಶ್ರೀ ಶಿವಯೋಗಿ ಈಶಾನ್ಯ ಗುರುಗಳ ದರ್ಶನಕ್ಕಾಗಿ ಸರತಿ ಸಾಲಿನಲ್ಲಿ ಕಾದುನಿಂತ. ಗುರುಗಳ ಪಾದಕ್ಕೆರಗಿ ಕೈಮುಗಿದು ನಿಂತ ಬಾಲಕನನ್ನು ನೋಡಿದ ಗುರುಗಳು, ಅವನ ದೇಹದ ನಿಲುವು, ಮುಖಭಾವ, ತೇಜಸ್ಸು ನೋಡಿ ಬೆರಗಾಗಿ 'ಮಗು ನೀನಾರು' ಎಂದರು. ಬಸವಣ್ಣ ಭಕ್ತಿಯಿಂದ ತನ್ನನ್ನು ಪರಿಚಯಿಸಿಕೊಂಡು, ನಡೆದ ಸಂಗತಿಯನ್ನು ಸವಿಸ್ತಾರವಾಗಿ ಹೇಳಿ, ತನಗೆ ಆಶ್ರಯ ಕೊಡಲು ಭಕ್ತಿಯಿಂದ ಬೇಡಿಕೊಂಡು ಮುಂಜಾನೆ ಧ್ಯಾನಾಸಕ್ತರಾಗಿದ್ದಾಗ ಮರುಕಳಿಸಿದ ಎಂಟು ವರ್ಷಗಳ ಹಿಂದಿನ ಘಟನೆ ಇಂದು ಸಾಕಾರಗೊಳ್ಳುತ್ತಿರುವುದರಿಂದ ಸಂತೋಷಗೊಂಡ ಈಶಾನ್ಯ ಗುರುಗಳು, ಒಬ್ಬ ಮಹಾಪುರುಷನಾಗುವವನನ್ನು ರೂಪುಗೊಳಿಸುವ ಭಾಗ್ಯ ತನ್ನದಾಗುತ್ತಿರುವುದಕ್ಕಾಗಿ ಹರ್ಷಗೊಂಡರು.

ಶ್ರೀ ಶಿವಯೋಗಿ ಈಶಾನ್ಯ ಗುರುಗಳ ಕಣ್ಗಾವಲಿನಲ್ಲಿ ಅಕ್ಷರಾಭ್ಯಾಸದಿಂದ ಪ್ರಾರಂಭವಾದ ಬಸವಣ್ಣನ ಶಿಕ್ಷಣ, ಅವನ ಹದಿನೈದನೆ ವಯಸ್ಸಿನಲ್ಲಿ ಪ್ರೌಢಶಿಕ್ಷಣ ವಿದ್ಯಾರ್ಥಿಯಾಗಿ, ಆಗಮೋಕ್ತ ಶೈವಧರ್ಮದ ತತ್ವಸಿದ್ಧಾಂತ, ನೀತಿ ನಿಯಮಗಳ ಪ್ರಾರಂಭಿಕ ಹಂತದ ಶಿಕ್ಷಣದ ಅಂಗವಾಗಿ, ಆಗಮಶಾಸ್ತ್ರ ಪದ್ಧತಿಯ ಧಾರ್ಮಿಕ ಪೂಜಾ ವಿಧಿವಿಧಾನಗಳನ್ನು ಅರಿತುಕೊಳ್ಳಬೇಕೆಂಬ ಉದ್ದೇಶದಿಂದ, ಸಂಗಮನಾಥನ ಮುಖ್ಯ ಅರ್ಚಕರ ಸಹಾಯಕನನ್ನಾಗಿ ಬಸವಣ್ಣನನ್ನು ನೇಮಿಸಿದರು. ತನ್ನ ಸಾಮಾನ್ಯ ಶಿಕ್ಷಣದ ಜೊತೆಗೆ ಪೂಜಾ ವಿಧಿವಿಧಾನಗಳನ್ನು ಕಲಿಯತೊಡಗಿ ವರ್ಷಗಳ ನಂತರ, ಒಂದು ದಿನ ಬಡ ರೈತನೊಬ್ಬ ದುಃಖಿತನಾಗಿ ಜೋಲುಮುಖ ಹೊತ್ತು ಮುಖ್ಯ ಅರ್ಚಕರನ್ನು ಕಂಡು ತನ್ನ ಅಳಲನ್ನು ತೋಡಿಕೊಳ್ಳ ತೊಡಗಿದ್ದನ್ನು ಮರೆಯಲ್ಲಿ ನಿಂತು ಕಿವಿಗೊಟ್ಟು ಕೇಳಿಸಿಕೊಂಡ. ಬಡರೈತ ತನ್ನ ಹೊಲದಿಂದ ಚಕ್ಕಡಿಯಲ್ಲಿ ತುಂಬಿಕೊಂಡು ಮನೆಕಡೆ ಹೊರಟಾಗ ದಾರಿಗಡ್ಡಲಾಗಿ ಬಂದ ಬೆಕ್ಕೊಂದು ಚಕ್ರಕ್ಕೆ ಸಿಕ್ಕು ಸತ್ತೇಹೋಗಿತ್ತು. ಬೆಕ್ಕು ಸಾಯಿಸುವುದು ಮಹಾಪಾಪವೆಂದರಿತ ಬಡರೈತ. ಪಾಪ ಪರಿಹಾರ ಕೋರಿ ಮುಖ್ಯ ಅರ್ಚಕರಲ್ಲಿ ಮೊರೆಹೋದ. ಮುಖ್ಯ ಅರ್ಚಕರು ಪಾಪಪ್ರಜ್ಞೆಯಿಂದ ಹೆದರಿ ಕಂಗಾಲಾಗಿದ್ದ ಬಡ ರೈತನನ್ನು ಇನ್ನಷ್ಟು ಹೆದರಿಸುತ್ತಾ, ಬೆಕ್ಕು ಸಾಯಿಸಿದವನಿಗೆ ರೌರವ ನರಕ ತಪ್ಪದು. ನೀನು ಮಹಾಪಾಪ ಮಾಡಿದ್ದೀಯ, ನಿನಗೆ ನರಕವೇ ಗತಿ ಎಂದರು. ಈ ಮಹಾಪಾಪ ಪರಿಹಾರವಾಗಬೇಕೆಂದರೆ ಸತ್ತ ಬೆಕ್ಕಿನ ಗಾತ್ರದ ಚಿನ್ನದ ಗೊಂಬೆ ಮಾಡಿ, ಸಂಗಮನಾಥನಿಗೆ ಅರ್ಪಿಸಿ, ನನ್ನಂತ ಶ್ರೇಷ್ಠ ಬ್ರಾಹ್ಮಣೋತ್ತಮನಿಗೆ ದಾನವಾಗಿ ಕೊಡಬೇಕು ಎಂಬ ಮುಖ್ಯ ಅರ್ಚಕ. ಸ್ವಾಮಿ ನಾನು ಬಡವ, ಚಿನ್ನದ ಬೆಕ್ಕು ನನ್ನಿಂದಾಗದು ಎಂದ. ಬೆಳ್ಳಿಯಲ್ಲಿ ಮಾಡಿದ ಬೆಕ್ಕಿನ ಗೊಂಬೆಯನ್ನಾದರೂ ದಾನ ಮಾಡಬೇಕೆಂದರು ಅರ್ಚಕರು. ಅದೂ ಸಹ ನನ್ನಿಂದಾಗದು ಎಂದ ಬಡರೈತನ ಮಾತು ಕೇಳಿ ಕೋಪದಿಂದ ಕೆಂಡಾಮಂಡಲನಾದ ಮುಖ್ಯ ಅರ್ಚಕ ಬಡರೈತನನ್ನು ಗುಡಿಯಿಂದ ಹೊರದಬ್ಬಿದ. ಇದನ್ನೆಲ್ಲಾ ಮರೆಯಲ್ಲಿ ನಿಂತು ಕೇಳಿಸಿಕೊಳ್ಳುತ್ತಿದ್ದ ಬಸವಣ್ಣ ಗುಡಿಯಿಂದ ಹೊರನಡೆದ ಬಡರೈತನ್ನು ಹಿಂಬಾಲಿಸಿ ತಡೆದು ನಿಲ್ಲಿಸಿ, ಹೆದರಬೇಡ ನೀನು ಮಾಡಿರುವ ಪಾಪಕ್ಕೆ ನಾನು ಪರಿಹಾರ ಕೊಡಿಸುತ್ತೇನೆ. ನನ್ನ ಜೊತೆ ಬಾ ಎಂದು ಕೈಹಿಡಿದು ಕರೆದೊಯ್ದು, ನದಿಯ ದಂಡೆಯ ಹಸಿ ಮಣ್ಣನ್ನು ನಾದು ತರಲು ಸೂಚಿಸಿದ. ನದಿಯ ನೀರಿನಲ್ಲಿ ಜಳಕ ಮಾಡಿ, ದಡದಲ್ಲಿ ಬೆಳೆದು ನಿಂತ ಕಣಗಿಲೆ ಗಿಡದ ಹೂವುಗಳನ್ನು ಬೊಗಸೆ ತುಂಬ ತರಲು ರೈತನನ್ನು ಕಳುಹಿಸಿ, ಹಿಂದಿರುಗಿ ಬರುವುದರೊಳಗಾಗಿ ಬೆಕ್ಕಿನ ಗಾತ್ರದ ಮಣ್ಣಿನ ಗೊಂಬೆ ಮಾಡಿ, ರೈತನನ್ನು ಕರೆದುಕೊಂಡು ಸಂಗಮನಾಥನ ಗರ್ಭಗುಡಿಯೊಳಗೊಕ್ಕು, ಹರಿದು ತಂದ ಕಣಗಿಲೆ ಹೂವನ್ನು ಲಿಂಗದ ಮೇಲೆ ಭಕ್ತಿಯಿಂದ ಇಡಲು ಹೇಳಿ, ಮಣ್ಣಿನಲ್ಲಿ ಮಾಡಿದ ಬೆಕ್ಕಿನ ಬೊಂಬೆಯನ್ನು ಲಿಂಗದ ಮುಂದಿರಿಸಿ, 'ಸಂಗಮೇಶಾ ಈ ಬಡರೈತ ತಿಳಿದೋ ತಿಳಿಯದೆಯೋ ಒಂದು ಬೆಕ್ಕಿನ ಸಾವಿಗೆ ಕಾರಣನಾಗಿದ್ದಾನೆ. ಅರಿಯದೇ ಆದ ತಪ್ಪನ್ನು ಮನ್ನಿಸಿ ಕ್ಷಮಿಸಲು ರೈತನ ಪರವಾಗಿ ನಾನು ಬೇಡುತ್ತಿದ್ದೇನೆ' ಎಂದು ಶ್ಲೋಕದ ರೂಪದಲ್ಲಿ ಮಂತ್ರ ಹೇಳುವಂತೆ ರಾಗವಾಗಿ, ರೈತನ ಮುಗ್ಧ ಮನಸ್ಸಿಗೆ ನಾಟುವಂತೆ ಹೇಳಿದ ಬಸವಣ್ಣ, ರೈತನನ್ನು ಕುರಿತು 'ದೇವರು, ನೀನು ಮಾಡಿರುವ ಪಾಪವನ್ನು ಪರಿಹರಿಸಿದ್ದಾನೆ, ಧೈರ್ಯವಾಗಿ ಮನೆಗೆ ಹೋಗು' ಎಂದು ಕಳುಹಿಸಿ ಕೊಡುತ್ತಾನೆ. ಬಸವಣ್ಣನಿಂದಾದ ಈ ಕೃತ್ಯದಿಂದ ಬೇಸರಗೊಂಡ ಮುಖ್ಯ ಅರ್ಚಕ ಸಂಗಮನಾಥ

ದೇವಾಲಯ ಸಂಕೀರ್ಣದ ಪರಿವಾರ ದೇವರುಗಳ ಅರ್ಚಕರ ಗುಂಪು ಕೂಡಿಸಿ, ಬಸವಣ್ಣನನ್ನು ವಾಚಾಮಗೋಚರವಾಗಿ ನಿಂದಿಸುತ್ತಾ, ಒಬ್ಬ ಶೂದ್ರ ಕುಲದ ರೈತನನ್ನು ದೇವರ ಗರ್ಭಗುಡಿಯೊಳಗೆ ಕರೆದೊಯ್ದು ಅವನ ಕೈಯಿಂದಲೇ ಪೂಜಿಸಿದ್ದು, ದೇವಾಲಯ ಅಪವಿತ್ರವಾಗಲು ಕಾರಣನಾಗಿ, ನಮ್ಮ ಆದಾಯಕ್ಕು ಕಲ್ಲು ಹಾಕಿದ್ದಾನೆ ಎಂದು ಜೋರಾದ ಧ್ವನಿಯಲ್ಲಿ ಬೊಬ್ಬೆ ಹಾಕತೊಡಗಿದರು. ದೇವಸ್ಥಾನದೊಳಗೆ ಆಗುತ್ತಿದ್ದ ಗಲಾಟೆಯನ್ನು ಕೇಳಿಸಿಕೊಂಡ, ವಿಶ್ರಾಂತಿ ಪಡೆಯುತ್ತಿದ್ದ ಶ್ರೀ ಶಿವಯೋಗಿ ಈಶಾನ್ಯ ಗುರುಗಳು ಗಾಬರಿಗೊಂಡು ಬಂದು ವಿಚಾರಿಸಲು, ಮುಖ್ಯ ಅರ್ಚಕನಿಂದಾದ ಕುತಂತ್ರದ ಅರಿವಾಗಿ 'ಬಸವಣ್ಣ ಮಾಡಿದ್ದು ಸರಿಯಾಗಿದೆ' ಎಂದು ತೀರ್ಪು ನೀಡಿ, ಅರ್ಚಕರುಗಳಿಗೆಲ್ಲಾ ಛೀಮಾರಿ ಹಾಕಿ, ಬಸವಣ್ಣನು ಮಾಡಿದ ಕಾರ್ಯಕ್ಕೆ ಮೆಚ್ಚುಗೆ ಸೂಚಿಸಿ, ಇನ್ನುಮುಂದೆ ಇಂತಹ ತಪ್ಪುಗಳು ನಡೆಯಕೂಡದು ಎಂದು ಎಚ್ಚರಿಸಿ ನಡೆದರು. ಸಂಗಮನಾಥ ದೇವಾಲಯ ಸಮುಚ್ಛಯಗಳಲ್ಲಿ ದೇವರ ಕೃಪೆಗಾಗಿ ಬರುವ ಭಕ್ತರ ಮೇಲೆ ಅರ್ಚಕರುಗಳಿಂದಾಗುತ್ತಿದ್ದ ದರ್ಪದೌರ್ಜನ್ಯ, ಅಹಂಕಾರ, ಶೋಷಣೆಗಳನ್ನು ನೋಡುತ್ತಾ ಬಂದ ಬಸವಣ್ಣ, ಇದಕ್ಕೆ ತಡೆಯೊಡ್ಡಿ, ಬಂದ ಭಕ್ತರು ದೇವರ ಮೇಲೆ ಇಟ್ಟ ಭಕ್ತಿಗೌರವಗಳಿಗೆ ಚ್ಯುತಿ ಬರದ ಹಾಗೆ ಏನಾದರೂ ಮಾಡಬೇಕೆಂದು ಚಿಂತಿಸತೊಡಗಿದ.

ಬಸವಣ್ಣನಿಗೀಗ ಹದಿನಾರು ವರ್ಷ ವಯಸ್ಸು. ಪ್ರೌಢಶಿಕ್ಷಣ ಮುಗಿದು ಮುಂದಿನ ಪದವಿ ಶಿಕ್ಷಣಕ್ಕೆ ಅಣಿಯಾಗಿದ್ದಾನೆ. ಶ್ರೀ ಶಿವಯೋಗಿ ಈಶಾನ್ಯ ಗುರುಗಳ ಆಣತಿಯಂತೆ ಸಮಾಜಶಾಸ್ತ್ರ, ಶೈವಧರ್ಮ ತತ್ವಸಿದ್ಧಾಂತ ಮತ್ತು ನೀತಿಶಾಸ್ತ್ರ ಜೊತೆಗೆ ರಾಜಕೀಯ ಶಾಸ್ತ್ರಗಳಲ್ಲಿ ನೈಪುಣ್ಯತೆ ಹೊಂದಲು ಮಹಾವಿದ್ಯಾಲಯಕ್ಕೆ ಪ್ರವೇಶ ದೊರಕಿಸಿಕೊಂಡ. ಐದು ವರ್ಷಗಳ ಅವಧಿಯಲ್ಲಿ ಅಧ್ಯಯನಕ್ಕೆ ಆರಿಸಿಕೊಂಡ ಎಲ್ಲಾ ಶಾಸ್ತ್ರಗಳಲ್ಲಿಯೂ ವಿಶ್ವವಿದ್ಯಾಲಯಕ್ಕೆ ಮೊದಲನೆಯವನಾಗಿ ತೇರ್ಗಡೆಯಾಗಿ, ತನ್ನ ಇಪ್ಪತ್ತೊಂದನೇ ವಯಸ್ಸಿನಲ್ಲಿ ಘನವಿದ್ವಾಂಸನಾಗಿ, ಶ್ರೀಗುರು ಶಿವಯೋಗಿ ಈಶಾನ್ಯರ ಆಶೀರ್ವಾದ ಮತ್ತು ಆದೇಶ ಪಡೆದು, ಸಂಗಮನಾಥನಿಗೆ ನಮಿಸಿ ಕೂಡಲಸಂಗಮ ಕ್ಷೇತ್ರದಿಂದ ಹೊರನಡೆದ.

ಶ್ರೀ ಶಿವಯೋಗಿ ಈಶಾನ್ಯರ ಆಶೀರ್ವಾದ ಮತ್ತು ಆದೇಶ ಹೊತ್ತು ಜೀವನ ನಿರ್ವಹಣೆಗಾಗಿ ದುಡಿಯಲು ಮಂಗಳವೇಡೆ ಮಂಡಲಾಧಿಪತಿ ಬಿಜ್ಜಳ ಭೂಪಾಲನಲ್ಲಿ ಮೊರೆಹೋದ ಬಸವಣ್ಣ. ಚಾಲುಕ್ಯ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯ ಅನೇಕ ಮಂಡಲಗಳಲ್ಲಿ ಬಹುದೊಡ್ಡ ಮಂಡಲವಾದ ಮಂಗಳವೇಡೆ ಮಹಾಮಂಡಲದ ಆಡಳಿತ ಕಾರ್ಯಾಗಾರದ ಹಣಕಾಸು ವಿಭಾಗದಲ್ಲಿ ಸಹಾಯಕ ಲೆಕ್ಕಾಧಿಕಾರಿಯಾಗಿ ನಿಯಮಿತಗೊಂಡ ಬಸವಣ್ಣ, ತನ್ನ ಕಾರ್ಯದಲ್ಲಿ ಪ್ರಾಮಾಣಿಕತೆ, ದಕ್ಷತೆ, ಕಾರ್ಯಕ್ಷಮತೆ ತೋರಿ, ಬಿಜ್ಜಳ ಭೂಪಾಲನ ಮೆಚ್ಚುಗೆಗೆ ಪಾತ್ರನಾದ. ವರ್ಷ ಕಳೆಯಲು ಲೆಕ್ಕಪತ್ರ ಅಧಿಕಾರಿ ಎಂದು ಪದೋನ್ನತಿಗೊಂಡ. ಬಸವಣ್ಣ ತನಗೊದಗಿದ ಅಧಿಕಾರಕ್ಕಷ್ಟೇ ಸೀಮಿನಾಗದೆ, ತನಗೆ ಅತ್ಯಂತ ಇಷ್ಟವಾದ ಸನಾತನ ಧರ್ಮದ ಸಮಾಜೋ–ಧಾರ್ಮಿಕ ವ್ಯವಸ್ಥೆಯ ನೀತಿನಿಯಮಗಳು, ಪುರೋಹಿತಶಾಹಿ ಪಟ್ಟಭದ್ರ ಹಿತಾಸಕ್ತರ ಕಾರಣದಿಂದ ದುರುಪಯೋಗವಾಗುತ್ತಿರುವುದನ್ನು ತಡೆದು, ಧರ್ಮದ ಮೂಲ ಆಶಯಗಳಿಗೆ ಅನುಗುಣವಾಗಿ ಸುಧಾರಣೆಗೊಳಿಸುವುದೇ ಆಗಿತ್ತು. ಮಹಾಮಂಡಲ ಕಾರ್ಯಾಗಾರದ ತಮ್ಮ ಕರ್ತವ್ಯಕ್ಕೆ ಚ್ಯುತಿ ಬಾರದ ಹಾಗೆ ಬಿಡುವಿನ ವೇಳೆಯಲ್ಲಿ ಮಂಡಲಾದ್ಯಂತ ಪ್ರವಾಸ ಮಾಡುತ್ತಾ ಸನಾತನ ಧರ್ಮದ ಧರ್ಮಗುರುಗಳನ್ನು ಆಚಾರ್ಯರನ್ನು, ಚಾತುರ್ವರ್ಣಕ್ಕೆ ಸೇರಿದ ಸಮಾಜಗಳ ಜನನಾಯಕರುಗಳನ್ನು ಸಂದರ್ಶಿಸಿ, ಸಮಾಜೋಧಾರ್ಮಿಕ ನೀತಿ ನಿಯಮಗಳ ಸುಧಾರಣೆಯ ಪ್ರಾಮುಖ್ಯತೆಯನ್ನು ಮನದಟ್ಟು ಮಾಡಿಕೊಡಲು ಶ್ರಮಿಸತೊಡಗಿದರು ಬಸವಣ್ಣ. ಸಾವಿರಾರು ವರ್ಷಗಳಿಂದ ಸ್ವಾರ್ಥಪರ ಸಂಪ್ರದಾಯಗಳ ಸಂಕೋಲೆಯಲ್ಲಿ ಸಿಕ್ಕು ಬಂಧಿಯಾದ ಧರ್ಮಲಂಡರು, ದೂರ್ತ ಪುರೋಹಿತಶಾಹಿ ವರ್ಗ, ಬಸವಣ್ಣನ ಸಮಾಜೋಧಾರ್ಮಿಕ ಸುಧಾರಣಾ ಕ್ರಮಗಳನ್ನು ಒಪ್ಪದೆ, ಅವಮಾನಿಸತೊಡಗಿದರು. ವಿಚಲಿತನಾದ ಬಸವಣ್ಣ ಬೇರೊಂದು ಮಾರ್ಗ ಕಂಡುಕೊಳ್ಳಲು ಮುಂದಾದ.

ಮಾಘಮಾಸದ ಒಂದುದಿನ ಮುಂಜಾನೆ ಹೊತ್ತು ಮೂಡುವ ಮುನ್ನ ಮಂಗಳವೇಡೆ ಸಮೀಪ ಹರಿಯುತ್ತಿದ್ದ ಭೀಮಾನದಿಯ ಆಚೆ ದಂಡೆಯಲ್ಲಿ ವಾಸ ಮಾಡುತ್ತಿದ್ದ ಶಿವಯೋಗಿ ರೇವಣಸಿದ್ಧರ ಮಠಕ್ಕೆ ಹೋಗಿಬರಲು ಹೊರಟ ಬಸವಣ್ಣ. ನದಿ ದಾಟಲು ಲಂಗರು ಹಾಕಿದ್ದ ದೋಣಿಯ ಹತ್ತಿರ ಬಂದು ನಿಂತು ಅಂಬಿಗನಿಗಾಗಿ ಕಾಯತೊಡಗಿದ. ಕೊರೆಯುವ ಚಳಿ, ಗಡಗಡ ನಡುಗುತ್ತ ಬೆಂಕಿ ಕಾಯಿಸಿಕೊಳ್ಳುತ್ತಾ ಹರಟೆ ಹೊಡೆಯುತ್ತಾ ಕುಳಿತಿದ್ದ ಆರೇಳು ಜನರ ಗುಂಪನ್ನು ಕಂಡ ಬಸವಣ್ಣ ಹತ್ತಿರ ಬಂದು ಮಠಕ್ಕೆ ಹೋಗಿಬರಬೇಕು, ದೋಣಿ ನಡೆಸುವ ಅಂಬಿಗ ಎಲ್ಲಿದ್ದಾನೆ ಎಂದು ಕೇಳಲು, ಗುಂಪಿನಲ್ಲಿದ್ದವನೊಬ್ಬ ಎದ್ದು, ನಾನೇ ಅಂಬಿಗ ಎಂದು ಬಸವಣ್ಣನನ್ನು ದೋಣಿಯಲ್ಲಿ ಕುಳ್ಳಿರಿಸಿ, ಆಚೆ ದಡದಲ್ಲಿದ್ದ ರೇವಣಸಿದ್ಧರ ಮಠದತ್ತ

ಹೋಗಲು ಹುಟ್ಟುಹಾಕತೊಡಗಿ ಮಾತಿಗಿಳಿದ. ವಾಚಾಳಿಯಾಗಿದ್ದ ಅಂಬಿಗ ದಷ್ಟಪುಷ್ಟ ದೇಹದ ಒರಟು ಸ್ವಭಾವದವನಂತೆ ಕಂಡ. ಹೆಸರೇನು ಅಂದಿದ್ದಕ್ಕೆ 'ಚೌಡ' ಎಂದ. ಮಠದಿಂದ ಹಿಂದಿರುಗಿದ ಬಸವಣ್ಣ ಹೋಗೋಣವೆ ಚೌಡಯ್ಯನವರೇ ಎಂದದ್ದಕ್ಕೆ, ನನ್ನನ್ನು ಇಲ್ಲಿಯವರೆಗೆ ಯಾರೂ ಚೌಡಯ್ಯನವರೇ ಎಂದಿರಲಿಲ್ಲ, ನೀವೆ ಮೊದಲು ನನ್ನನ್ನು ಚೌಡಯ್ಯನವರೇ ಎಂದು ಬಾಯ್ತುಂಬ ಕರೆದಿದ್ದು ಎಂದ. ಅಲ್ಲಿಂದ ಪ್ರಾರಂಭವಾಯ್ತು ಬಸವಣ್ಣ ಮತ್ತು ಚೌಡಯ್ಯನವರ ಆತ್ಮೀಯತೆ. ನಿಮ್ಮ ಜೊತೆಗಾರರನ್ನು ಪರಿಚಯಿಸುವಿರಾ ಚೌಡಯ್ಯನವರೆ ಅಂದ ಬಸವಣ್ಣ. ಬಸವಣ್ಣ ಮತ್ತು ಚೌಡಯ್ಯ ಜೊತೆಯಾಗಿ ಬಂದದ್ದನ್ನು ಕಂಡ ಬೆಂಕಿ ಕಾಯಿಸಿಕೊಳ್ಳುತ್ತಿದ್ದವರೆಲ್ಲಾ ಎದ್ದುನಿಂತರು. ಇವನು ಮಾಚ, ಊರವರ ಕೊಳೆಯಾದ ಬಟ್ಟೆಗಳನ್ನು ತೊಳೆದು ಮಡಿಮಾಡಿಕೊಡುವುದು ಇವನ ಕೆಲಸ. ಮಡಿವಾಳ ಮಾಚಯ್ಯನವರಿಗೆ ನಮಸ್ಕಾರ ಎಂದ ಬಸವಣ್ಣ. ಇವನು ಕುಂಬಾರ ಗುಂಡ, ಇವನು ಬಡಗಿ ಬಾಚ, ಇವನು ವಕ್ಕಲಿಗ ಮುದ್ದ, ಇವನು ಮ್ಯಾದರ ಕೇತ, ಇವನು ನುಲಿಯ ಚಂದ, ಇವನು ಅಡಪದ ಅಪ್ಪಣ್ಣ. ಹೀಗೆ ಒಬ್ಬೊಬ್ಬರನ್ನೇ ಪರಿಚಯಿಸಿದ ಅಂಬಿಗರ ಚೌಡಯ್ಯ. ನಿಮ್ಮೆಲ್ಲರ ಪರಿಚಯವಾಗಿದ್ದು ನನಗೆ ಸಂತೋಷವಾಗಿದೆ, ನನ್ನ ಹೆಸರು ಬಸವಣ್ಣ, ನಾನು ಮಂಗಳವೇಡೆಯ ಬಿಜ್ಜಳನಲ್ಲಿ ನೌಕರಿ ಮಾಡುತ್ತಿದ್ದೇನೆ. ನಾನು ನಿಮ್ಮಲ್ಲಿ ಮಾತನಾಡಬೇಕೆಂದಿದ್ದೇನೆ.

ಇಲ್ಲಿ ಎಲ್ಲಿಯಾದರೂ ಕುಳಿತುಕೊಳ್ಳೋಣವೇ ಕೇಳಿದ ಬಸವಣ್ಣ. ನಾವ್ಯಾವ ದೊಡ್ಡಮನುಷ್ಯರು ಸ್ವಾಮಿ ನಮ್ಮಲ್ಲಿ ಮಾತನಾಡಲು ಏನಿರುತ್ತೆ. ಈ ಶೂದ್ರ ಮುಂಡೇವನ್ನು ಗೌರವದಿಂದ ಅಯ್ಯ ಎಂದು ಕರೆದ ನಿಮ್ಮಂತ ದೊಡ್ಡ ಮನುಷ್ಯರನ್ನು ನಾವು ಇಲ್ಲಿಯವರೆಗೂ ಕಂಡಿಲ್ಲ ಎನ್ನುತ್ತಾ, ಒಂದು ಮರದ ನೆರಳಿನಲ್ಲಿ ಕುಳಿತರು. ನೀವೆಲ್ಲಾ ಶೂದ್ರವರ್ಗದ ಕೀಳು ಜಾತಿಯಲ್ಲಿ ಹುಟ್ಟಿ ಮೇಲುವರ್ಗದ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರ ಜೀವನಾವಶ್ಯಕ ಕೆಲಸಗಳನ್ನು ಸೇವಾಮನೋಭಾವದಿಂದ ಮಾಡುತ್ತಿದ್ದರೂ ನಿಮ್ಮನ್ನು ಕೀಳಾಗಿ ಕಾಣುತ್ತಿರುವುದು ಎಷ್ಟು ಸರಿ ಎಂಬುದನ್ನೇನಾದರೂ ಯೋಚಿಸಿರುವಿರಾ? ದೇವರ ಕೃಪೆಗಾಗಿ ದೇವರ ಗುಡಿಗಳಿಗೆ ಹೋಗುವ ನಿಮ್ಮನ್ನು ಅರ್ಚಕರು ಯಾವ ರೀತಿ ಕಾಣುತ್ತಾರೆ ಎಂಬುದನ್ನು ಹೇಳುವುದೇ ಬೇಡ ಅಲ್ಲವೆ? ಶೂದ್ರ ವರ್ಗಕ್ಕೆ ಸೇರಿದ ನೂರೆಂಟು ಜಾತಿಯ ಮತ್ತು ದಲಿತ ಅಸ್ಪೃಶ್ಯ ವರ್ಗದ ಹತ್ತಾರು ಜಾತಿಯ ಜನರು ಸಂಖ್ಯಾಬಲದಲ್ಲಿ, ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ವರ್ಗದ ಜಾತಿಯ ಜನರಿಗಿಂತ ಹತ್ತಾರು ಪಟ್ಟು ಅಧಿಕವಾಗಿದ್ದರೂ, ನಮ್ಮ ಮೇಲೆ ಅಧಿಕಾರ ಚಲಾಯಿಸುತ್ತಿರುವುದು ಯಾವ ನ್ಯಾಯ. ದೇವರ ಕಣ್ಣಿನಲ್ಲಿ ಮನುಷ್ಯರೆಲ್ಲ ಒಂದೇ ಅಲ್ಲವೇ. ಆದಿಯೋಗಿ ಶಿವನಿಂದ ಸ್ಥಾಪನೆಯಾದ ಸನಾತನ ಧರ್ಮದ ಮೂಲ ಸಾಮಾಜಿಕ ವ್ಯವಸ್ಥೆಯಂತೆ ಸರ್ವರೂ ಸಮಾನರು, ಸರ್ವರೂ ಸುಖ ಶಾಂತಿ ನೆಮ್ಮದಿಯಿಂದ ಬದುಕಬೇಕು, ಬಾಳಬೇಕು. ಜೀವನ ನಿರ್ವಹಣೆಗಾಗಿ ಸತ್ಯಶುದ್ಧ ನ್ಯಾಯಯುತವಾಗಿ ಮಾಡುವ ಯಾವುದೇ ಉದ್ಯೋಗದಲ್ಲಿ ಮೇಲು ಕೀಳೆಂಬುದೇನು ಇರುವುದಿಲ್ಲ. ಆದರೆ ಸನಾತನ ಧರ್ಮ ಸ್ಥಾಪನೆಯಾದ, ಯುಗ ಯುಗ ಕಳೆದ ನಂತರ ಹುಟ್ಟಿಬಂದ ಮನುಮಹರ್ಷಿಯು ಸನಾತನ ಧರ್ಮದ ಮೂಲ ಸಾಮಾಜಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡಿ ಜನರ ನಡೆ ಗುಣ ಕರ್ಮಗಳ ಅನುಸಾರ ಸಮಾಜವನ್ನು ಒಡೆದು ನಾಲ್ಕು ಹೋಳು ಮಾಡಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ಪಂಚಮ (ದಲಿತ) ಎಂದು ವಿಂಗಡಿಸಿ ಬ್ರಾಹ್ಮಣ ಶ್ರೇಷ್ಠ, ಶೂದ್ರ ಕನಿಷ್ಠ, ಕ್ಷತ್ರಿಯ ಮತ್ತು ವೈಶ್ಯ ಮಧ್ಯಮ ಎಂದು ವರ್ಗೀಕರಿಸಿ, ಸ್ಮೃತಿ, ಶಾಸ್ತ್ರ ಬರೆದಿಟ್ಟು ಕಾರ್ಯರೂಪಕ್ಕೆ ತಂದಿದ್ದರ ಕಾರಣವೇನು.

ಈ ಎಲ್ಲಾ ಅವಾಂತರಕ್ಕೆ ಕಾರಣವಾಗಿ, ನೀವು, ನಿಮ್ಮಂಥ ಅನೇಕ ಶೂದ್ರ ಮತ್ತು ದಲಿತರು ಇಂದು ಶ್ರೇಷ್ಠ ಮತ್ತು ಮಧ್ಯಮ ವರ್ಗದವರ ದೌರ್ಜನ್ಯಕ್ಕೆ ಒಳಗಾಗುತ್ತಿರುವಿರಿ. ಮೇಲು ವರ್ಗದವರ ದರ್ಪ, ದೌರ್ಜನ್ಯದ ವಿರುದ್ಧ ಪ್ರತಿಭಟಿಸಿ ಹೋರಾಡಲು ನೀವೆಲ್ಲ ಸಂಘಟಿತರಾಗಬೇಕಾಗಿದೆ. ಸಂಘ ಶಕ್ತಿಯಿಂದಷ್ಟೇ ನೀವು ಸಮಾನತೆ ಗಳಿಸಲು ಸಾಧ್ಯ, ಎಂಬುದನ್ನು ಮನಮುಟ್ಟುವ ಹಾಗೆ ಹೇಳಿದ ಬಸವಣ್ಣ. ಬಸವಣ್ಣನ ಮಾತಿನಿಂದ ಉತ್ತೇಜಿತರಾದ ಅಂಬಿಗರ ಚೌಡಯ್ಯ ಮತ್ತು ಅವನ ಸಂಗಡಿಗರು, ನೀವು ಮುಂದಾಳತ್ವ ವಹಿಸಿ ನಮಗೆ ಮಾರ್ಗದರ್ಶಿಗಳಾಗಲು ಒಪ್ಪಿದರೆ, ನೀವು ಹೇಳಿದಂತೆ ನಡೆಯಲು ನಾವು ಸಿದ್ಧ ಎಂದು ಒಪ್ಪಿಗೆ ಕೊಟ್ಟರು. 'ಸನಾತನ ಧರ್ಮದ ಸಮಾಜೋ ಧಾರ್ಮಿಕ ಸುಧಾರಣಾ ಹೋರಾಟ ಸಮಿತಿ' ಬಸವಣ್ಣನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯ್ತು. ಹೋರಾಟ ಸಮಿತಿಯ ಮೊದಲ ಸಭೆ, ಇದಾಗಿ ಎರಡು ನಿರ್ಣಯಗಳಾದವು. ವಾರಕ್ಕೊಮ್ಮೆ ಇದೇ ಸ್ಥಳದಲ್ಲಿ ಸಭೆ ಸೇರಿ ಹೋರಾಟದ ರೂಪುರೇಷೆಗಳ ಬಗ್ಗೆ ಚರ್ಚಿಸುವುದು ಮತ್ತು ಸಂಘಟನೆ ಬಲಗೊಳ್ಳಲು ಸದಸ್ಯರನ್ನು ನೊಂದಾಯಿಸಿಕೊಳ್ಳುವುದು. ಈ ಎರಡು ನಿರ್ಣಯಗಳೊಂದಿಗೆ ಅಂದಿನ ಸಭೆ ಮುಕ್ತಾಯಗೊಂಡಿತು.


**ಮುಂದುವರೆಯುವುದು..............**

# ನೊಳಂಬ ಸಮುದಾಯದ ಲಿಂಗಾಯತೀಕರಣ

ಅನೇಕ ಧಾರ್ಮಿಕ, ಸಾಂಪ್ರದಾಯಿಕ ಮತ್ತು ಬಸವತತ್ವದ ಪೂರ್ಣ ಅರಿವು ಇಲ್ಲದ ಕಾರಣ ಲಿಂಗಾಯತ ಧರ್ಮದೊಳಗೆ ವೈದಿಕ ಮೌಢ್ಯಾಚರಣೆಗಳು ತುಂಬಿಕೊಂಡು ಬಿಟ್ಟಿವೆ. ಬಸವಣ್ಣನವರು ಅನೇಕ ವಚನಗಳಲ್ಲಿ ಮೌಢ್ಯಾಚರಣೆಗಳ ಬಗ್ಗೆ ಅರಿವು ಮೂಡಿಸಿದ್ದಾರೆ. ಅನೇಕ ಶರಣರುಕೂಡ ಕಂದಾಚಾರಗಳ ವಿರುದ್ಧ ತಿಳುವಳಿಕೆ ಮೂಡಿಸಲು ಪ್ರಯತ್ನಿಸಿದ್ದಾರೆ. ಅಂಬಿಗರಚೌಡಯ್ಯನವರು ಅರ್ಥವಿಲ್ಲದ ಪೂಜೆ ಪುನಸ್ಕಾರಗಳ ಬಗ್ಗೆ ಹೀಗೆ ಹೇಳಿದ್ದಾರೆ.

**ದೇಹಾರವ ಮಾಡುವ ಅಣ್ಣಗಳಿರಾ**
**ಒಂದು ತುತ್ತು ಅನ್ನವನಿಕ್ಕಿರಯ್ಯಾ**
**ದೇಹಾರಕ್ಕೆ ಆಹಾರವೇ ನಿಚ್ಚಳಿಕೆ.**
**ದೇಹಾರವ ಮಾಡುತ್ತೆ ಆಹಾರವನ್ನಿಕ್ಕದಿದ್ದರೆ**
**ಆ ಹರನಿಲ್ಲೆಂದನಂಬಿಗರಚೌಡಯ್ಯ**

ಶಿವಶರಣರಿಗೆ ದೇಹಾರ (ಪೂಜೆ ಮುಂತಾದ ಆಚರಣೆಗಳು) ಮತ್ತು ಆಹಾರಗಳ ನಡುವೆ ಆಯ್ಕೆಯಿದ್ದರೆ ಅವರು ಆಹಾರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ವಿನಾ ದೇಹಾರವನ್ನಲ್ಲ. ಅಲ್ಲಮಪ್ರಭುದೇವರು ಒಂದು ವಚನದಲ್ಲಿ "ಒಡಲಿಚ್ಚೆಯ ಸವೆಸದೆ ನಿಮಿಷವಿರಬಾರದು" ಎನ್ನುತ್ತಾರೆ. ಲಿಂಗಾಯತರಿಗೆ ಆಹಾರ ಕೇವಲ ಖಾದ್ಯವಲ್ಲ. ಅದು 'ಪ್ರಸಾದ'. ಈ ಗುಣವನ್ನು ನೊಳಂಬ ಲಿಂಗಾಯತರು ಅಳವಡಿಸಿಕೊಳ್ಳಬೇಕು. ಇಂದಿನ 21ನೆಯ ಶತಮಾನದ ವೈಜ್ಞಾನಿಕ-ವೈಚಾರಿಕ ಯುಗದಲ್ಲಿ ಗುಡಿಕಟ್ಟುವುದು, ಗುಡಿಗಳನ್ನು ಕಟ್ಟುವ ಕೆಲಸವನ್ನು ಸರ್ಕಾರವೇ ಪ್ರೋತ್ಸಾಹಿಸುತ್ತದೆ. ಇದು ಬಸವ ವಿರೋಧಿ ನಡೆ. ಗುಡಿಯಲ್ಲಿ ನಾನಾ ಬಗೆಯ ಪೂಜೆ-ಆರಾಧನೆ, ಸಂತರ್ಪಣೆ ಮಾಡುವುದು ಲಿಂಗಾಯತರಿಗೆ ಸಲ್ಲ. ಗುಡಿ ಸಂಸ್ಕೃತಿಯು ಇಂದು ದೇಶದಾದ್ಯಂತ ಕಾಡ್ಗಿಚ್ಚಿನಂತೆ ಹಬ್ಬುತ್ತಿದೆ. ದೇಶದಲ್ಲಿ ಸರ್ಕಾರವೇ ಅದನ್ನು ಪ್ರೋತ್ಸಾಹಿಸುತ್ತಿದೆ. ಇದು ಅತ್ಯಂತ ಖೇದದ ಸಂಗತಿ. ಬಸವಣ್ಣನವರು 'ಸ್ಥಾವರಕ್ಕಿವುಂಟು, ಜಂಗಮಕ್ಕಳಿವಿಲ್ಲ' ಎಂದು ಸ್ಥಾವರ ಮೂರ್ತಿ ಪೂಜೆಯ ನಿರರ್ತಕತೆಯನ್ನು ಹೇಳಿದರೆ ಅಲ್ಲಮಪ್ರಭುಗಳು "ಲಿಂಗ ಪ್ರತಿಷ್ಠಾಪನೆ ಮಾಡಿದವರಿಗೆ ನಾಯಕ ನರಕ' ಎನ್ನುತ್ತಾರೆ. ಲಿಂಗಾಯತರಿಗೆ ಬಸವಣ್ಣ ಗುರು, ಸಿದ್ಧರಾಮಣ್ಣ ಗುರು, ಅವರು ದೇವರಲ್ಲ, ಅವರೆಲ್ಲ ಚಾರಿತ್ರಿಕ ವ್ಯಕ್ತಿಗಳು. ಅವರಾರು ಕಲ್ಲಿನಲ್ಲಿ ಹುಟ್ಟಿದವರಲ್ಲ ಅಥವಾ ಆಕಾಶದಿಂದ ದುತ್ತನೆ ಬೀಳಲಿಲ್ಲ. ಬಸವಣ್ಣನವರಿಗೆ, ಸಿದ್ಧರಾಮಣ್ಣನವರಿಗೆ ತಂದೆ-ತಾಯಿಯರಿದ್ದರು.



**ಪ್ರೊ. ಟಿ.ಆರ್.ಚಂದ್ರಶೇಖರ**
ವಿಶ್ರಾಂತ ಪ್ರಾಧ್ಯಾಪಕ, 2ನೆಯ ಮೇನ್, 4ನೆಯ ಕ್ರಾಸ್, ಬೇಗೂರು ಮುಖ್ಯ ರಸ್ತೆ. ಹೊಂಗಸಂದ್ರ-560 068, ಬೆಂಗಳೂರು.

ಲಿಂಗಾಯತರಿಗೆ "ಇಷ್ಟಲಿಂಗ" ದೇವರೇ ವಿನಾ ಗುಡಿ-ಗುಡಾರಗಳಲ್ಲಿರುವ ಸ್ಥಾವರ ಮೂರ್ತಿಗಳಲ್ಲ. ದೇವರು-ಭಕ್ತರ ನಡುವೆ ಬಸವಣ್ಣ 'ಮಧ್ಯವರ್ತಿ'ಗಳನ್ನು ತೊಡೆದು ಹಾಕಿದ. ಲಿಂಗಾಯತ ಧರ್ಮದಲ್ಲಿ ಪೌರೋಹಿತ್ಯಕ್ಕೆ ಸ್ಥಾನವಿಲ್ಲ. ಪ್ರತಿಯೊಬ್ಬ ಲಿಂಗಾಯತರಿಗೂ ಬಸವಣನವರು ದೇವರನ್ನು (ಇಷ್ಟಲಿಂಗ) ಕೊಟ್ಟಿದ್ದಾರೆ. ಈ ಗುಣವನ್ನು, ಬಸವ ಮೌಲ್ಯವನ್ನು ನೊಳಂಬರು ಅಳವಡಿಸಿಕೊಳ್ಳಬೇಕು. ಲಿಂಗಾಯತ ಧರ್ಮದ ಅದ್ವಿತೀಯ ಸಿದ್ಧಾಂತ – ಮೌಲ್ಯವೆಂದರೆ ಸಮಾನತೆ ಸಿದ್ಧಾಂತ. ಚಾತುರ್ವರ್ಣ ವ್ಯವಸ್ಥೆಯಲ್ಲಿ "ಸಮಾನತೆ"ಗೆ ಅವಕಾಶವಿಲ್ಲ. ಅದೊಂದು ಅಸಮಾನತೆಯ ಪ್ರಣಾಳಿಕೆ. ಅಲ್ಲಿ ದ್ವಿಜರು (ತ್ರೈವರ್ಣಿಕರು)-ಅದ್ವಿಜರು (ಶೂದ್ರರು) ಎಂಬ ಭೇದವಿದೆ. ಲಿಂಗಾಯತವು 'ಅಭೇದ ಸಂಸ್ಕೃತಿ'ಯಾದರೆ ವರ್ಣಾಶ್ರಮ ವ್ಯವಸ್ಥೆಯು 'ಭೇದ ಸಂಸ್ಕೃತಿ'. ಸಮಾಜವನ್ನು ಒಡೆಯುವುದು ವೈದಿಕದ ಚಾಳಿಯಾಗಿದ್ದರೆ ಎಲ್ಲರನ್ನೂ "ಒಳಗೊಳ್ಳುವುದು" ಲಿಂಗಾಯತದ ಮೂಲ ಸೂತ್ರವಾಗಿದೆ. ಲಿಂಗಾಯತ ಧರ್ಮದಲ್ಲಿ ಮೇಲು-ಕೀಳುಗಳಿಲ್ಲ. ಸಿದ್ಧರಾಮಣ್ಣಗಳು "ತಟ್ಟುವ ಮುಟ್ಟುವ ಭೇದವುಳ್ಳನ್ನಬರ ಶರಣನಲ್ಲ" ಎನ್ನುತ್ತಾರೆ. ಮುಟ್ಟಿಸಿಕೊಳ್ಳುವುದು-ಮುಟ್ಟಿಸಿಕೊಳ್ಳದಿರುವುದು ಲಿಂಗಾಯತದಲ್ಲಿ ನಿಷಿದ್ಧ. ಪ್ರತಿಯೊಂದು ಜೀವಿಯಲ್ಲಿಯೂ "ಮಹಾಲಿಂಗ"ದ ಚಿದಂಶವಿದೆ. ಅಂದಮೇಲೆ ಅಲ್ಲಿ ಅಸಮಾನತೆಗೆ ಸ್ಥಾನವಿಲ್ಲ. ಲಿಂಗಾಯತ ಪ್ರಣಾಳಿಕೆಯ ಪ್ರಕಾರ ನೀರಿಗೆ ಮೈಲಿಗೆಯಿಲ್ಲ. ಗುರು ಸಿದ್ಧರಾಮಣ್ಣನವರು ಇದನ್ನು ಹೀಗೆ ಹೇಳಿದ್ದಾರೆ.

**"ಜಾತಿ ವಿಜಾತಿ ನೀರ್ಗುಡಿಯ**
**ಹೋದರೆ ಸುಡು ಹೋಗೆಂದು**
**ನೂಂಕಿಂತೆ ಆ ಜಲವು?**
**ಆ ಜಲದಂತಾಗಬಾರದೆ**
**ಹಿರಿಯರಾದವರು"**

ನೀರಿನ ಗುಣ ದಾಹವನ್ನು ಹಿಂಗಿಸುವುದು. ನೀರಿನಲ್ಲಿ ಪವಿತ್ರ–ಅಪವಿತ್ರ ಎಂಬುದಿಲ್ಲ. ಅಲ್ಲಿ ಶುದ್ಧ–ಅಶುದ್ಧ ಎಂಬುದಿರಬಹುದು. ಗಂಗೆ ಮಾತ್ರ ಪವಿತ್ರ, ಗಂಗೆಯಲ್ಲಿ ಸ್ನಾನ ಮಾಡಿದರೆ 'ಪಾಪ' ಪರಿಹಾರವಾಗುತ್ತದೆ, "ಪುಣ್ಯ' ಬರುತ್ತದೆಎಂಬುದೆಲ್ಲ ಮೌಢ್ಯ.

**"ಸುತ್ತಿ ಸುತ್ತಿ ಬಂದಡಿಲ್ಲ. ಲಕ್ಷಗಂಗೆಯ ಮಿಂದಡಿಲ್ಲ"** ನಮ್ಮೂರಿನ ನೀರು ಶ್ರೇಷ್ಠವೇ!. ಅನೇಕ ದೇವಸ್ಥಾನಗಳಲ್ಲಿ ನೀರನ್ನು ಬಾಟಲಿಯಲ್ಲಿ ತುಂಬಿ 'ತೀರ್ಥ' ಎಂದು ಮಾರಾಟ ಮಾಡಲಾಗುತ್ತಿದೆ. ಇಂದು ದೇವಾಲಯಗಳು ಮಾರಾಟದ ಕೇಂದ್ರಗಳಾಗಿವೆ. ಸರಕು–ಸಾಮಗ್ರಿಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತದೆ. ದೇವರುಗಳನ್ನು ದೇವಾಲಯಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಇಂತಹ ಮಾರುಕಟ್ಟೆ ಗುಡಿ ಸಂಸ್ಕೃತಿಗೆ ಲಿಂಗಾಯತದಲ್ಲಿ ಸ್ಥಾನವಿಲ್ಲ. ಇದು ಲಿಂಗಾಯತದಲ್ಲಿಲ್ಲ. ಹಡಪದ ಅಪ್ಪಣ್ಣನವರು ಇದನ್ನು ಹೀಗೆ ಹೀಗಳೆದಿದ್ದಾರೆ.

**"ತೀರ್ಥಯಾತ್ರೆ ಲಿಂಗ ದರ್ಶನಕ್ಕೆ ಹೋಗಿ ಕರ್ಮವ ಹಿಂಗಿಸಿಕೊಂಬೆನೆಂಬ ಭಂಗಿತರ ಮಾತ ಕೇಳಲಗದು"**

ಪಾಪ–ಪುಣ್ಯ, ಸ್ವರ್ಗ–ನರಕ, ಹೋಮ–ಹವನ, ಯಜ್ಞ–ಯಾಗ ಮುಂತಾದವು ಪುರಾಣ ಸೃಷ್ಟಿ. ಇವುಗಳಿಗೆ ಮುಗ್ದ ಗ್ರಾಮೀಣ ರೈತಾಪಿ ನೊಳಂಬ ಭಕ್ತರು ಬಲಿಯಾಗಿ ಬೆವರು ಹರಿಸಿ ದುಡಿದ ಹಣವನ್ನು ಕಳೆದುಕೊಳ್ಳುತ್ತಿದ್ದಾರೆ. ಇವೆಲ್ಲವು ಜನರನ್ನು ಶೋಷಣೆ ಮಾಡುವ ಸಾಧನಗಳು. ಲಿಂಗಾಯತದಲ್ಲಿರುವುದು "ದುಡಿಮೆಯೇ ದೇವರು". ಆದರೆ ವೈದಿಕದಲ್ಲಿ ದೇವರನ್ನು ದುಡಿಮೆಯ ಸಾಧನವನ್ನಾಗಿ ಮಾಡಲಾಗಿದೆ. ಅಲ್ಲಿ ದೇವರೇ ದುಡಿಮೆ. ನೊಳಂಬ ಸಮುದಾಯವು "ದುಡಿಮೆಯೇ ದೇವರು" ಎಂಬ ಸಂಸ್ಕೃತಿಯನ್ನು ಅಪ್ಪಿಕೊಳ್ಳಬೇಕೇ ವಿನಾ "ದೇವರೇ ದುಡಿಮೆ" ಸಂಸ್ಕೃತಿಯನ್ನಲ್ಲ.

ವೈದಿಕವು ಹುಟ್ಟುಹಾಕಿ ಹಬ್ಬಿಸಿರುವ ಮೈಲಿಗೆ, ಸೂತಕ, ಅಸ್ಪೃಶ್ಯತೆ, ಮಹಿಳೆಯರ ಋತುಚಕ್ರ, ಗ್ರಹಬಲ, ಕಂಕಣ ಬಲ ಮುಂತಾದ ಮೌಢ್ಯಾಚರಣೆಗಳನ್ನು ಬಸವ ಸಂವಿಧಾನವು ತೊಡೆದು ಹಾಕಿತು. ಇಂದು ಸಮಾಜದಲ್ಲಿ 'ಹುಟ್ಟಿದರು ಸೂತಕ; ಸತ್ತರು ಸೂತಕ'. ವೈದಿಕದಲ್ಲಿ ಸತ್ತವರು ಒಂದೋ ವೈಕುಂಟಕ್ಕೆ ಹೋಗುತ್ತಾರೆ, ಇಲ್ಲವೇ ಕೈಲಾಸಕ್ಕೆ ಹೋಗುತ್ತಾರೆ. ಇದುಮೌಢ್ಯ, ಇವುಗಳಿಗೆ ಅರ್ಥವಿಲ್ಲ. ಅಲ್ಲಮಪ್ರಭುದೇವರು 'ಕಾಯಗುಣವಳಿದು ಮಾಯಾಜ್ಯೋತಿ ವಾಯುವ ಸೇರುವ ಮುನ್ನ ಭಕ್ತಿ ಮಾಡಬಲ್ಲಡೆ ಆತನೇ ದೇವ ಗುಹೇಶ್ವರ" ಎನ್ನುತ್ತಾರೆ. ಕಾಯಗುಣವಳಿದು– ಎಂದರೆ ಪ್ರಾಣ ಹೋದಮೇಲೆ ಜೀವವು ಸ್ವರ್ಗಕ್ಕೂ ಹೋಗುವುದಿಲ್ಲ, ನರಕಕ್ಕೂ ಹೋಗುವುದಿಲ್ಲ. ಅದು ಪ್ರಕೃತಿಯಲ್ಲಿ ಲೀನವಾಗಿಬಿಡುತ್ತದೆ. ಲಿಂಗಾಯತದಲ್ಲಿ ಇರುವುದು ಒಂದೇ ಲೋಕ. ಅದು ಇಹಲೋಕ. ಮತ್ತೊಂದು ಲೋಕ ಅಥವಾ ಲೋಕಗಳು, ಪರಲೋಕ ಇಲ್ಲ.

ನೊಳಂಬ ಸಮುದಾಯವು ಮೂಲತಃ ರೈತಾಪಿ ಸಮುದಾಯ. ರಾಜಮನೆತನದ ಹಿನ್ನೆಲೆಯಿರುವ ಸಮುದಾಯ. ಬಸವ ಕ್ರಾಂತಿಯ 12ನೆಯ ಶತಮಾನಕ್ಕೆ ಹಿಂದೆಯೇ ನೊಳಂಬ ಅರಸರು ವೈದಿಕಾಚರಣೆಗಳನ್ನು ಪ್ರೋತ್ಸಾಹಿಸಲಿಲ್ಲ. ಇಂತಹ ಘನ ಪರಂಪರೆ ನೊಳಂಬ ಸಮುದಾಯಕ್ಕಿದೆ. ಇದೊಂದು ಹೆಮ್ಮೆಪಡಬಹುದಾದ ಸಂಗತಿ. ಆದ್ದರಿಂದ ನಮ್ಮ ಪರಂಪರೆಯನ್ನು ಗೌರವಿಸೋಣ, ಅದನ್ನು ಅನುಸರಿಸೋಣ.

ಆ ಮೂಲಕ ನಮ್ಮ ಸಮುದಾಯದ ಬಸವ–ಸಿದ್ಧರಾಮಣ್ಣ ಸಬಲೀಕರಣ ನಡೆಯಲಿ. ಬಸವಣ್ಣ–ಸಿದ್ಧರಾಮಣ್ಣ ನಮ್ಮ ಶ್ರದ್ಧಾ ಗುರುಗಳು. ಅವರ ಬೋಧಿಸಿದ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ನಾವು ಬಸವಣ್ಣ–ಸಿದ್ಧರಾಮಣ್ಣ ಅವರ 'ನಿಜ' ಅನುಯಾಯಿಗಳಾಗೋಣ. ನೂರೆಂಟು ದೇವರುಗಳ ಆರಾಧನೆಯನ್ನು ಇಂದೇ ನಿಲ್ಲಿಸೋಣ.

**ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ**
**ಒಬ್ಬನೆ ಕಾಣಿರೋ, ಇಬ್ಬರೆಂಬುದು ಹುಸಿ ನೋಡಾ**
**ಕೂಡಲಸಂಗಮದೇವನಲ್ಲದಿಲ್ಲೆಂದಿತ್ತು ವೇದ**

ನೊಳಂಬ ಸಮುದಾಯದ ಯುವ ಜನತೆಯು ಮೌಢ್ಯಾಚರಣೆಯ ಕೂಪದಿಂದ ಹೊರಬರಬೇಕು. ನಮ್ಮದು ವಿಷಾದ ಯೋಗವಲ್ಲ, ನಮ್ಮದು 'ಕರ್ಮಫಲತ್ಯಾಗ' ಸಂಸ್ಕೃತಿಯಲ್ಲ. ನಮ್ಮದು ಸಂಸಾರ ಯೋಗ. ನಮ್ಮದು "ಕರ್ಮಫಲಭೋಗ' ಸಂಸ್ಕೃತಿ. ಕರ್ಮಕೆ–ಕಾಯಕಕ್ಕೆ ಫಲ ಬೇಕು ಎನ್ನುತ್ತದೆ ಬಸವ ಸಿದ್ಧಾಂತ. ಬಸವಣ್ಣನವರ, ಸಿದ್ಧರಾಮಣ್ಣನವರ ಸೂತ್ರಗಳನ್ನು ಪಾಲಿಸುವುದರ ಮೂಲಕ ನೊಳಂಬ ಸಮುದಾಯ ಸಬಲೀಕರಣಗೊಳ್ಳಬೇಕು. ಇದನ್ನು ನಾನು ನೊಳಂಬ ಸಮುದಾಯದ ಸಬಲೀಕರಣ ಎಂದು ಕರೆದಿದ್ದೇನೆ.

# ವಚನ ಮಂಟಪ

12ನೇ ಶತಮಾನದ ಬಸವಾದಿ ಶರಣರ ಆಯ್ದ ವಚನಗಳನ್ನು ಒಂದೇ ಕಡೆ ಕೆತ್ತಿಸಲಾಗಿರುವ 'ಶ್ರೀ ಶಿವಶರಣರ ವಚನಾಮೃತ', 'ವಚನ ಮಂಟಪ'ವನ್ನು ನೋಡಿದಾಗ ನಮಗೆ ಅಂದಿನ ಶರಣರ ಅನುಭವ ಮಂಟಪವನ್ನು ನೆನಪಿಗೆ ತರಿಸುತ್ತದೆ. ವಚನ ಸಾಹಿತ್ಯದ ಸರಳತೆ, ಮಾಧುರ್ಯ, ಆಪ್ತ ಭಾವಗಳು, ಕೆಲವೇ ಸಾಲುಗಳಲ್ಲಿ ವಿಶಿಷ್ಟ ಚಿಂತನೆಗಳನ್ನು ವ್ಯಕ್ತಪಡಿಸುವ ವಿಶೇಷತೆ, ತನ್ನನ್ನು ತಾನೇ ವಿಮರ್ಶೆಗೆ ಒಡ್ಡಿಕೊಳ್ಳುವ ಪರಿ, ಅನುಭಾವದ ಅಂತರಂಗದ ನಿವೇದನೆ ಇವೆಲ್ಲಾ ವಚನ ಸಾಹಿತ್ಯವನ್ನು ವಿಶ್ವಮಟ್ಟದಲ್ಲಿ ಶ್ರೇಷ್ಠ ಸಾಹಿತ್ಯವಾಗಿ ನಿಲ್ಲುವಂತೆ ಮಾಡಿತು. ಇಂತಹ ಅದ್ಭುತವಾದ ಸಾಹಿತ್ಯವನ್ನು ಜನರಿಗೆ ಓದಿನ ಮೂಲಕ ತಲುಪುವಂತೆ ಮಾಡಬೇಕೆಂಬ ಉದ್ದೇಶದಿಂದ 'ವಚನ ಮಂಟಪ' ರಚನೆಯಾಗಿದೆ. ಇದು ಇರುವುದು ತುಮಕೂರು ನಗರದಿಂದ ಆರು ಕಿಲೋಮೀಟರ್ ಹತ್ತಿರವಿರುವ ಬೆಳಗುಂಬ ಗ್ರಾಮದಲ್ಲಿ. ಶ್ರೀ ಗುರುಸಿದ್ಧರಾಮೇಶ್ವರರ ತಪೋಗದ್ದುಗೆ ಇರುವ ದೇವಾಲಯದ ಅವರಣದಲ್ಲಿ ಈ ವಚನ ಮಂಟಪವನ್ನು ನಿರ್ಮಾಣ ಮಾಡಲಾಗಿದೆ. ಈ ವಚನ ಮಂಟಪದ ಕರ್ತೃಗಳಾದ ಎಂ.ಬಸವಯ್ಯನವರು ಬಾಪೂಜಿ ವಿದ್ಯಾಸಂಸ್ಥೆ ತುಮಕೂರು ಸಂಸ್ಥಾಪಕ ಅಧ್ಯಕ್ಷರಾಗಿದ್ದು, ತಮ್ಮ ಕ್ರಿಯಾಶೀಲವಾದ ವಿಶೇಷವಾದ ಆಸಕ್ತಿಯಿಂದ ತಮ್ಮ 'ಶ್ರೀ ಜಗಜ್ಯೋತಿ ಬಸವೇಶ್ವರ ಟ್ರಸ್ಟ್' ಮೂಲಕ ಸುಮಾರು ಎಂಬತ್ತಕ್ಕೂ ಹೆಚ್ಚು ವಚನಗಳನ್ನು ಕಲ್ಲಿನ ಮೇಲೆ ಕೆತ್ತಿಸಿದ್ದಾರೆ. ಸರಳವಾದ ವಚನಗಳ ಆಯ್ಕೆಯನ್ನು ತುಮಕೂರು ಜಿಲ್ಲಾ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಎಂ.ಜಿ.ಸಿದ್ಧರಾಮಯ್ಯನವರು ಮಾಡಿದ್ದಾರೆ. ಒಂದೊಂದು ವಚನಗಳ ಓದು ಓದುಗರ ಚಿಂತನಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಮೇಲೆ ಮಂಟಪದ ರೀತಿಯಲ್ಲಿ ರಚನೆಯಾಗಿದ್ದು ನೋಡುಗರ ಗಮನ ಸೆಳೆಯುತ್ತದೆ. ನಮ್ಮ ಶರಣರ ತತ್ವ, ಅದರ್ಶ, ಚಿಂತನೆಗಳು ಎಲ್ಲಾ ಕಾಲಕ್ಕೂ ಶಾಶ್ವತವಾಗಿ ಉಳಿಯಬೇಕು. ಎಲ್ಲರ ಬದುಕಿನಲ್ಲಿ ಸಾಕಾರವಾಗಿ ಮಾನವೀಯವಾದ ಸಮಾಜ, ಆದರ್ಶ ವ್ಯಕ್ತಿತ್ವಗಳು ಸಮಾಜದಲ್ಲಿ ರೂಪ ತಾಳಬೇಕು ಎನ್ನುವ ಉದ್ದೇಶದ ಜೊತೆಗೆ ಮುಂದಿನ ಜನಾಂಗಕ್ಕೆ ತಲುಪಬೇಕು ಎನ್ನುವ ಪ್ರತಿಪಾದನೆಯನ್ನು ಶ್ರೀ ಜಗಜ್ಯೋತಿ ಬಸವೇಶ್ವರ ಟ್ರಸ್ಟ್ ಹೊಂದಿದೆ. ಇದೇ ಮಾದರಿಯಲ್ಲಿ ಬೇರೆ ಬೇರೆ ಕಡೆ ದೇವಾಲಯದ ಅವರಣದಲ್ಲಿ ಮಾಡುವ ಉದ್ದೇಶವನ್ನು ಒಳಗೊಂಡಿದೆ. ವಚನ ಮಂಟಪದ ಉದ್ಘಾಟನೆಯನ್ನು ಶ್ರೀ ಗುರುಸಿದ್ಧರಾಮೇಶ್ವರ ದೇವಾಲಯದ ಅವರಣದಲ್ಲಿ ಗ್ರಾಮಸ್ಥರು, ಭಕ್ತಾಧಿಗಳ, ಶ್ರೀ ಜಗಜ್ಯೋತಿ ಬಸವೇಶ್ವರ ಟ್ರಸ್ಟ್‌ನ ಪದಾಧಿಕಾರಿಗಳ ಸಮ್ಮುಖದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಡಾ. ಸಿ.ಸೋಮಶೇಖರ್, ಪೌಳಿಶಂಕರಾನಂದಪ್ಪನವರು, ಎಂ.ಬಸವಯ್ಯನವರು, ಎಂ.ಜಿ.ಸಿದ್ಧರಾಮಯ್ಯನವರು, ಸಾಹಿತಿಗಳಾದ ಸುಶೀಲಾ ಸದಾಶಿವಯ್ಯನವರು ಇವರಿಂದ ಕಾರ್ಯಕ್ರಮ ನೇರವೇರಿತು.

ಆಧುನಿಕ ಮನುಷ್ಯನ ಜೀವನದಲ್ಲಿ ಶಾಂತಿ, ಸುಖ, ನೆಮ್ಮದಿಗಳು ಕಡಿಮೆಯಾಗಿವೆ. ಆತ ಸಹಜ ಬದುಕನ್ನು ಬಿಟ್ಟು ಕೃತಕವಾದ ಯಾಂತ್ರೀಕೃತ ಜೀವನದತ್ತ ಮುಖಮಾಡಿ ಹಣ ಗಳಿಕೆಯೇ ಆತನ ಉದ್ದೇಶವಾಗಿ ತನ್ನ ಮಕ್ಕಳಿಗೆ ಮುಂದಿನ ಜನಾಂಗಕ್ಕೆ ತಾನು ಮಾದರಿಯಾಗಿ ಬದುಕುವುದನ್ನು ಬಿಟ್ಟು ಆತನ ಗಮನವೆಲ್ಲಾ ಹೊರಗಿನ ವಿಷಯಾಸಕ್ತಿಯ ಕಡೆಗೆ ಇದ್ದು, ಇದರಿಂದ ನಾನಾ ತರಹದ ಮಾನಸಿಕ, ದೈಹಿಕ ಸಮಸ್ಯೆಗಳಿಗೆ ಕಾರಣವಾಗುತ್ತಿರುವುದು ವಿಷಾದಕರವಾದ ಸಂಗತಿ. ಇದಕ್ಕೆಲ್ಲಾ ಉತ್ತಮ ಮದ್ದು ನಮ್ಮ ಶರಣರ ಸಂದೇಶಗಳು. ನಮ್ಮ ಶರಣರು ಬಾಳಿ ಬದುಕಿದ ವಿಧಾನ, ಅವರ ಸಹಜ ಸರಳ ಬದುಕಿನ ಮಾರ್ಗಗಳು ನಮಗೆಲ್ಲಾ ಸದಾ ಆದರ್ಶದ ದಾರಿದೀಪಗಳು. ಇಂತಹ ಮಹಾನ್ ಶರಣ ಸಂಸ್ಕೃತಿ ನಮ್ಮೆಲ್ಲರ ಜೀವನದಲ್ಲಿ ಹಾಸು ಹೊಕ್ಕಾಗಬೇಕು. ನಿತ್ಯ ಜೀವನದ ಮಂತ್ರವಾಗಬೇಕು ಆಗಲೇ ಮನುಷ್ಯನ ಜೀವನ ಪಾವನವಾಗುತ್ತದೆ. ಬಸವಾದಿ ಶರಣರ ನುಡಿಗಳು ನಮ್ಮ ಜನರಿಗೆ ತಲುಪಬೇಕೆಂಬ ಉದ್ದೇಶದಿಂದ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಭಕ್ತಿಯೋಗದ ಜೊತೆಗೆ ಜ್ಞಾನಯೋಗವೂ ಅವರಿಗೆ ಲಭ್ಯವಾಗಬೇಕು ಎಂಬ ಮಹತ್ತರವಾದ ತಮ್ಮ ಕನಸನ್ನು ವಚನ ಮಂಟಪದ ನಿರ್ಮಾಣದಲ್ಲಿ ಕಂಡಿದ್ದಾರೆ.



**ಸುಶೀಲಾ ಸದಾಶಿವಯ್ಯ**
'ಪ್ರಣವಂ' ಟೂಡಾಕಛೇರಿ ಹಿಂಭಾಗ
1ನೇ ಬ್ಲಾಕ್, 3ನೇ ಮೈನ್,
ಕುವೆಂಪುನಗರ, ತುಮಕೂರು.
ಮೊ : 7019843776

**'ಹೊನ್ನಿಗೆ ಬಂದಾತನಲ್ಲ,**
**ಹೆಣ್ಣಿಂಗೆ ಬಂದಾತನಲ್ಲ**
**ಅಶನಕ್ಕೆ ಬಂದಾತನಲ್ಲ,**
**ವಸನಕ್ಕೆ ಬಂದಾತನಲ್ಲ,**
**ಕೂಡಲಚೆನ್ನಸಂಗಯ್ಯಾ**
**ಭಕ್ತಿಯ ಪಥವ ತೋರ**
**ಬಂದನಯ್ಯಾ ಬಸವಣ್ಣನು'**

ಬಸವಾದಿ ಶರಣರು ಭಕ್ತಿಯ ಮಾಡಲೆಂದು ಹುಟ್ಟಿದವರು. ಭಕ್ತಿ ಶಿವನಲ್ಲಿ ಮನಸ್ಸನ್ನು ಒಂದಾಗಿಸಿದ ಅನುಭಾವದ ಜ್ಞಾನ ನಮ್ಮ ಅಂತರಂಗವನ್ನು ಬೆಳಗಿಸುತ್ತದೆ. ಅರಿವನ್ನು ಹೆಚ್ಚು ಮಾಡುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ' ಎನ್ನುವಂತೆ 'ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ' ಎನ್ನುವ ನುಡಿ ಜ್ಞಾನದ ಮಹತ್ವವನ್ನು ತಿಳಿಸುತ್ತದೆ. ಜ್ಞಾನದಲ್ಲಿ ನಮಗೆ ಎಂತಹ ಜ್ಞಾನಬೇಕು? ನಮ್ಮ ಅರಿವನ್ನು, ಜ್ಞಾನವನ್ನು ಹರಿತಗೊಳಿಸುವಂತ ವೈಚಾರಿಕ ಚಿಂತನೆ, ವಿಚಾರವಾದದ ಬೆಳಕು ಬೇಕು. ನಮ್ಮ ಮೌಢ್ಯತೆ, ಅಂಧಕಾರ ನಮ್ಮ ನಿತ್ಯದ ಜೀವನ ಕ್ರಮದಲ್ಲಿ ಒಂದಿಷ್ಟು ವಿಚಾರ ಮಾಡದೆ ಅನುಸರಿಸುವ ಪದ್ಧತಿಗಳು, ರೀತಿ, ನೀತಿಗಳು ಇವೆಲ್ಲಾ ನಮ್ಮ ಮೌಢ್ಯತೆಯನ್ನು ಸೂಚಿಸುತ್ತದೆ. ಪರಾಂಪರಿಕವಾಗಿ ನಡೆದುಕೊಂಡು ಬಂದಂತಹ ಕ್ರಮಗಳಲ್ಲಿ ಯಾವುದನ್ನೂ ವಿಚಾರಮಾಡದೆ, ಅದರ ಅಗತ್ಯ, ಒಳಿತು ಕೆಡುಕಗಳ ವಿಶ್ಲೇಷಣೆ ಇಲ್ಲದೆ, ನಮ್ಮ ಬದುಕನ್ನು ಸುಂದರವಾಗಿಸುವ ಅರ್ಥಪೂರ್ಣವಾಗಿಸುವ ಮೌಲ್ಯಯುತವಾಗಿಸುವ ಕ್ರಮಗಳೇ ಇಲ್ಲವೆಂದರೆ ಅದು ನಮ್ಮ ಅಜ್ಞಾನ, ಮೌಢ್ಯವೂ ಆಗುತ್ತದೆ. ಇಂತಹ ವಿಚಾರಗಳು ಯಾವುದೇ ವಿಶ್ಲೇಷಣೆ ಇಲ್ಲದ ನಮ್ಮ ಜಡತ್ವದ ಬದುಕನ್ನು ಎಚ್ಚರಿಸಿ ಕ್ರಿಯಾಶೀಲಗೊಳಿಸಿದವರು ನಮ್ಮ 12ನೇ ಶತಮಾನದ ಬಸವಾದಿ ಶರಣರು. ಅವರು ನೀಡಿದ ಒಂದೊಂದು ನುಡಿಮುತ್ತುಗಳು, ವಚನಗಳು ಎಲ್ಲ ಮಾನವರ ಬದುಕಿನ ದಾರಿದೀಪಗಳು. ನಮ್ಮ ನಡೆಯನ್ನು, ನುಡಿಯನ್ನು, ಆಚಾರವನ್ನು, ವಿಚಾರವನ್ನು ತಿದ್ದಿತೀಡಿದ ಶರಣರ ಸಮಾನ ಸಮಾಜದ ಮಾನವೀಯ ಚಿಂತನೆಗಳು ಎಲ್ಲಾ ಕಾಲಕ್ಕೂ ಸಲ್ಲುವಂತದ್ದು.

**'ಪಾತಾಳದಗ್ಗಣಿಯ ನೇಣಿಲ್ಲದೆ**
**ಸೋಪಾನ ಬಲದಿಂದಲ್ಲದೆ ತೆಗೆಯಬಹುದೆ?**
**ಶಬ್ದ ಸೋಪಾನವ ಕಟ್ಟಿ ನಡೆಸಿದವರು ಪುರಾತನರು**
**ದೇವಲೋಕಕ್ಕೆ ಬಟ್ಟೆ ಕಾಣಿರೋ**
**ಮರ್ತ್ಯಲೋಕದ ಮನದ ಮೈಲಿಗೆಯ ಕಳೆಯಲೆಂದು**
**ಗೀತಮಾತೆಂಬ ಜ್ಯೋತಿಯ ಬೆಳಗಿಕೊಟ್ಟರು**
**ಕೂಡಲಚೆನ್ನಸಂಗನ ಶರಣರು'**

ಚೆನ್ನಬಸವಣ್ಣನವರ ಅರ್ಥಪೂರ್ಣವಾದ ಈ ವಚನ, ವಚನಗಳ ಮಹತ್ವವನ್ನು ಬಿಂಬಿಸುತ್ತದೆ. ಪಾತಾಳದಲ್ಲಿರುವ ಅಮೃತದಂತ ಸಿಹಿಯಾದ ನೀರನ್ನು ಮೇಲಕ್ಕೆ ತರಬೇಕೆಂದರೆ ಅದಕ್ಕೆ ಹಗ್ಗದ ಸಹಾಯಬೇಕು. ಮೆಟ್ಟಿಲುಗಳು ಬೇಕಾಗುತ್ತದೆ. ನಾವು ಭವ ಬಂಧನದಿಂದ ಬಿಡುಗಡೆಗೊಂಡು ದೇವಲೋಕವನ್ನು ಕಾಣಬೇಕೆಂದರೆ ಅದಕ್ಕೆ ದಾರಿಯನ್ನು ತೋರಿಸುವುದು ವಚನಗಳ ರಚನೆಯಲ್ಲಿರುವ ನುಡಿಮುತ್ತುಗಳು ಮೆಟ್ಟಿಲುಗಳಂತೆ ಕಾರ್ಯ ನಿರ್ವಹಿಸುತ್ತವೆ. ನಮ್ಮ ಬಸವಾದಿ ಶರಣರು ಮರ್ತ್ಯಲೋಕದಲ್ಲಿ ಮನಕ್ಕೆ ಅಂಟಿದ ದ್ವೇಷ, ಕೋಪ, ಕೌರ್ಯ, ಅಸಹನೆ, ಮೋಸ ಇಂತಹ ನಾನಾ ರೀತಿಯ ಮೈಲಿಗೆಯ ಕಳೆಯಲೆಂದು ಮಾತೆಂಬ ವಚನ ಜ್ಯೋತಿಯನ್ನು ನಮಗೆ ಕೊಟ್ಟಿದ್ದಾರೆ. ಎಂಬುದು ಎಲ್ಲಾ ಕಾಲಕ್ಕೂ ಸಲ್ಲುವಂತದ್ದು. ನಮ್ಮ ಇಂದಿನ ಅಧುನಕ ಜೀವನ ಕ್ರಮಕ್ಕೆ ಇನ್ನೂ ಹೆಚ್ಚು ಅಗತ್ಯವಾಗಿ ಕಂಡುಬರುತ್ತದೆ. ಶರಣರು ಹಾಕಿಕೊಟ್ಟ ಭಕ್ತಿಯ ಜೊತೆಗೆ ಜ್ಞಾನ ಎಲ್ಲರಿಗೆ ತಲುಪಬೇಕು ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ನಮ್ಮ ಬದುಕು ಸಾರ್ಥಕವಾಗುತ್ತದೆ. ನಮ್ಮ ಬದುಕನ್ನು ನಮ್ಮನ್ನು ಪೂರ್ಣ ಬದಲಾಯಿಸುವ ಗುಣ ವಿಶೇಷತೆ ಶರಣರ ವಚನಗಳಲ್ಲಿದೆ. 'ವಚನ ಮಂಟಪ' ದ ಮೂಲಕ ಅಂತಹ ಓದು ಜನಸಾಮಾನ್ಯರಿಗೆ ಎಲ್ಲರಿಗೂ ಸಿಗಬೇಕು. ಶರಣ ಧರ್ಮದ ಹಿರಿಮೆ ನಮ್ಮೊಳಗಾಗಬೇಕು. ಜ್ಞಾನದ ಹಿರಿಮೆ ಬೆಳಕಾಗಬೇಕು.

## ಮನವಿ

**ನೊಳಂಬ ಅರಸರ ರಾಜ್ಯಭಾರ, ನೊಳಂಬ ಸಮುದಾಯದ ಮಠಗಳು, ಸಾಹಿತ್ಯ, ಇತಿಹಾಸ, ಕೃಷಿ, ಭಾಷೆ, ಬದುಕು, ಸಂಸ್ಕೃತಿ, ಸಾಂಸ್ಕೃತಿಕ ಚಟುವಟಿಕೆ, ವಾಸ್ತು ಶಿಲ್ಪಗಳ ಬಗ್ಗೆ ಅಧ್ಯಯನ ಮತ್ತು ಸಂಶೋಧನೆ ಮಾಡಲು ನೊಳಂಬ ಲಿಂಗಾಯತ ಸಂಘದಿಂದ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನೊಳಂಬ ಸಂಸ್ಕೃತಿ ಅಧ್ಯಯನ ಪೀಠವನ್ನು ಸ್ಥಾಪಿಸಿದ್ದು, ಅಧ್ಯಯನಕ್ಕಾಗಿ ಬರುವ ಅಭ್ಯರ್ಥಿ/ ಸಂಶೋಧಕರುಗಳಿಗೆ ಸೌಲಭ್ಯ ಕಲ್ಪಿಸಲು ಹಣದ ಕೊರತೆ ತುಂಬಾ ಇರುವುದರಿಂದ ದಾನಿಗಳಾದ ತಾವು ವಂತಿಗೆ ನೀಡಲು ಬಯಸಿದ್ದಲ್ಲಿ ಈ ಕೆಳಕಂಡ ಬ್ಯಾಂಕಿಗೆ ಹಣವನ್ನು ವರ್ಗಾವಣೆ ಮಾಡಲು ಮನವಿ ಮಾಡುತ್ತೇನೆ.**

| | |
|---|---|
| **ಹೆಸರು** | : ನೊಳಂಬ ಲಿಂಗಾಯತ ಸಂಘ (ರಿ.) |
| **ಬ್ಯಾಂಕ್** | : ಎಸ್.ಬಿ.ಐ. ಬಸವೇಶ್ವರನಗರ |
| **ಖಾತೆ ಸಂಖ್ಯೆ** | : **54033145493** |
| **ಐ.ಎಫ್.ಎಸ್.ಸಿ.** | : **SBIN0040624** |

# ವಚನ ಸಾಹಿತ್ಯ

12ನೇ ಶತಮಾನದ ವಚನ ಸಾಹಿತ್ಯ ಒಂದು ವಿಶ್ವ ವಿಸ್ಮಯ. ಅಂದಿನ ಶರಣರ ವಿಚಾರಧಾರೆಗಳು ಪ್ರಬುದ್ಧತೆಯುಳ್ಳವು. ಅನುಭಾವದೊಂದಿಗೆ ಸಾಮಾಜಿಕ ಪ್ರಜ್ಞೆ ಮೂಡಿಸುವ ಹಳೆತನವ ಕಳಚಿ ಹೊಸತನ ತರಲು ಹವಣಿಸಿದ್ದು ವಚನ ಸಾಹಿತ್ಯ. ವಚನ ವಾಹಿನಿಯು ಅಂದಿನ ಕ್ಲೇಶತೆಯ ಮನಸ್ಸುಗಳ ಮೈಲಿಗೆಯನ್ನು ತೊಳೆದು ಚಿತ್ತ ಶುದ್ಧಿ ಸಾಮಾಜಿಕ ಶುದ್ಧಿಯನ್ನು ತಂದಂತಹ ಯುಗವಾಗಿದೆ. ಕನ್ನಡ ಸಾಹಿತ್ಯವು ವಚನ ಸಾಹಿತ್ಯದಿಂದ ಸಮೃದ್ಧಿಗೊಂಡಿದೆ. ವಚನಕಾರರು ಕಾಯಕ ದಾಸೋಹಂ ಭಾವದಿಂದ ಬದುಕನ್ನು ಸಾರ್ಥಕತೆಯೆಡೆ ಕೊಂಡೊಯ್ದ ಅನುಭಾವಿಗಳು. ಶುದ್ಧ ಬದುಕಿಗೆ ಬೇಕಾದ ಸಪ್ತಶೀಲತ್ವಗಳನ್ನು ಆಚರಣೆಯಲ್ಲಿ ತಂದರು. ಈ ಸಪ್ತ ಸೂತ್ರಗಳು ವಿಶ್ವಕ್ಕೆ ಬೇಕಾದ ಸಾಂಸ್ಕೃತಿಕ ಸಂಪತ್ತಾಗಿದೆ. ವಚನಕಾರರು ಬರಿಯ ಅನುಭವಿಗಳಲ್ಲ. ಸರ್ವರಿಗೂ ಸಮಪಾಲು ಸಮಬಾಳು ಎಂಬ ಉದ್ದೇಶವನ್ನು ತಿಳಿದ ಅನುಭಾವಿಗಳು. ತಮ್ಮ ತಾತ್ವಿಕ ವಿಚಾರಗಳನ್ನು ಜನರಾಡುವ ಭಾಷೆಯಲ್ಲೇ ಬರೆದು ಜನಮಾನಸಕ್ಕೆ ಮುಟ್ಟಿಸಿದರು. ಧರ್ಮ ಸಂಪ್ರದಾಯದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆಗಳನ್ನು ತಪ್ಪಿಸುವಲ್ಲಿ ತಮ್ಮ ಬದುಕನ್ನೇ ಮೀಸಲಿಟ್ಟರು. ಬೆಂಕಿಯುಂಡು ಬೆಳಕು ನೀಡಿದ ಶರಣರು ಸರ್ವಸಮಾನತೆಗಾಗಿ ದುಡಿದರು.ಅನುಭವಿಕ ನೆಲೆಯಲ್ಲಿ ಅನುಭವ ಮಂಟಪದಲ್ಲಿ ಲಿಂಗ ಜಾತಿ ಮತದ ತಾರತಮ್ಯ ವಿಲ್ಲದೆ ಹೊರಹೊಮ್ಮುತ್ತಿದ್ದ ವಚನಾನುಸಂಧಾನಗಳು ಸಂವಿಧಾನವೇ ಆಗಿದೆ. ಇದೊಂದು ಅನನ್ಯ ಅಪೂರ್ವ ಅದ್ಭುತ ಸಾಹಿತ್ಯ ಸಂಚಯವಾಗಿದೆ. ವಚನಕಾರರನ್ನು ನಾಲ್ಕು ಭಾಗಗಳಾಗಿ ವಿಂಗಡಿಸುತ್ತಾರೆ. ಬಸವ ಪೂರ್ವ ವಚನ ಕಾರರು, ಬಸವಯುಗದ ವಚನಕಾರರು, ಬಸವೋತ್ತರ ವಚನಕಾರರು, ಆಧುನಿಕ ವಚನ ಕಾರರು ಎಂದು.

ವೋತಪ್ರೋತವಾಗಿ 12ನೇ ಶತಮಾನದಿಂದ ಹರಿದ ವಚನ ಗಂಗೆಯು ನಂತರದ ದಿನಗಳಲ್ಲಿ ಹಲವು ಸ್ವಾಮೀಜಿ ಯವರ ಮನದಾಳದಿಂದ ಅಲೆ ಅಲೆಯಾಗಿ ಹರಿದು ಬಂದಿದೆ. ಕನ್ನಡ ತಾಯಿಯ ಕೃಪೆ ಬಹುದೊಡ್ಡದು. 15 ಮತ್ತು 17ನೇ ಶತಮಾನದಲ್ಲಿ ತೋಂಟದ ಸಿದ್ದಲಿಂಗ ಶಿವಯೋಗಿಗಳು, ಸ್ವತಂತ್ರ ಸಿದ್ದಲಿಂಗೇಶ್ವರರು ಕಾಡಸಿದ್ದೇಶ್ವರರು ಘನಲಿಂಗದೇವರು, ದೇವರಗಿಂಯು ಷಣ್ಮುಖ ಮಹಾಸ್ವಾಮಿಗಳು ವಚನಗಳನ್ನು ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ರಚಿಸಿದ್ದಾರೆ. ಇವರೆಲ್ಲರೂ ಬಸವೇಶ್ವರರ ನಿಲುವುಗಳನ್ನೇ ಮುಂದುವರಿಸಿದ ಶ್ರೇಷ್ಠವಾದ ಅನುಭಾವಿಗಳಾಗಿದ್ದಾರೆ. 12ನೇ ಶತಮಾನದಲ್ಲಿ ನೆಲೆಕಂಡ ವಚನ ಸಾಹಿತ್ಯವೆಂಬ ನದಿಯು ಬತ್ತದೇ ಬಾಡದೆ ಈ 21ನೇ ಶತಮಾನದಲ್ಲಿ ಆಧುನಿಕ ವಚನಗಳೆಂಬ ಹೆಸರಿನಲ್ಲಿ ಗರಿಗೆದರಿ ನಿಂತಿದೆ. ಶರಣ ಸಾಹಿತ್ಯದ ಪ್ರಭಾವದಿಂದ ಮಿಂದೆದ್ದವರು ಈ 21ನೇ ಶತಮಾನದಲ್ಲಿ ಆಧುನಿಕ ವಚನಗಳನ್ನು ರಚಿಸಿದ್ದಾರೆ. ಇವರ ರಚನೆಗೆ ಶರಣರ ವಚನಗಳೇ ಪ್ರೇರಣೆ ಮತ್ತು ಪ್ರಭಾವ ಬೀರಿವೆ.

ಪ್ರಸ್ತುತ ಜಗತ್ತಿನ ಒಳನೋಟಗಳನ್ನು ತೆರೆದಿಡುವ ಅಭಿಪ್ಸೆಯನ್ನು ಆಧುನಿಕ ವಚನಗಳಲ್ಲಿ ನಾವು ಕಾಣಬಹುದು. ಡಾ. ಜ.ಚ.ನಿ, ಸಿದ್ದಯ್ಯ ಪುರಾಣಿಕರು, ಮೂಜಗಂ, ಮಹದೇವ ಬಣಕಾರರು, ಎಸ್ ವಿ. ಪರಮೇಶ್ವರ ಭಟ್ಟರು ಸಂಗಮೇಶ ಹೊಸಮನಿ ಸಂಗಮೇಶ ಹಂಡಗಿ ಡಾ. ಸಿಪಿಕೆ, ಕುಮಾರ ಕಕ್ಕಯ್ಯ ಪೋಳ, ಜರಗನಹಳ್ಳಿ ಶಿವಶಂಕರ್, ಚಂದ್ರಯ್ಯ ನಾಯ್ಡು,, ಶಿವಶಗಂಗಮ್ಮ ಹೊಸಮನಿ ವಾಗ್ದೇವಿ ಪಾಟೀಲ, ಗುರುದೇವಿ ಹಿರೇಮಠ, ಶಾಂತಾಬಾಯಿ, ಕಮಲ ಹಂಪನಾ, ಮಾತೆಮಹಾದೇವಿ ಶಿವಲಿಂಗಮ್ಮ ಕಟ್ಟಿ, ಚೆನ್ನಕ್ಕ ಪಾವಟೇ, ಚನ್ನಣ್ಣ ವಾಲೀಕರ ಸಿದ್ದಲಿಂಗ ಮಹಾಸ್ವಾಮಿಗಳು ಸರಸ್ವತಿ ಚಿಮ್ಮಲಗಿ, ಮಳಲಿ ವಸಂತಕುಮಾರ್, ಭಾಗ್ಯ ಎಂ.ವಿ, ಕೊಟ್ರೇಶ್ ಉಪ್ಪಾರ್, ಸುಶೀಲಾ ಸೋಮಶೇಖರ್, ಮುಂತಾದ ನೂರಾರು ಜನ ಆಧುನಿಕ ವಚನಕಾರರು ತಮ್ಮ ವೈವಿಧ್ಯಪೂರ್ಣ ವಸ್ತುವುಳ್ಳ ವಚನಗಳನ್ನು ಬರೆದು ಆಧುನಿಕ ವಚನ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಗಾಯಕರು, ಕೃಷಿಕರು, ವೈದ್ಯರು, ಮಹಿಳೆಯರು ಹೀಗೆ ಎಲ್ಲಾ ವರ್ಗದ ಎಲ್ಲಾ ವಯೋಮಾನ ದವರು ಆಧುನಿಕ ವಚನಗಳನ್ನು ರಚಿಸುತ್ತಿರುವುದು ಈ ಸಾಹಿತ್ಯದ ವಿಫಲತೆಗೆ ಕಾರಣವಾಗಿದೆ. ಇದೊಂದು ಸಾರ್ವತ್ರಿಕ ಮಾಧ್ಯಮವಾಗಿ ಬೆಳೆಯುತ್ತಿದೆ. 'ಜನ ಸೇವಕನ ವಚನಗಳು' ಎಂಬ ಹೆಸರಿಂದ ಆಧುನಿಕ ವಚನ ಕೃತಿಯನ್ನು



**ಸುಶೀಲ ಸೋಮಶೇಖರ್**
ಚೈತ್ರೋದಯ, ಪ್ರೆಸಿಡೆನ್ಸಿ ಕಾಲೇಜು ಹಿಂಭಾಗ, ಸಾಲಗಾಮೆ ರಸ್ತೆ,
ಹಾಸನ–573201
ಮೊ : 9448997084

ಹೊರ ತಂದಿರುವ ಮೊದಲಿಗರು ಹರ್ಡೇಕರ್ ಮಂಜಪ್ಪನವರು ಎನ್ನುತ್ತಾರೆ. ಇದು ಗಣಕ ಯಂತ್ರ ಅಂತರ್ಜಾಲದ ಜಗತ್ತು. ವೈಜ್ಞಾನಿಕ ಸಾಧನಗಳು ಬಂದ ಮೇಲೆ ವಿಶ್ವವೇ ಸಂಕುಚಿತಗೊಂಡಿದೆ.ವಿಶ್ವದೆಲ್ಲ ಆಗು ಹೋಗುಗಳನ್ನು ಕ್ಷಣಾರ್ಧದಲ್ಲಿ ನಾವು ತಿಳಿಯಬಹುದಾಗಿದೆ. ವೈಜ್ಞಾನಿಕವಾಗಿ ನಾಗಾಲೋಟದಲ್ಲಿ ಓಡುತ್ತಿರುವ ಈ ಕಾಲದಲ್ಲಿ ಓದುವವರ ಸಂಖ್ಯೆ ಕಡಿಮೆಯಾಗುತ್ತಿದೆಯಾದರೂ ಸಾಹಿತ್ಯವು ಬೌದ್ಧಿಕ ಮನಸುಳ್ಳವರನ್ನು ಆಕರ್ಷಿಸುತ್ತದೆ. ಇಲ್ಲಿ ಬೌದ್ಧಿಕತೆಯ ವಿಸ್ತಾರವಿರುತ್ತದೆ. 12ನೇ ಶತಮಾನದಲ್ಲಿ ನಡೆದ ವಚನ ಕೃಷಿ ಸೃಜನಶೀಲತೆ ಅನುಭಾವ ಮಾನವೀಯ ಮೌಲ್ಯಗಳಿಂದ ತುಂಬಿದ ವಚನಕಾರರ ಶೈಲಿಯನ್ನೇ ಇಂದಿನ ವಚನಕಾರರು ಅನುಸರಿಸಿ ಬರೆದರು.

ಆಧುನಿಕ ವಚನಗಳು ಧಾರ್ಮಿಕತೆಗಿಂತ ಸಾಂಸ್ಕೃತಿಕ ಸಾಮಾಜಿಕ ಶೈಕ್ಷಣಿಕ ಕ್ಷೇತ್ರಗಳಿಗೆ ಹೆಚ್ಚು ಮಾನ್ಯತೆ ನೀಡುತ್ತಿರುವಂತೆ ತೋರುತ್ತದೆ. ಅಂದಿನ ಶರಣರು ಧಾರ್ಮಿಕ ತತ್ವಗಳನ್ನು ಮುಂದಿಟ್ಟುಕೊಂಡು ವಚನಗಳನ್ನು ರಚಿಸಿದರೆ ಇಂದಿನವರು ಲೌಕಿಕ ನೆಲೆಗಟ್ಟಿನಲ್ಲಿ ಬಹುಮಟ್ಟಿನ ವಚನಗಳನ್ನು ಬರೆಯುತ್ತಿದ್ದಾರೆ. ದೇವರು, ಧರ್ಮ, ಅಷ್ಟಾವರಣಗಳು ಷಟ್ಸ್ಥಲಗಳು ಈ ನಿಟ್ಟಿನಲ್ಲಿ ಅಂದಿನ ವಚನ ರಚನೆ ಕಂಡು ಬರುತ್ತದೆ. ಅಲ್ಲಿ ಕಾವ್ಯದ ನೆರಳನ್ನು ಕಾಣುತ್ತೇವೆ. ಬದುಕಿನ ಮೂಲ ಶಕ್ತಿಗಳಾದ ಶ್ರದ್ಧೆ, ನಿಷ್ಠೆ, ಸಚ್ಚಿಂತನೆ, ದಯಾಪರತೆ, ನೀತಿ, ನ್ಯಾಯ ಮುಂತಾದ ಸದ್ವಿಚಾರಗಳ ಸತ್ಯದರ್ಶನವನ್ನು ಕಾಣುತ್ತೇವೆ. ಅಂದಿನ ವಚನಗಳಿಗೆ ಜೀವಜ್ಯೋತಿಯಾಗಿದ್ದವರು ಅಸಹಾಯಕತನ, ಬಡತನ, ಅಸ್ಪೃಶ್ಯತೆ ದೀನತನ, ದರಿದ್ರತನದಲ್ಲಿ ಬಳಲುತ್ತಿದ್ದ ಸಾಮಾನ್ಯ ಜನರು. ಇವರಿಗೆ ಹೊಸ ಬದುಕು ರೂಪಿಸುವ ಎಲ್ಲಾ ರೀತಿಯ ಮಾರ್ಗಗಳನ್ನು ಶರಣರು ರೂಢಿಗೆ ತಂದರು.

ಆಧುನಿಕ ವಚನ ಸಾಹಿತ್ಯ ಇತ್ತೀಚೆಗೆ ಪರಿಣಾಮಕಾರಿಯಾಗಿರುವುದು ಆರೋಗ್ಯಕರ ಲಕ್ಷಣವಾಗಿದೆ. ಆಧುನಿಕ ವಚನಗಳಲ್ಲಿ ಜೀವಪರ ನಿಲುವುಗಳಿವೆ. ವಸ್ತು ವಿಷಯದ ಅರಹು ಹೆಚ್ಚುತ್ತಿದೆ. ಕನ್ನಡ ಭಾಷೆಯ ಅಭಿವ್ಯಕ್ತಿ ಸಾಮರ್ಥ್ಯ ವೃದ್ಧಿಸುತ್ತಿದೆ. ಆಧುನಿಕ ವಚನ ರಚನೆ ಯಾವುದೇ ಒಂದು ಧರ್ಮಕ್ಕೆ ಸೀಮಿತವಾಗಿಲ್ಲ. ಆಧುನಿಕ ವಚನ ಸಾಹಿತ್ಯಕ್ಕೆ ನಾಲ್ಕು ಆಯಾಮಗಳಿಗೆ ಎನ್ನುತ್ತಾರೆ. ಭಕ್ತಿ, ಅನುಭಾವ, ವೈಚಾರಿಕ ಪ್ರಜ್ಞೆ, ಸಾಮಾಜಿಕ ಚಿಂತನೆ. ಇಂದಿನ ಜಾಗತೀಕರಣ ಉದಾರೀಕರಣ ಖಾಸಗಿಕರಣ ಔದ್ಯೋಗಿಕರಣಗಳು ಸಾಹಿತ್ಯ ಕ್ಷೇತ್ರದ ಮೇಲು ಪ್ರಭಾವ ಬೀರುತ್ತಿವೆ. ವಚನಕಾರರ ಬರಹಕ್ಕೆ ಬಲ ತುಂಬುತ್ತಿವೆ ಪ್ರಸ್ತುತ ಕಾಲಘಟ್ಟದ ಅನೇಕ ಸಮಸ್ಯೆಗಳು ಸಾಮಾಜಿಕ ದುಷ್ಟ ಪದ್ದತಿಗಳು ವಚನಕಾರರಲ್ಲಿ ವೈಚಾರಿಕತೆಯನ್ನು ತಾರ್ಕಿಕ ಮನೋಭಾವವನ್ನು ಒಡ ಮೂಡಿಸುತ್ತಿವೆ. ದೇಶದ್ರೋಹ, ಬರಡು ಆಶ್ವಾಸನೆಗಳು, ಕೋಮು ದ್ವೇಷ, ಕೊಲೆ ಸುಲಿಗೆ ಅಸಹಾಯಕರ ದುರ್ಬಲರ ಮಹಿಳೆಯರ ಶೋಷಣೆ, ಭಯೋತ್ಪಾದನೆ, ರೈತರ ಸಂಕಷ್ಟಗಳು ಆತ್ಮಹತ್ಯೆಗಳು, ವೃದ್ಧರ ಊಟ ಸ್ಥಿತಿಗತಿಗಳು ಆತ್ಮಾಹುತಿ ಧಾಳಿ, ಭ್ರಷ್ಟಾಚಾರ ಮಹಿಳಾ ಲೈಂಗಿಕ ಶೋಷಣೆ ರಾಜಕೀಯ ಧುರೀಣರ ದ್ವಿಮುಖಿಗಳು ಮುಂತಾದ ವಸ್ತು ವೈವಿಧ್ಯಗಳು ಆಧುನಿಕ ವಚನ ಬರಹಗಾರರನ್ನು ಪ್ರೇರೇಪಿಸುತ್ತವೆ. ಆಧುನಿಕ ವಚನಗಳು ಶೋಷಿತರ ದುಃಖಿತರ ದುರ್ಬಲರ ದೀನದಲಿತರ ವಾಣಿಯಾಗುವ ನಿಟ್ಟಿನಲ್ಲಿ ಸಾಗುತ್ತಿವೆ.

ಇವರು ಬಳಸುವ ತಮ್ಮ ತಮ್ಮ ಇಷ್ಟದೈವದ ಅಂಕಿತನಾಮ ಅಂದಿನ ಶರಣರಂತೆ ಆಧುನಿಕ ವಚನಕಾರರ ವಚನಗಳನ್ನು ಓದುವವರ ಮನವನ್ನು ಹದಿಯುತ್ತವೆ. ಓದುಗರಲ್ಲೂ ವೈಚಾರಿಕ ಪ್ರಜ್ಞೆ ಮೂಡಿಸುತ್ತವೆ. ಇಂದು ಸಾಹಿತ್ಯ ಚರಿತ್ರೆಯಲ್ಲಿ 20–21ನೇ ಶತಮಾನದ ವಚನ ಸಾಹಿತ್ಯವನ್ನು ಆಧುನಿಕ ವಚನ ಸಾಹಿತ್ಯವೆಂದು ಪರಿಗಣಿಸಲಾಗುವುದು. ಸಿದ್ದಯ್ಯ ಪುರಾಣಿಕರ ವಚನೋದ್ಯಾನಕ್ಕೆ ಸಿಕ್ಕ ಮನ್ನಣೆ ಬಹುದೊಡ್ಡದು. ಹಿಂದಿ ಮರಾಠಿ ಆಂಗ್ಲ ಭಾಷೆ ಫ್ರೆಂಚ್ ಉರ್ದು ಭಾಷೆಗೆ ಈ ಕೃತಿ ಅನುವಾದ ಗೊಂಡಿದೆ. ಅಂತೆಯೇ ಕಲ್ಕತ್ತೆಯ ಭಾರತೀಯ ಭಾಷಾ ಪರಿಷತ್ತಿನ ಪುರಸ್ಕಾರ ದೊರೆತಿರುವುದು ಇವೆಲ್ಲವೂ ಕನ್ನಡ ಸಾಹಿತ್ಯದ ಆಧುನಿಕ ವಚನಗಳಿಗೆ ಇರುವ ಮಾನ್ಯತೆಗೆ ಸಾಕ್ಷಿಯಾಗಿದೆ. ಪ್ರಸ್ತುತ ಕಾಲದ ವಸ್ತು ವಿನ್ಯಾಸಗಳೇ ಆಧುನಿಕ ವಚನಗಳ ವಸ್ತುವಾಗಿದೆ. ಸತ್ವಯುತ ವೈವಿಧ್ಯಮಯ ಆಧುನಿಕ ವಚನಗಳು ರಚನೆಯಾಗಿವೆ. ಈಗಲೂ ಆಗುತ್ತಿವೆ. ಕಿರಿದರಲ್ಲಿ ಪಿರಿದರ್ಥ ನೀಡುವ ಶಕ್ತಿ ಆಧುನಿಕ ವಚನಗಳಲ್ಲೂ ವೈಚಾರಿಕತೆಯ ನಿಲುವುಗಳು ಇವೆ. ನಿದರ್ಶನಕ್ಕಾಗಿ ಸಿದ್ದಯ್ಯ ಪುರಾಣಿಕರು, ಇತರರ ಈ ವಚನಗಳನ್ನು ನೋಡಬಹುದು.

**ಗೊನೆ ಹೊತ್ತ ಬಾಳೆ ಬಾಗುತ್ತದೆ**
**ತೆನೆ ಹೆತ್ತದಂಟು ಬಾಗುತ್ತದೆ,**
**ಫಲ ಹೊತ್ತ ಮರ ಬಾಗುತ್ತದೆ**
**ಏನೇನು ಇಲ್ಲದುದು, ಬೀಗುತ್ತದೆ**
**ನೋಡ ಸ್ವತಂತ್ರ ಧೀರ ಸಿದ್ದೇಶ್ವರಾ**

**ಕರಡಿ ಕೈ ಮುಗಿವಂತೆ ಮರ್ಕಟ ಮರವ ಸುತ್ತುವಂತೆ**
**ಕಾವಿಯ ಕಂಡು ಕಾಲಿಗೆರಗುವುದ ನಿಲ್ಲಿಸಿರೊ**

**ಗುಡಿಯ ಕಂಡು ಸುತ್ತುವುದ ಮಾಣಿಸಿರೋ**
**ಕಾವಿಯ ತೊಡದ ಕಾಮವ ಸುಟ್ಟಾತಂಗೆ**
**ಅಡಿಗಡಿಗೆ ಕಾಲಿಗೆರಗಿರೋ**
ಎನ್ನುತ್ತಾರೆ ಮಹದೇವ ಬಣಕಾರರು.

ಕುಮಾರ ಕಕ್ಕಯ್ಯ ಪೋಳ ಅವರು ನವ ನಾಗರಿಕತೆಯ ಮೆರುಗನ್ನು ಹೀಗೆ ತಿಳಿಸಿದ್ದಾರೆ;
**ವಶೀಲಿಯಂ ಇದ್ದಂ ವಿಶ್ವಂ ಎನ್ನುವ ರಾಜಕಾರಣ**
**ಲಂಚ ಕೊಟ್ಟು ಮಂಚ ಏರು ಎನ್ನುವ ಆಡಳಿತ**
**ಕಾಂಚಾಣಂ ಕಾರ್ಯಸಿದ್ಧಿ ಎನ್ನುವ ಸಮಾಜ**
**ಲಂಚ ವಂಚನೆ ವ್ಯಭಿಚಾರ ಮಾಡಿಯು**
**ಮಾಡದಂತಿರುವವನೇ ಪ್ರಚಲಿತ ನಾಗರೀಕನೆಂದ**
**ಕುಮಾರ ಕಕ್ಕಯ್ಯ**

ಇನ್ನು ಕಮಲ ಹಂಪನಾ ಅವರ ಒಂದು ಸಾಮಾಜಿಕ ಪಿಡುಗು ವರದಕ್ಷಣೆಯನ್ನು ಕುರಿತು ಹೀಗೆ ಹೇಳಿದ್ದಾರೆ;
**ಅಕ್ಷತೆ ಸುರಿದ ಕೈಯಲೇ ಸೀಮೆ ಎಣ್ಣೆ ಸುರಿವರಯ್ಯ**
**ಅರಿಶಿಣ ಹಚ್ಚಿದ ಕೈಯಲೇ ಬೆಂಕಿ ಹಚ್ಚಿ ಸುಡುವರಯ್ಯ**
**ವಧು ಮಾಡಿ ಮನೆ ತುಂಬಿಸಿಕೊಂಡವರೇ**
**ಹೆಣ ಮಾಡಿ ಆಚೆ ಸಾಗಿಸುವರಯ್ಯ**
**ಕಮಲಾ ಪ್ರಿಯ**

ಸಮಾಜ ಹಿತ ಬಯಸುವ ಆಧುನಿಕ ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ರೂಪಕ ಉಪಮೇಯಗಳು ಸಂಕೇತಗಳು, ಪ್ರತಿಮೆಗಳು ಬಳಕೆಯಾಗಿವೆ. ಮೌಢ್ಯತೆಗಳ ಖಂಡನೆ ಇದೆ. ಒಟ್ಟಿನಲ್ಲಿ ಕೆಲವು ಆಧುನಿಕ ವಚನಕಾರರ ವಚನಗಳು ಪ್ರಾಚೀನ ವಚನ ಸಾಹಿತ್ಯದಂತೆ ಸತ್ವದಿಂದ ಕೂಡಿ ಸಮೃದ್ಧಿಗೊಂಡು ವೈವಿಧ್ಯವಾಗಿ ಸಂಪನ್ನಗೊಂಡಿದೆ. ಇಲ್ಲಿ ಜೀವನ ಸಂಭ್ರಮವೂ ಇದೆ. ಇತ್ತೀಚಿನ ದಿನಗಳಲ್ಲಿ ಆಧುನಿಕ ವಚನಗಳನ್ನು ಬರೆಯುವವರ ಸಂಖ್ಯೆ ಹೆಚ್ಚುತ್ತಿದೆ. ಕೆಲವರು ಸುಮಾರು 1000 ಜನ ಆಧುನಿಕ ವಚನಕಾರರು ಇದ್ದಾರೆ ಎನ್ನುತ್ತಾರೆ. ಆಧುನಿಕ ವಚನ ರಚನೆಯು ಕೇವಲ ಪ್ರಾಸಬದ್ಧತೆಗೆ ಪದ ಜೋಡಣೆಗೆ ಮೀಸಲಾಗಬಾರದು. ಧ್ವನಿಯುಕ್ತ ಪದ ವಚನದ ಮೌಲ್ಯವನ್ನು ಹೆಚ್ಚಿಸುತ್ತದೆ. ಇವು ಸಹೃದಯರೆದೆಯನ್ನು ಮುಟ್ಟಿ ತಟ್ಟಿ ರಸಾನುಭವ ನೀಡುತ್ತವೆ. ವಿವೇಚನೆಗೆ ಒಳಗು ಮಾಡುತ್ತವೆ. ಪ್ರಸ್ತುತ ಬದುಕಿನ ಆಗುಹೋಗುಗಳೇ ಆಧುನಿಕ ವಚನಗಳ ವಸ್ತುವಾಗಿರುವುದರಿಂದ ತ್ವರಿತ ಗತಿಯಲ್ಲಿ ಸಕಲರ ಮನವನ್ನು ಮುಟ್ಟುತ್ತವೆ. ಪ್ರಚಲಿತ ವಿಚಾರಗಳನ್ನು ಪ್ರತಿಪಾದಿಸುತ್ತವೆ. ಮಾತು ಸರಳವಿದ್ದು ಭಾವ ವಿಶಿಷ್ಟವಿದ್ದಲ್ಲಿ ಸಮಕಾಲಿನ ಸಮಾಜಕ್ಕೆ ಕನ್ನಡಿಯಾಗುತ್ತದೆ. ಆಧುನಿಕ ವಚನ ಸಾಹಿತ್ಯ ಕೂಡ ಉತ್ತಮ ಪ್ರಕಾರವೇ. ಆದರೆ ಸಿಗಬೇಕಾದ ಗೌರವ ಮನ್ನಣೆ ಸಿಗದೇ ಅವಗಣನೆಗೆ ಗುರಿಯಾಗುತ್ತಿರುವುದು ವಿಷಾದನೀಯ. ಇಂತಹ ಸಂದರ್ಭದಲ್ಲಿ ಅಪರೂಪ ಎಂಬಂತೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ರಮಣಶ್ರೀ ಪ್ರತಿಷ್ಠಾನ ಉತ್ತಮ ಆಧುನಿಕ ವಚನ ಕೃತಿಗೆ ವರ್ಷಕ್ಕೊಮ್ಮೆ ರಮಣ ಶ್ರೀ ಶರಣ ಪ್ರಶಸ್ತಿ ನೀಡಿ ಈ ಪ್ರಕಾರಕ್ಕೆ ಪ್ರೋತ್ಸಾಹ ನೀಡುತ್ತಿರುವುದು ಸಂತಸದ ವಿಷಯ ಮಾನವೀಯತೆಯನ್ನು ಹೃದಯದಲ್ಲಿ ತುಂಬಿಕೊಂಡು ಈ ಪ್ರಕಾರದ ಮೌಲಿಕತೆಯನ್ನು ಹೆಚ್ಚಿಸುವ ಸಾರ್ವಕಾಲಿಕ ಸಾಹಿತ್ಯವಾಗಿದೆ. ಇಂದಿನ ವಚನಕಾರರು ಪ್ರಸ್ತುತ ಸಮಾಜದ ಒಳ್ಳೆಯದು ಮತ್ತು ಕೆಟ್ಟದ್ದನ್ನು ವಿವೇಚಿಸಿ ನ್ಯಾಯ ಅನ್ಯಾಯಗಳ ಮಂಡನೆಯನ್ನು ವಚನಗಳ ಮೂಲಕ ತಿಳಿಸಿದ್ದಾರೆ. ಲೋಕಾನುಭವವು ಇದರಲ್ಲಿ ಹರಡಿದೆ. ವಿಮರ್ಶೆಗಳಿವೆ. ಆದರೆ ಕಲಾತ್ಮಕ ನಿರೂಪಣೆಗೆ ಇನ್ನು ಕಸರತ್ತು ಮಾಡಬೇಕಿದೆ. ಒಟ್ಟಿನಲ್ಲಿ ಅಂದಿನ ಅಥವಾ ಇಂದಿನ ವಚನ ಸಾಹಿತ್ಯವು ಸಕಲರಿಗೂ ಸಚ್ಚಾರಿತ್ರ್ಯವನ್ನು ಬಿತ್ತುವ, ಜೀವನ ಮೌಲ್ಯಗಳನ್ನು ತಿಳಿಸುವುದೇ ಆಗಿದೆ.

ಆಧುನಿಕ ವಚನ ಸಾಹಿತ್ಯದ ಬಗ್ಗೆ ಹೆಚ್.ತಿಪ್ಪೇರುದ್ರ ಸ್ವಾಮಿಯವರು ಕಾವ್ಯಾನಂದರ 'ವಚನ ನಂದನ' ಕೃತಿಗೆ ಮುನ್ನುಡಿ ಬರೆಯುತ್ತಾ ಈ ಶತಮಾನದ ವಚನ ಸಾಹಿತ್ಯ, 12ನೇ ಶತಮಾನದ ಆಂದೋಲನಕ್ಕಾಗಲಿ 15 ಮತ್ತು 17ನೇ ಶತಮಾನದ ಧಾರ್ಮಿಕ ಶ್ರದ್ಧೆಯ ಸಾಧನೆಗಾಗಲಿ ಮಾಧ್ಯಮವಾದಂತೆ ಆಧುನಿಕ ವಚನಗಳು ಇಂದು ಯಾವುದೇ ಸಾಮಾಜಿಕ ಹಾಗೂ ಧಾರ್ಮಿಕ ಶ್ರದ್ಧೆಗೆ ಬದ್ಧವಾಗಿಲ್ಲ 12ನೇ ಶತಮಾನದ ವಚನಗಳ ಅಭಿವ್ಯಕ್ತಿಯ ಸಾಧ್ಯತೆಗಳು ಮಾತ್ರ ಇಂದಿನ ವಿಚಾರವಂತರನ್ನು ಆಕರ್ಷಿಸಿದವು. ಅಂದಿನಂತೆ ಇಂದು ವಚನಗಳು ಸಾಮೂಹಿಕ ಜನಜಾಗ್ರತೆಗೆ ಕಾರಣವಾದ ಧಾರ್ಮಿಕ ಕಿಡಿಗಳ ಬೆಳಗದೆ ವೈಯಕ್ತಿಕ ಸಾಧನೆಯ ಅಭಿವ್ಯಕ್ತಿ ಮಾಧ್ಯಮವಾಗಿ ಬೆಳೆದು ಬಂದಿದೆ. ಇದು ಆಧುನಿಕ ವಚನ ಸಾಹಿತ್ಯಕ್ಕೆಲ್ಲ ಒಟ್ಟಾಗಿ ಅನ್ವಯಿಸುವ ಮಾತು ಎನ್ನುತ್ತಾರೆ.

ಮತ್ತೊಂದೆಡೆ ಡಾ. ಸಿದ್ದಯ್ಯ ಪುರಾಣಿಕರು 20ನೇ ಶತಮಾನವು ಆಧುನಿಕ ವಚನ ಸಾಹಿತ್ಯ ವೈಪುಲ್ಯದೊಡನೆ ಕೊನೆಗಾಣದೆ ಬದುಕು ಮತ್ತು ಸಮಾಜದಲ್ಲಿ ಒಂದಾಗಬೇಕು. ಅಂದಿನ ವಚನಗಳಂತೆ ಇಂದಿನ ವಚನಗಳಿಗೆ ಒಂದು

**37ನೇ ಪುಟಕ್ಕೆ.............**

# ಗಂಗ – ನೊಳಂಬರ ಕಾಲದ ಕೀಟ್ಟುಗಂಟೆ ಸ್ಮಾರಕಗಳು

**ದೊಡ್ಡಹುಂಡಿ ಕೀಟ್ಟುಗಂಟೆ ಸ್ಮಾರಕ. (ಕ್ರಿ.ಶ.840–869)**

ಮೈಸೂರು ಜಿಲ್ಲೆಯ ಟಿ.ನರಸೀಪುರದಿಂದ 18 ಕಿಮೀ ದೂರದಲ್ಲಿರುವ ದೊಡ್ಡಹುಂಡಿಯ ಕೀಟ್ಟುಗಂಟೆ ವೀರಗಲ್ಲು. (ಈಗ ಬೆಂಗಳೂರು ಮ್ಯೂಸಿಯಂನಲ್ಲಿದೆ) ವೀರಗಲ್ಲು ಅಥವಾ ಸ್ಮಾರಕ ಶಿಲ್ಪಗಳಲ್ಲೇ ಅಪರೂಪದ್ದಾಗಿದೆ. ಈ ಕೀಟ್ಟುಗಂಟೆ ವೀರಗಲ್ಲು ಶಾಸನವನ್ನು ಒಳಗೊಂಡಿದೆ. ಇತಿಹಾಸಕಾರರಾದ ಫ್ಲೀಟ್, ಐ.ಕೆ.ಶರ್ಮಾ ಮತ್ತು ಬಿ.ಎಲ್.ರೈಸ್, ಡಾ. ಚಿದಾನಂದಮೂರ್ತಿ, ನಮ್ಮ ಗುರುಗಳು ಡಾ. ದೇವರಕೊಂಡಾರೆಡ್ಡಿ. ಡಾ. ಆರ್.ಶೇಷಶಾಸ್ತ್ರಿ ಇತರೆ ವಿದ್ವಾಂಸರು ಈ ಕೀಟ್ಟುಗಂಟೆ ವೀರಗಲ್ಲಿನ ಬಗ್ಗೆ ಚರ್ಚಿಸಿದ್ದಾರೆ. ಶೇಷವಿಶೇಷ ಕೃತಿಯಲ್ಲಿ ಗಂಗರ ವೀರಗಲ್ಲುಗಳು ಅನ್ನೋ ಲೇಖನದಲ್ಲಿ ಡಾ. ಸ್ಮಿತಾರೆಡ್ಡಿ ಮೇಡಂ ಅವರು ಚರ್ಚಿಸಿದ್ದಾರೆ. ಶಾಸನ ಒಳಗೊಂಡಿದ್ದರು ಅದರಲ್ಲಿ ತೇದಿಯು ಉಲ್ಲೇಖಯಿಲ್ಲ. ಶಾಸನ ವಿಷಯ ಮತ್ತು ಲಿಪಿ ದೃಷ್ಟಿಯಿಂದ ವಿದ್ವಾಂಸರು ಇದರ ಕಾಲವನ್ನು ಕ್ರಿ.ಶ.840–869 ಇರಬಹುದೆಂದು ಹೇಳಿದ್ದಾರೆ.

**ಕೀಟ್ಟುಗಂಟೆ ಎಂದರೇನು?**

ಕೀಟ್ಟುಗಂಟೆ ಎಂದರೆ "ತನ್ನ ಒಡೆಯ ಅಥವಾ ಆಶ್ರಯದಾತನು ತೀರಿಕೊಂಡಾಗ ಅವರ ಹೆಣದ ಕೆಳಗೆ ತಮ್ಮನ್ನು ಹೂಳಿಸಿಕೊಂಡೋ ಅಥವಾ ಸುಡಿಸಿಕೊಂಡೋ ಸಾಯುವ ವಿಧಾನವನ್ನು" ಕೀಟ್ಟುಗಂಟೆ ಎನ್ನುವರು.

ದೊಡ್ಡಹುಂಡಿ ಕೀಟ್ಟುಗಂಟೆ ಸ್ಮಾರಕದ ಕೆಳಭಾಗದಲ್ಲಿ ಶಾಸನವಿದೆ, ಮೇಲ್ಭಾಗದಲ್ಲಿ ಶಿಲ್ಪವಿದೆ. ಗಂಗರ ಅರಸ ನೀತಿಮಾರ್ಗ ಪೆರ್ಮ್ಮಾನಡಿ ಯಾವುದೋ ಕಾಯಿಲೆಯಿಂದ ಬಳಲುತ್ತಿದ್ದು, ಜೀವನ್ಮರಣದ ನಡುವೆ ಹೋರಾಡುತ್ತಾ, ಮರಣೋನ್ಮುಖವಾಗಿ ಸಾವಿನ ಸಮೀಪದಲ್ಲಿರುವ ಅಂತೆ ತೋರುತ್ತದೆ. ಮರಣಶಯ್ಯೆಯಲ್ಲಿರುವ ರಾಜನ ತಲೆಯ ಭಾಗದಲ್ಲಿ ಮನೆಮಗ ಆಗರಯ್ಯನು (ಮನೆಮಗತ್ತಿನ್ ಆಗರಯ್ಯಂ) ಒಂದು ಕಠಾರಿಯಿಂದ ತನ್ನನ್ನು ತಾನು ಇರಿದುಕೊಳ್ಳುತ್ತಿರುವಂತೆ ಸ್ಮಾರಕ ಶಿಲ್ಪದಲ್ಲಿ ತೋರುತ್ತದೆ. ಮನೆಮಗ ಅಗರಯ್ಯನು ಕೀಟ್ಟುಗಂಟೆಯಾದ ವಿಷಯ ಶಾಸನದಲ್ಲಿದೆ. ಕಾಲಬಳಿ ಮತ್ತೊಬ್ಬ ವ್ಯಕ್ತಿ ಸೇವೆ ಸಲ್ಲಿಸುತ್ತಿರುವಂತೆ ಚಿತ್ರಿಸಲಾಗಿದೆ. ಅವರಿಗೂ ಛತ್ರಿಗಳನ್ನು ಬಿಡಿಸಲಾಗಿದೆ. ಶಾಸನದಲ್ಲಿ ಅಗ್ನಿ ಜ್ವಾಲೆಗಳಂತಹ ಅಲಂಕರಣ ವನ್ನು ಬಿಡಿಸಿದ್ದು ಬಹುಶಃ ಇದು ಅವರು ಅಗ್ನಿಯಲ್ಲಿ ದಹನವಾದುದರ ಸಂಕೇತವೆಂದು ವಿದ್ವಾಂಸರು ಹೇಳುತ್ತಾರೆ. ಅಗರಯ್ಯನನ್ನು ರಾಜ ಪ್ರಮುಖನೋ ಅಥವಾ ಸಾಮಂತನೋ ಆಗಿರಬಹುದು ಅಥವಾ ಸೈನ್ಯದಲ್ಲಿ ಒಂದು ಉನ್ನತವಾದ ಹುದ್ದೆಯಲ್ಲಿಯೂ ಇದ್ದಿರಬಹುದು ಆಗಾಗಿ ಶಿಲ್ಪದಲ್ಲಿ ಮೂರು ಛತ್ರಿಗಳನ್ನು ತೋರಿಸಿದ್ದಾರೆ. ಇದರಲ್ಲಿ ಒಂದು ಅಗರಯ್ಯನಿಗೆ ಸಂಬಂದಿಸಿದ್ದರಿಂದ ಅತ ಒಬ್ಬ ರಾಜ ಪ್ರಮುಖನೆಂದು ನಿರ್ಧಾರಿಸಬಹುದು.

**ನೊಳಂಬರ ಕಲುಗೋಡಿನ ಕೀಟ್ಟುಗಂಟೆ ಸ್ಮಾರಕ (ಕ್ರಿ.ಶ. 977)**

ಕ್ರಿ.ಶ. 977ರ ಅವಧಿಯ ಕಲುಗೋಡಿನ ವೀರಗಲ್ಲೊಂದು ಮಹೇಂದ್ರರಾಜನು ಬರಗೂರು ಸ್ಥಳದಿಂದ ಆಡಳಿತ ನಡೆಸುತ್ತಿದ್ದಾಗ ಯಾವುದೋ ಹೋರಾಟದಲ್ಲಿ ಎರಿಗಂಗಯ್ಯ ಎಂಬುವನು ಸಾಯುತ್ತಾನೆ. ಆಗ ಇವನ ಸೇವಕನಾದ ಕಳುನೇನರಸರ ಮಗನಾದ ಮಯ್ದಮ್ಮನು ಕೀಟ್ಟುಗಂಟೆಯಾಗಿ ಸಾವನ್ನಪ್ಪುತ್ತಾನೆ. ಹರ್ಷಚರಿತ್ರೆಯಲ್ಲಿ ಕವಿ ಬಾಣನು ಹೇಳುವ ಕುಲಪುತ್ರ, ಮನೆಮಗ ಒಂದೇ ಅರ್ಥದ್ದಾಗಿದೆ. ಬಾಣ ಕವಿಯ ಕಾಲದಲ್ಲಿ ರಾಜರಿಗೆ ಸಂಬಂಧಿಸಿದ ಕುಲಪುತ್ರರಿರುತ್ತಿದ್ದರು. ಇವರು ವಂಶ ಪಾರಂಪರ್ಯವಾಗಿ ರಾಜರ ವಿಷಯದಲ್ಲಿ ಭಕ್ತಿಯನ್ನು ಗೌರವನ್ನು ಇಟ್ಟುಕೊಂಡಿರುತ್ತಿದ್ದರು. ರಾಜ–ರಾಣಿಯರು ಇವರನ್ನು ತಮ್ಮ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ತನ್ನ ಒಡೆಯನಾದ ರಾಜ ಅಥವಾ ಆಶ್ರಮದಾತನು ತೀರಿಕೊಂಡಾಗ ಅವರ ಹೆಣದ ಕೆಳಗೆ ತಮ್ಮನ್ನು ಹೂಳಿಸಿಕೊಂಡೋ ಅಥವಾ ಸುಡಿಸಿಕೊಂಡೋ ಕೀಟ್ಟುಗಂಟೆಯಾಗಿ ಮರಣಹೊಂದುತ್ತಿದ್ದರು. ವೇಳೆವಾಳಿ, ಲೆಂಕರು, ಗರುಡರು ಇವೆಲ್ಲಾವೂ ರಾಜನಿಗೆ ವೇಳೆಗೊಂಡು ರಾಜ ಅನಾರೋಗ್ಯ, ಅಥವಾ ಮರಣ ಹೊಂದಿದಾಗ ವೇಳೆಗೊಂಡಂತಹ ಮನೆಮಗನು ಮರಣಹೊಂದುತ್ತಿದ್ದನು.

**– ಪವನ್ ಮೌರ್ಯ ಚಕ್ರವರ್ತಿ. ಎ**



# ನೊಳಂಬರ ಅಪರೂಪದ ನಾಣ್ಯಗಳು

ಕರ್ನಾಟಕವನ್ನು ಆಳಿದ ಪ್ರಮುಖ ರಾಜ ಮನೆತನಗಳಲ್ಲಿ ನೊಳಂಬರು ಪಟ್ಟಿಯಲ್ಲಿದ್ದಾರೆ. ದಕ್ಷಿಣ ಭಾರತದಲ್ಲಿನ ಆಂಧ್ರಪ್ರದೇಶದ ಕರ್ನೂಲು, ಅನಂತಪುರ, ಜಿಲ್ಲಾ ಭಾಗಗಳು, ಕರ್ನಾಟಕದ ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ, ಕೋಲಾರ, ತುಮಕೂರು, ಬೆಂಗಳೂರು, ಚಿಕ್ಕಮಗಳೂರು ಕಡೂರು, ಶಿವಮೊಗ್ಗ, ಹಾವೇರಿ, ಉತ್ತರ ಕನ್ನಡ, ದಾವಣಗೆರೆ, ಮಂಡ್ಯ ಜಿಲ್ಲೆಯ ತಾಯಲೂರು, ತಮಿಳುನಾಡಿನ ಧರ್ಮಪುರಿ ಯವರೆಗೂ ವಿಸ್ತರಿಸಿ ರಾಜ್ಯಭಾರ ಮಾಡಿರುವುದನ್ನ ಲಭ್ಯ ಆಕರಗಳಿಂದ ಮನಗಾಣಬಹುದು. ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಮಡಕಶಿರ ತಾಲೂಕಿನಲ್ಲಿರುವ ಹೆಂಜೇರು, ನಂತರ ತುಂಗಭದ್ರಾ ನದಿ ತೀರದ ಕಂಪಿಲಿಯನ್ನು ರಾಜಧಾನಿ ಯನ್ನಾಗಿಸಿಕೊಂಡು ವೈಭವದಿಂದ ಆಡಳಿತ ನಡೆಸಿ (ಕರ್ನಾಟಕ) ಭಾರತದ ಸಾಂಸ್ಕೃತಿಕ ಕಲಾಸಿರಿವಂತಿಕೆಯ ಪಾಲುದಾರರಾಗಿದ್ದಾರೆ.

ಶಾತವಾಹನರ ನಂತರ ಪ್ರವರ್ದಮಾನಕ್ಕೆ ಬಂದ ಪಲ್ಲವರು ಬಾದಾಮಿಯನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುತ್ತಿದ್ದಾಗ ಅಜಂತಾದಲ್ಲಿದ್ದ ಚಾಲುಕ್ಯರು ಪಲ್ಲವರನ್ನು ಕಂಚಿಯ ಕಡೆ ದೂಡಿದರು. ಪಲ್ಲವರು ತಮಿಳುನಾಡು ಕಡೆ ಹೋದಾಗ ನೊಳಂಬರು ಇಲ್ಲಿಯೇ ಉಳಿದರು. ಕದಂಬ ಮತ್ತು ಪಲ್ಲವರ ನಡುವೆ ಈ ಭಾಗದ ಸ್ವಾಮ್ಯಕ್ಕಾಗಿ ಹೋರಾಟಗಳು ನಡೆದವು. ಪಲ್ಲವ ಸಿಂಹವಿಷ್ಣು (ತ್ರಿನಯನ ಪಲ್ಲವನ) ಕಾಲದಲ್ಲಿ ಎರಡು ಶಾಖೆಗಳು ಪ್ರಾರಂಭವಾದವು. ತ್ರಿನೇತ್ರ ಪಲ್ಲವನನ್ನು ಪಲ್ಲವ ನೊಳಂಬಶಾಖೆಯ ಮೂಲ ಪುರುಷ ಎಂಬುದಾಗಿ ರಾಜಧಾನಿ ಹೇಮಾವತಿಯಲ್ಲಿನ ಸ್ತಂಭಶಾಸನದಿಂದ ವೇಧ್ಯವಾಗುತ್ತದೆ.

ನೊಳಂಬ ರಾಜರ ಬಿರುದುಗಳು ಸಹ ಮೂಲವನ್ನ ಅಂದರೆ ಪಲ್ಲವ ಕುಲತಿಲಕ, ಪಲ್ಲವಾಭರಣ, ಪಲ್ಲವ ಮಲ್ಲ, ಪಲ್ಲವಾಧಿರಾಜ ಇತ್ಯಾದಿ ಆದರೂ ಕನ್ನದ ಭಾಷೆಯನ್ನು ಆಡಳಿತ ಭಾಷೆಯನ್ನಾಗಿಸಿಕೊಂಡು ಸ್ಥಳೀಯ ಸಂಸ್ಕೃತಿ ಮತ್ತು ಪರಂಪರೆಯನ್ನ ಮೈಗೂಡಿಸಿಕೊಂಡು ಆಡಳಿತ ನಡೆಸಿದ ನೊಳಂಬರಿಗೂ, ಕಂಚಿಯ ಪಲ್ಲವರಿಗೂ ಇರುವ ಸಂಬಂಧವನ್ನು ಸ್ಪಷ್ಟವಾಗಿ ತಿಳಿಸಲು ದಾಖಲೆಗಳ ಅಭಾವದಿಂದ ಪ್ರತ್ಯೇಕವಾಗಿಯೇ ಗುರುತಿಸಲಾಗಿದೆ.

ನೊಳಂಬರು ಅಂದಿನ ರಾಜಕೀಯ ಪರಿಸ್ಥಿತಿಗನು ಗುಣವಾಗಿ ಗಂಗರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು ಹಾಗೂ ಕಲ್ಯಾಣಚಾಲುಕ್ಯರು ಇವರುಗಳೊಡನೆ ರಾಜಕೀಯ ಹಾಗೂ ವೈವಾಹಿಕ ಸಂಬಂಧ ವೃದ್ಧಿಸಿಕೊಂಡು ಪ್ರಾಬಲ್ಯ ಮೆರೆದರು. ನೊಳಂಬರಿಗೆ ಸಂಬಂಧಿಸಿದ ಪ್ರಾಚೀನ ಶಿಲಾಶಾಸನ ದಾವಣಗೆರೆ ತಾಲೂಕಿನ ಅಣಜಿಯಲ್ಲಿ ದೊರೆತಿದ್ದು ಕ್ರಿ.ಶ 450ರಲ್ಲಿ ನಣಕ್ಕಾಸ ಪಲ್ಲವನು ಕೃಷ್ಣವರ್ಮನ (ಕದಂಬ) ಸೈನ್ಯವನ್ನು ಸೋಲಿಸಿದನೆಂದು ಉಲ್ಲೇಖಿಸಿದ [ಎಪಿಗ್ರಾಫಿಕ ಕರ್ನಾಟಕ ಸಂಪುಟ–11 (ಚಿತ್ರದುರ್ಗ–1903) ದಾವಣಗೆರೆ ಶಾಸನ ಸಂಖ್ಯೆ – 161]. ಕಂಚಿಯ ಪಲ್ಲವರ ಸಂಘರ್ಷದ ವೇಳೆಯಲ್ಲಿ ಚಾಲುಕ್ಯ ವಿನಯಾದಿತ್ಯ ಮಿಲ್ಲಿಂದೆ ಎಂಬಲ್ಲಿ ಪಲ್ಲವ ಅರಸ 2ನೇ ನರಸಿಂಹವರ್ಮನನ್ನ ಹತ್ಯೆಗೈದಾಗ ಅವನ ಮೊಮ್ಮಕ್ಕಳನ್ನ ಗಂಗರಾಜ ಭೂವಿಕ್ರಮನು ಪೋಷಿಸಿ ಪಲ್ಲವ ನೊಳಂಬ ಶಾಖೆಯ ಬೆಳವಣಿಗೆಗೆ ಸಹಕಾರಿಯಾದ ಹಿನ್ನಲೆಯಲ್ಲಿ ನೊಳಂಬರು ಗಂಗರೊಡನೆ ಸಾಮಂತರಾಗಿ ವೈವಾಹಿಕ ಬಾಂಧವ್ಯ ಹೊಂದಿದರು. ಸಮಯಾನುಸಾರ ಅವರೊಡನೆ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಯುದ್ದವನ್ನು ನಡೆಸಿದ್ದಾರೆ. ಕಿ.ಶ. 680ರ ವೇಳೆಗೆ ಗಂಗರ ಪ್ರಾಂತ್ಯಾಧಿಕಾರಿಗಳಾಗಿ ನಿಷ್ಟೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಗೆ ಪ್ರತಿಪಲವಾಗಿ ಗಂಗರು ತಮ್ಮ ಮಕ್ಕಳಷ್ಟೇ ಪ್ರೀತಿ ವಿಶ್ವಾಸ, ಬಾಂಧವ್ಯಗಳನ್ನು ಹೊಂದಿ ಪರಸ್ಪರ ಬೆಂಬಲಿಗರಾಗಿ ನಂಬಿಕೆಗೆ ನೊಳಂಬರು ಬಾಜನರಾಗಿದ್ದಲ್ಲದೆ ಬಿ.ಎಲ್ ರೈಸ್ ತಿಳಿಸಿರುವಂತೆ ಸಿಂಹದಂತೆ ಗರ್ಜಿಸುವ ನೊಳಂಬ ಜನಾಂಗದವರು ನೆರೆಯ ಬಾಣರು, ವೈದುಂಬರು, ನಿಡುಗಲ್ಲು ಚೋಳರು ಇತರ ರಾಜರುಗಳ ಭಾಗಗಳನ್ನು ಗೆದ್ದು ನೊಳಂಬವಾಡಿ 32000 ಭಾಗಗಳ ಮೇಲೆ ಹತೋಟಿ ಸಾಧಿಸಿ ಕನ್ನಡ ಭಾಷೆ, ಸಾಹಿತ್ಯ, ಕಲೆ, ವಾಸ್ತುಶಿಲ್ಪ, ಧಾರ್ಮಿಕ ಲೋಕೋಪಯೋಗಿ ಕಾರ್ಯಗಳನ್ನು ಸಮರ್ಥವಾಗಿ ಸೇವೆ ಗೈದು ದಕ್ಷಿಣ ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯರು ಮತ್ತು ಪ್ರಖ್ಯಾತರಾಗಿದ್ದಾರೆ.



**ಮಲ್ಲೇಶಪ್ಪ ಟಿ.ಎಸ್.**
ತಮ್ಮಡಿಹಳ್ಳಿ ಚಿಕ್ಕನಾಯಕನಹಳ್ಳಿ
ತಾಲ್ಲೂಕು, ತುಮಕೂರು ಜಿಲ್ಲೆ.
ಮೊ : 8050074810, 9380939580

**ಇತಿಹಾಸ ರಚನೆಗೆ ಆಧಾರಗಳೇ ಮೂಲ ಉಸಿರು :–**

ವಿವಿದ ಮೂಲದ ಆಧಾರಗಳಲ್ಲಿ ನಾಣ್ಯಗಳು ಸಹ ಬಹುಮುಖ್ಯವಾಗಿವೆ. ಐತಿಹಾಸಿಕ ಆಕಾರಗಳಾದ ನೊಳಂಬರ ನಾಣ್ಯಗಳು ಇತಿಹಾಸವನ್ನು ರಚಿಸುವಲ್ಲಿ ಆಯಾಕಾಲಗಳಲ್ಲಿ ಟಂಕಿಸಿ ಚಲಾವಣೆಗೆ ತಂದ ನಾಣ್ಯಗಳು ಐತಿಹಾಸಿಕ ಪ್ರಾಥಮಿಕ ಮೂಲ ಆಧಾರಗಳಾಗಿವೆ. ನೊಳಂಬರು ಚಿನ್ನ, ಬೆಳ್ಳಿ, ಸೀಸದ, ಲೋಹಗಳಲ್ಲಿ ನಾಣ್ಯಗಳನ್ನು ವಿವಿಧ ಕಲಾ ಪ್ರಕಾರಗಳಲ್ಲಿ (12ರೂಪದಲ್ಲಿ) ಟಂಕಿಸುತ್ತಿದ್ದರು. ನಾಣ್ಯಗಳು ಅಂದಿನ ಕಲಾ ತಾಂತ್ರಕತೆ ಆರ್ಥಿಕ ಸ್ಥಿತಿಗತಿ ಲೋಹದ ಪ್ರಗತಿಯನ್ನು ತಿಳಿಸುತ್ತವೆ. ನಾಣ್ಯಗಳ ಅವಲೋಕನದಿಂದ ಅಂದು ಟಂಕಿಸಿ ಚಲಾವಣೆಗೆ ತಂದ ರಾಜರ ಹೆಸರು, ರಾಜರ ಆಡಳಿತ ಕಾಲ, ಅವರ ರಾಜ ಮನೆತನದ ಧರ್ಮ, ಅವರ ದೇವರ ಆರಾಧನೆಯ ಲಾಂಛನ (ನಂದಿ), ಕಲಾಭಿರುಚಿ, ರಾಜಬಿರುದುಗಳು, ರಾಜ ಧರ್ಮ, ದೇವರ ಆರಾಧನೆ, ಚಿನ್ಹೆಹಗಳು, ನಾಣ್ಯ ಲಭ್ಯವಾದ ಸ್ಥಳಗಳಿಂದ ರಾಜ್ಯದ ಮೇರೆ, ನಾಣ್ಯಗಳ ಮೇಲಿನ ಭಾಷೆ, ಬರಹ, ಲಿಪಿ, ಸಾಹಿತ್ಯ ಇತ್ಯಾದಿ ಅಂಶಗಳನ್ನು ತಿಳಿಯಲು ಸಹಾಯಕವಾಗಿವೆ. ನೊಳಂಬರ ನಾಣ್ಯಗಳು ಭಾರತದ ಇತಿಹಾಸದಲ್ಲಿ ಹೆಚ್ಚು ಆಕರ್ಷಕ ಕಲಾ ಕೌಶಲ್ಯದಿಂದ ಕೂಡಿವೆ. ನೊಳಂಬರು ಸಮೃದ್ಧಿಯ ಸಂಕೇತವಾಗಿ ಹೆಚ್ಚಿನ ಚಿನ್ನದ ನಾಣ್ಯಗಳನ್ನು ಧರ್ಮದ ಸಂಕೇತವಾಗಿ ಶಿವನ ವಾಹನ ನಂದಿ [Humped Bull] ಲಾಂಛನವನ್ನು ಹಾಗೂ ರಾಜನ ಹೆಸರನ್ನು ಅಂದರೆ ಮಹೇಂದ್ರ 1, ನನ್ನಿನೊಳಂಬ, 2ನೇ ಮಹೇಂದ್ರ, ಇರಿವನೊಳಂಬ, ವೀರನೊಳಂಬ, ತ್ರೈಲೋಕ್ಯಮಲ್ಲ, 2ನೇ ಪೊಳಲ್ ಚೋರ, ನೊಳಂಬ ಪಲ್ಲವ ಪೆರ್ಮನಾಡಿ ಉದಯಾದಿತ್ಯ ಮೊದಲಾದ ರಾಜರುಗಳು ಹೆಚ್ಚಾಗಿ ಚಿನ್ನದ ನಾಣ್ಯಗಳನ್ನು ಟಂಕಿಸಿದ್ದು ಅವುಗಳನ್ನ ಗದ್ಯಾಣ, ಸುವರ್ಣ, ಹೊನ್ನು ಪಣಂ, ಹಗ ಎಂಬುದಾಗಿ ಹೆಸರಿಸಲಾಗಿತ್ತು. ಕೆಲವು ನಾಣ್ಯಗಳು ಬೆಳ್ಳಿ ಮತ್ತು ಸೀಸದ ಲೋಹಗಳ ನಾಣ್ಯಗಳು ಕಂಡುಬಂದಿವೆ. ಅವುಗಳನ್ನು ಕರ್ಷಪಣ, ಹಣ, ಕಾಸು, ಹೆಸರುಗಳಲ್ಲಿ ಚಲಾವಣೆಯಲ್ಲಿ ತಂದಿದ್ದರು.

ನೊಳಂಬರ ನಾಣ್ಯಗಳಲ್ಲಿ ನಾಣ್ಯದ ನಂದಿ, ಗದ್ಯಾಣ ವಿಶೇಷವಾಗಿವೆ. ನೊಳಂಬ ರಾಜರಲ್ಲಿ ಅರಸು ಶ್ರೇಷ್ಟ, ಸಮರ್ಥ ದೊರೆಯಾದ ಒಂದನೇ ಮಹೇಂದ್ರ (875–897) ಬಿಡುಗಡೆಗೊಳಿಸಿದ ಚಿನ್ನದ ಗದ್ಯಾಣದದಲ್ಲಿ ತನ್ನ ಹೆಸರು, ಬಿರುದು



ಹಾಗೂ ರಾಜ ಲಾಂಛನ ಹೊಂದಿರುವಂತೆ ಅತ್ಯಾಕರ್ಷಕವಾಗಿ ಟಂಕಿಸಿ ಚಲಾವಣೆಗೆ ತಂದಿರುವುದನ್ನು ಮನಗಾಣಬಹುದು. ಮಹೇಂದ್ರ ದೊರೆಯ ನಾಣ್ಯಗಳು ವೃತ್ತಾಕಾರವಿದ್ದು 3.7 ಗ್ರಾಂ ತೂಕದಲ್ಲಿ 1.5 ಮಿ.ಮೀ. ಸುತ್ತಳತೆ ಹೊಂದಿರುವಂತೆ ಲೋಹ ಚಿನ್ನದಲ್ಲಿ ಹೆಚ್ಚು ಕಲಾಕೌಶಲ್ಯತೆಯಿಂದ ಟಂಕಿಸಿದ್ದಾರೆ. ಮಹೇಂದ್ರನ ನಾಣ್ಯಗಳು ಮುಂಬದಿಯಲ್ಲಿ ಗುರುತು ಮಾಡಿರುವ ಚುಕ್ಕೆಗಳಿಂದ ಸುತ್ತುವರೆದಿದ್ದು, ಅದರ ವರ್ತುಲದಲ್ಲಿ ಗೆರೆ ಮತ್ತು ಗೆರೆಯ ಒಳಭಾಗಕ್ಕೆ ನಂದಿಯ ಚಿತ್ರವಿದೆ. ನೊಳಂಬ ರಾಜ್ಯ ಚಿನ್ಹೆಯಾದ ನಂದಿಯು ಬಲಭಾಗಕ್ಕೆ ಮುಖಮಾಡಿ ತನ್ನ ಬಾಲ ಎತ್ತಿ ಕುಳಿತಿರುವುದು ಎದ್ದು ಕಾಣುತ್ತದೆ ಹೆಚ್ಚು ಆಕರ್ಷಕವಾಗಿದೆ. ನಂದಿಯ ಬಲ ಮತ್ತು ಎಡ ಭಾಗದಲ್ಲಿ ದೀಪದ ಕಂಬಗಳಿವೆ. ನಂದಿಯ ಮೇಲ್ಭಾಗದಲ್ಲಿ ಸೂರ್ಯ, ಚಂದ್ರ ಚೌರಿಯನ್ನು ಹೊಂದಿದ್ದು. ನಂದಿಯ ಕೆಳಭಾಗದಲ್ಲಿ ಎಡ ಮತ್ತು ಬಲ ತುದಿಯವರೆಗೂ ಉದ್ದವಾದ ಗೆರೆ (ರೇಖೆ) ಇದೆ. ರೇಖೆಯ ಕೆಳಗೆ ಆ ಕಾಲದ ಕನ್ನಡ ಲಿಪಿಯಲ್ಲಿ ಮಹೇಂದ್ರ ಎಂಬ ಹೆಸರನ್ನು ಹೊಂದಿದಂತೆ ಬಿಡುಗಡೆಗೊಳಿಸಿದ್ದಾರೆ.

ಮಹೇಂದ್ರನ ನಂದಿ ಗದ್ಯಾಣದ ಹಿಂಬದಿಯಲ್ಲಿ ಕಂಡಂತೆ ನಾಣ್ಯದ ಅಂಚಿನಲ್ಲಿ (ಕಡೆ) ಚುಕ್ಕೆಗಳು ಸುತ್ತುವರೆದಿವೆ. ಆ ಚುಕ್ಕೆಗಳ ಒಳಭಾಗಕ್ಕೆ ಎರಡು ಸುತ್ತು ರೇಖೆಗಳನ್ನು (ಗೆರೆ) ಹೊಂದಿವೆ. ಗೆರೆಗಳ ವೃತ್ತದ ಒಳಭಾಗದಲ್ಲಿ ತನ್ನ ಬಿರಿದಾದ 'ತ್ರಿಭುವನ ಧೀರ' ಎಂದು ಕನ್ನಡ ಲಿಪಿಯಲ್ಲಿ ಬರೆಯಲಾಗಿದ್ದು ಅದರ ಕೆಳಭಾಗಕ್ಕೆ ಧೈರ್ಯ, ಶೌರ್ಯ, ಧೀರತ್ವದ ಸಂಕೇತವಾದ ಬಲಿಷ್ಟ ಖಡ್ಗವನ್ನು ಹೊಂದಿರುವಂತೆ ನಾಣ್ಯಗಳನ್ನು ಹೆಚ್ಚು ಕಲಾ ಕೌಶಲ್ಯತೆಯಿಂದ ಟಂಕಿಸಲಾಗಿದೆ. ಒಂದನೇ ಮಹೇಂದ್ರ ನೊಳಂಬ ರಾಜರಲ್ಲಿ ಹೆಚ್ಚು ಮಹತ್ವಕಾಂಕ್ಷೆಯ ಶ್ರೇಷ್ಠ ರಾಜನಾಗಿದ್ದು ನೊಳಂಬವಾಡಿ 32.000 ಭಾಗಗಳ ಒಡೆಯನಾಗಿದ್ದನು. ಮಹೇಂದ್ರ ದೊರೆ ಹೆಚ್ಚು ಸಮರ್ಥನಾಗಿದ್ದು ತೆಲುಗು, ಚೋಳರು, ಬಾಣರು, ವೈದುಂಬರು ಮತ್ತು ಗಂಗರೊಡನೆ ಯುದ್ದಮಾಡಿ, ದಕ್ಷಿಣದಲ್ಲಿ ಧರ್ಮಪುರಿ, ಉತ್ತರದಲ್ಲಿ ಬಳ್ಳಾರಿ ಜಿಲ್ಲಾ ಭಾಗ, ಪೂರ್ವದಲ್ಲಿ ಚಿತ್ತೂರು, ಪಶ್ಚಿಮದಲ್ಲಿ ತುಮಕೂರು ಜಿಲ್ಲೆಯವರೆಗೂ ರಾಜ್ಯ ವಿಸ್ತರಿಸಿದನು. ಮಹೇಂದ್ರನ ತಾಯಿ 1ನೇ ರಾಚಮಲ್ಲನ ಮಗಳು ಜಾಯಬ್ಬೆ, ಪತ್ನಿ ಗಾಮಬ್ಬೆ ಗಂಗವಂಶದವರಾಗಿದ್ದರೂ ಸಹ ರಾಜಧರ್ಮವನ್ನು ಪಾಲಿಸಿದನು. ಧರ್ಮಪುರಿಯ ಶಾಸನದಲ್ಲಿ ಮಹಾಬಲಿ ಕುಲವಿದ್ವಂಸಕ, ಗಂಗಾವಾಡಿ 96 ಸಾವಿರ ಪ್ರಾಂತ್ಯದ ಏಕೈಕ

ಅಧಿಪತಿ ಎಂಬ ಉಲ್ಲೇಖವಿದೆ. ಗಂಗಮಂಡಲದ ಮೇಲಿನ ಅಧಿಪತ್ಯ ಸಾಧಿಸಿದ ಮಹೇಂದ್ರನು ವಿಶಾಲ ಭೂಭಾಗದ ಒಡೆಯನಾಗಿ ಸ್ವತಂತ್ರನಾಗಿ ನಾಣ್ಯ ಟಂಕಿಸಿ ಕೆಲಕಾಲ ನೊಳಂಬರ ಸಿಂಹಗರ್ಜನೆಯನ್ನು ನೆರೆಹೊರೆಯವರ ವಿರುದ್ಧ ಗರ್ಜಿಸಿ ದಕ್ಷಿಣಭಾರತದಲ್ಲಿ ನೊಳಂಬರ ಕೀರ್ತಿಯನ್ನು ಉಚ್ಛ್ರಾಯಸ್ಥಾನಕ್ಕೆ ಕೊಂಡೊಯ್ದು, ಚರಿತ್ರೆಯ ಪುಟಗಳಲ್ಲಿ ಸ್ಮರಣೀಯ(ಅಜರಾಮರ)ನಾಗಿದ್ದಾನೆ. ಧರ್ಮಪುರಿ ಶಾಸನದಲ್ಲಿ ತ್ರಿಭುವನಧೀರ, ಮೂರುಲೋಕದ ಒಡೆಯ ಎಂಬ ವರ್ಣನೆ ಅವನು ಹೊರಡಿಸಿದ ನಾಣ್ಯಗಳ ಮೇಲೆ ಉಲ್ಲೇಖವಿರುವ ಹೆಸರು ಮತ್ತು ಬಿರುದುಗಳುನ್ನ ನಾಣ್ಯಗಳು ಅಪರೂಪದ ನಾಣ್ಯಪರಂಪರಾ ಪಟ್ಟಿಗೆ ಸೇರಿವೆ ಎಂಬುದು ನೊಳಂಬರ ಹೆಮ್ಮೆ (ಸಂಸ್ಕೃತಿ) ಹೆಗ್ಗಳಿಕೆಯ ಭಾವವಾಗಿದೆ.

ನೊಳಂಬ ಅರಸರ ನಾಣ್ಯಗಳಲ್ಲಿ ಶ್ರೀ ನೊಳಂಬ ನಾರಾಯಣ, ನನ್ನಿ ನೊಳಂಬ, (ಬಿರುದು ಹೊಂದಿರುವ ನಾಣ್ಯಗಳು ಲಭ್ಯವಾಗಿವೆ.) ಇರಿವ ನೊಳಂಬ 941–968 ಮತ್ತು ತ್ರೈಲೋಕ ಮಲ್ಲ ನನ್ನಿನೊಳಂಬ 969–975, ವೀರನೊಳಂಬ (975–981), ನಾಣ್ಯಗಳು ನೊಳಂಬ ರಾಜರುಗಳ ಬಿರುದು ಹೊಂದಿರುವ ನಾಣ್ಯಗಳು ದೊರೆತಿವೆ. 2ನೇ ಮಹೇಂದ್ರ ಇತಿಹಾಸವನ್ನ ಸ್ಪಷ್ಟವಾಗಿ ತಿಳಿಸುವ ಮೂಲ ಆಕಾರಗಳಾಗಿವೆ. ನೊಳಂಬರ ನಾಣ್ಯಗಳು ಏಕಮುಖ ಮುದ್ರಾನಾಣ್ಯ Uniface Punch Mark ಮತ್ತು ದ್ವಿಮುಖ ಮುದ್ರಾ ವಿಧಾನ Double Die Struck ವಿಧಾನಗಳಲ್ಲಿ ಮುದ್ರಿಸುತ್ತಿದ್ದರು. ನನ್ನಿ ನೊಳಂಬನ ನಾಣ್ಯವು ಏಕಮುಖ Uniface ಮುದ್ರಾಂಕಿತ ನಾಣ್ಯಗಳಾಗಿವೆ. ಚಿನ್ನದಿಂದ 3.79 ಗ್ರಾಂ ತೂಕ, 2 ಮಿ.ಮೀ ಅಳತೆಯ ವೃತ್ತಾಕಾರದಿಂದ ಮುದ್ರಾಂಕಿತವಾಗಿವೆ. ನಾಣ್ಯದ ಮುಂಭಾಗದಲ್ಲಿ 9 [Punches Marked Gold Young] ಗುರುತು ಮುದ್ರೆಗಳಿವೆ. 5 ಮುದ್ರೆಗಳಲ್ಲಿ ನಂದಿಯು ಬಲಬದಿಗೆ ಮುಖಮಾಡಿ ಕುಳಿತಿರುವಂತೆಯೂ, 2 ಮುದ್ರೆಗಳಲ್ಲಿ 9ನೇ ಶತಮಾನದ ಕನ್ನಡ ಲಿಪಿಯ ಶ್ರೀ ಉಲ್ಲೇಖ ಮತ್ತು 1ನೇ ಮುದ್ರೆಯಲ್ಲಿ (E/Nani) ನನ್ನಿ ಎಂಬುದಾಗಿಯು ಮತ್ತೊಂದು ಮುದ್ರೆಯಲ್ಲಿ ಸೂರ್ಯ ಚಂದ್ರರ ಹಾಗೂ ಶಸ್ತ್ರಸಜ್ಜಿತ ಆನೆ ಕೊಡಲಿ ಹಿಡಿದ ನನ್ನಿ ನೊಳಂಬನ ಮುದ್ರೆಗಳನ್ನು ಕಾಣಬಹುದು. ನೊಳಂಬರು ಅವರ ಲಾಂಛನ ನಂದಿ ಮತ್ತು ನಾಣ್ಯವನ್ನು ನಾಣ್ಯ ಚಿತ್ರ ಹೊಂದಿಸಿ ಚಲಾವಣೆಗೆ ತಂದ ನನ್ನಿ ನೊಳಂಬ ಅವರ ಬಿರುದು, ಸೂರ್ಯ, ಚಂದ್ರಾರಾಧನೆಯುನ್ನು ತಿಳಿಯಲು ಸಹಾಯಕವಾಗಿದೆ. 2ನೇ ಪೊಳಲ್ ಚೋರನು 12 ಗುರುತುಗಳುಳ್ಳ ನಾಣ್ಯಗಳನ್ನು ಹಚ್ಚು ಹಾಕಿಸಿ ಚಲಾವಣೆಗೆ ತಂದನು.



ವೀರನೊಳಂಬ ಚಿನ್ನದ ನಾಣ್ಯ Double Die Struck ದ್ವಿಮುದ್ರ ವಿಧಾನದಲ್ಲಿವೆ. ಚಿನ್ನದಲ್ಲಿ 14 ಮಿಲಿ ಮೀಟರ್ ವ್ಯಾಸ, 3.6 ಗ್ರಾಂ ತೂಕ ಆಕಾರ ವೃತ್ತಾಕಾರದಲ್ಲಿದೆ. ನಾಣ್ಯದ ಮುಂಬದಿಯಲ್ಲಿ ನಂದಿಯು ಎಡಬಾಗಕ್ಕೆ ಮುಖ ಮಾಡಿ ಕುಳಿತ ಅಲಂಕೃತ ವೃಷಭ ಸೂರ್ಯ ಚಂದ್ರು, ಕೆಳಭಾಗಕ್ಕೆ, ಬಳ್ಳಿಯಾಕಾರದ ವಿನ್ಯಾಸವಿದೆ. ವೀರ ನೊಳಂಬನ ನಾಣ್ಯದ ಹಿಂಭಾಗದಲ್ಲಿ ಶ್ರೀ ವೀರ ನೊಳಂಬ ಉಲ್ಲೇಖ ಕನ್ನಡ ಲಿಪಿಯಲ್ಲಿದ್ದು ಆ ಎರಡು ಸಾಲಿನ ಮದ್ಯೆ ಚುಕ್ಕೆಗಳುಳ್ಳ ಗೆರೆಯನ್ನು ಹೊಂದಿದೆ. ಇಮ್ಮಡಿ ಪೊಳಲ್ ಚೋರನ ಮಗನಾದ ಇಮ್ಮಡಿ ಮಹೇಂದ್ರನು ವೀರನೊಳಂಬ ಬಿರುದನ್ನು ಹೊಂದಿದ್ದನೆಂದು ಕಂಚಗಾರ, ಬೆಳಗಲ್ಲು, ಕರ್ಷಣ ಪಳ್ಳಿ ಮತ್ತು ತಮಿಳುನಾಡಿನ ಸವಿತಾ ಗ್ರಾಮದ ಶಾಸನಗಳ್ಳಿ ಕಂಡುಬರುತ್ತದೆ. ಗಂಗಾ ಅರಸ ಮಾರಸಿಂಹನಿಂದ ನಾಶವಾದ ನೊಳಂಬ ರಾಜ್ಯವನ್ನ ಪುನಃ ನಿರ್ಮಿಸುವ ಸಲುವಾಗಿ ಚಾಲುಕ್ಯ ದೊರೆ 2ನೇ ತೈಲಪನನ್ನು ಭೇಟಿ ಮಾಡಿ ಬಾಂಧವ್ಯ ವೃದ್ಧಿಸಿಕೊಂಡನು. ಅಲ್ಲದೆ ವೀರನಾಗಿ ನೊಳಂಬಾದಿ ರಾಜ, ಏಕವಾಕ್ಯ, ಪಲ್ಲವಾಭರಣ ಬಿರುದು ಪಡೆದಿದ್ದು ನೊಳಂಬ ರಾಜ್ಯದ ಪುನಃಶ್ಚೇತಕನಾಗಿದ್ದಾನೆ.

ನೊಳಂಬರ ನಾಣ್ಯಗಳಲ್ಲಿ ಕೆಲವು ರಾಜರು ಉದಾಹರಣೆಗೆ ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮಾನಡಿ ಅಣ್ಣ ಜಗದೇಕಮಲ್ಲ ಬಿರುದನ್ನ 2ನೇ ನೊಳಂಬ ಪಲ್ಲವ ಪೆರ್ಮಾನಾಡಿಯ ನಂತರ ಅಧಿಕಾರಕ್ಕೆ ಬಂದು ತನ್ನ ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲ ಅಹವಮಲ್ಲ ಬಿರುದನ್ನು ನನ್ನಿನೊಳಂಬನು ಧರಿಸಿದನು. ತಮ್ಮ ದೊರೆಗಳ ಬಿರುದುಗಳನ್ನು ಸಾಮಂತ ರಾಜರುಗಳು ತಮ್ಮಗಳ **24ನೇ**

**28ನೇ ಪುಟಕ್ಕೆ...............**

# ನೊಳಂಬ ದೇವಾಲಯಗಳು

**ಹಿಂದಿನ ಸಂಚಿಕೆಯಿಂದ....**

ನಟರಾಜನ ಮುಖಭಾವ ಹಾಗೂ ಅವನ ಸಂಧ್ಯಾತಾಂಡವವನ್ನು ಹೊಗಳಲು ಮಾತೇ ಸಾಲದು. ಅಷ್ಟು ಸುಂದರವಾದ ಮುಖಭಾವವನ್ನು ಈ ಶಿಲ್ಪವು ಹೊಂದಿದೆ. ಆದರೆ ನೋವಿನ ಸಂಗತಿಯೆಂದರೆ ಕಳೆದ ಶತಮಾನದವರೆಗೂ ಅತ್ಯಂತ ಸುಂದರವಾಗಿ ಕಾಣುತ್ತಿದ್ದ ಈ ಶಿಲ್ಪಗಳು ಇಂದಿಗೆ ಹೊಗೆಯಿಂದ ಬಿಳುಚಿಕೊಂಡಂತೆ ತೋರುತ್ತದೆ. ಇಲ್ಲಿ ನಟರಾಜನು ಆನಂದ ತಾಂಡವವನ್ನು ಮಾಡುತ್ತಾ ಅಪಸ್ಮಾರನನ್ನು ತುಳಿಯುತ್ತಾ ಅವನ ಮೇಲೆ ನರ್ತನವನ್ನು ಮಾಡುತ್ತಿದ್ದಾನೆ. ಶಿವನ ಕೊರಳಲ್ಲಿ ಇರಬೇಕಾದ ಸರ್ಪವು ಅಪಸ್ಮಾರನನ್ನು ಹೆದರಿಸುತ್ತಿರುವ ಸಂಯೋಜನೆಯಂತೂ ಅತ್ಯಂತ ವಿಶೇಷವಾಗಿದೆ. ಮೇಲುಗಡೆಯ ಎರಡೂ ಕೈಗಳಲ್ಲಿ ತ್ರಿಶೂಲವನ್ನೇ ಹಿಡಿದಿರುವ ನಟರಾಜನು ತನ್ನ ಪ್ರಧಾನ ಕೈಗಳನ್ನು ಆಹೂಯುವರದ ಮುದ್ರೆಯಲ್ಲಿಯೂ ಹಾಗೂ ಗಜಹಸ್ತದಲ್ಲಿಯೂ ತೋರ್ಪಡಿಸಿದ್ದಾನೆ. ಅವನ ನಾಟ್ಯಭಂಗಿ ಯಲ್ಲಿರುವ ಲಾಲಿತ್ಯವನ್ನು ನಾವು ಮೆಚ್ಚಿಕೊಳ್ಳಲೇಬೇಕಾಗುತ್ತದೆ. ಅದರಲ್ಲಿ ಮುಖ್ಯವಾಗಿ ನಟರಾಜನ ಮುಖಭಾವ. ಈತನು ಅಪಸ್ಮಾರನ ಮೇಲೆ ತಾಂಡವವಾಡುತ್ತಿದ್ದರೂ ಅವನ ಮುಖದಲ್ಲಿ ಕೋಪವಾಗಲೀ ಆಕ್ರೋಶವಾಗಲೀ ಇಲ್ಲ. ಬದಲಿಗೆ ಮಂದಹಾಸವಿದೆ. ಅವನು ತೊಟ್ಟಿರುವ ಉಡುಗೆ ತೊಡುಗೆಗಳೂ ಹಿತಮಿತವಾಗಿವೆ. ಕಿರೀಟವನ್ನು ತೊಟ್ಟಿರುವ ನಟರಾಜನು ತನ್ನ ಜಟೆಯನ್ನು, ಎಡಗಿವಿಯಲ್ಲಿ ನಾಗಕುಂಡಲವಿದರೆ ಬಲಗಿವಿಯಲ್ಲಿ ಮಕರಕು ಹಾರಾಟ ತೋಳುಬಂಧಿಯನ್ನು, ಎದೆಯಲ್ಲಿ ಉರಬಂಧವನ್ನು ಕಟಿಯಲ್ಲಿ ಕಟಿಬಂಧವನ್ನು, ಅಲಂಕೃತವಾದ ಜನಿವಾರವನ್ನು ತೊಟ್ಟು ಕಾಲ್ಗಳಿಗೆ ಕಡಗಗಳನ್ನು ಕೂಡ ಧರಿಸಿದ್ದಾನೆ. ನಟರಾಜನು ತೊಟ್ಟಿರುವ ಅಧೋವಸ್ತ್ರವು ಅತ್ಯಂತ ತೆಳುವಾಗಿದ್ದು ಪಂಚೆಗೆ ಕಟ್ಟಿರುವ ಮಧ್ಯದ ಕಟ್ಟು ಕೂಡ ವಿಶೇಷವಾಗಿದೆ. ಈ ಶಿವನ ನಾಟ್ಯವು ಇನ್ನಷ್ಟು ಕಳೆಕಟ್ಟಲು ಮೂರುಜನ ವಾದ್ಯಗಾರರು ತಮ್ಮ ವಾದ್ಯಗಳನ್ನು ನುಡಿಸುತ್ತಾ ನಟರಾಜನನ್ನು ಉತ್ತೇಜಿಸಿರುವಂತಿದೆ. ನಟರಾಜನ ಬಲಗಡೆಯಲ್ಲಿ ಕೊಳಲುವಾದಕ ನೊಬ್ಬ ಕೊಳಲನ್ನು ನುಡಿಸುತ್ತಿದ್ದರೆ ಶಿವನ ಎಡಗಡೆಯಲ್ಲಿ ಮೇಲುಗಡೆಯಲ್ಲಿರುವ ವ್ಯಕ್ತಿಯು ತಾಳವನ್ನು ನುಡಿಸುತ್ತಿದ್ದರೆ, ಕೆಳಗಿರುವ ವ್ಯಕ್ತಿಯು ಮಹಾಘಟವನ್ನು ನುಡಿಸುತ್ತಿರುವಂತಿದೆ. ಒಂದಕ್ಕೆ ಒಂದು ತಾಗುವಂತೆ ತ್ರಿಕೋಣದಲ್ಲಿ ಇಟ್ಟುಕೊಂಡಿರುವ ಘಟಗಳು ಒಂದು ವಿಶಿಷ್ಟ ಲಕ್ಷಣವನ್ನು ಹೊಂದಿದೆ. ಈ ಶಿಲ್ಪದ ಸುತ್ತಲೂ ಅಷ್ಟದಿಕ್ಪಾಲಕರ ಶಿಲ್ಪಗಳನ್ನು ಕೆತ್ತಲಾಗಿದೆ. ಗಡಿಯಾರದ ಮುಳುಗಳ ಚಲನೆಯಂತೆ ನಟರಾಜನ ತಲೆದೆಸೆಯಲ್ಲಿ ಇಂದ್ರನಿದ್ದು ನಂತರ ಅಗ್ನಿ, ಯಮ, ನಿರುತಿ, ವರುಣ, ವಾಯು, ಕುಬೇರ ಮತ್ತು ಈಶಾನರುಗಳು ಇದ್ದಾರೆ.

**ಇಂದ್ರ :**



ಪೂರ್ವದಿಕ್ಕಿನ ಅಧಿಪತಿಯೇ ಇಂದ್ರ ಇವನ ವಾಹನವೆಂದರೆ ಐರಾವತ. ಇದು ಬಿಳಿಯ ಆನೆ. ನಟರಾಜನ ತಲೆದೆಸೆಯ ಮಧ್ಯದ ಪೂರ್ವದಿಕ್ಕಿನ ಪಟ್ಟಿಕೆಯಲ್ಲಿ ಸ್ವರ್ಗಾಧಿಪತಿಯಾದ ಇಂದ್ರನು ತನ್ನ ವಾಹನವಾದ ಐರಾವತದ ಮೇಲೆ ತನ್ನ ಪತ್ನಿಯಾದ ಶಚೀದೇವಿಯೊಡನೆ ಆಕಾಶದಲ್ಲಿ ಚಲಿಸುತ್ತಾ ನಟರಾಜನ ನಾಟ್ಯವನ್ನು ನೋಡಲು ಧಾವಿಸುತ್ತಿರುವಂತಿದೆ. ಇಡೀ ಶಿಲ್ಪದ ಸುತ್ತಲೂ ಮೋಡಗಳನ್ನು ಬಿಡಿಸಲಾಗಿದೆ. ಐರಾವತಕ್ಕೆ ತಲೆಯ ಮೇಲೆ ಮಣಿಹಾರವನ್ನು ತೊಡಿಸಲಾಗಿದೆ. ಕತ್ತಿನಲ್ಲಿ ಘಂಟಾಹಾರವನ್ನು ಕಟ್ಟಲಾಗಿದೆ. ಆನೆಯ ಬೆನ್ನಮೇಲೆ ಇಂದ್ರ ಮತ್ತು ಇಂದ್ರಾಣಿಯರು ಕುಳಿತುಕೊಳ್ಳಲು ವಸ್ತ್ರವನ್ನು ಹಾಕಿದ್ದು ಅದನ್ನು ಮೂರು ದಾರಗಳಿಂದ ಅದರ ಹೊಟ್ಟೆಗೆ ಬಿಗಿಯಲಾಗಿದೆ. ಆನೆಯು ತನ್ನ ಸೊಂಡಿಲಿನಿಂದ ಕಮಲಪುಷ್ಪಗಳನ್ನು ಕಿತ್ತು ಇಟ್ಟುಕೊಂಡಿದೆ.

ಇಂದ್ರನು ಸರ್ವಾಭರಣ ಭೂಷಿತನಾಗಿದ್ದಾನೆ. ಕರಂಡ ಮುಕುಟವನ್ನ ಧರಿಸಿರುವ ಇಂದ್ರನು ಕಿವಿಗಳಲ್ಲಿ ಮಕರಕುಂಡಲಗಳನ್ನು ಧರಿಸಿದ್ದಾನೆ. ಯಜ್ಞೋಪವೀತವನ್ನು ಧರಿಸಿ ಉತ್ತರೀಯವನ್ನು ಹೊದ್ದಿದ್ದಾನೆ. ಅವನ ಸತಿ ಶಚೀದೇವಿಯೂ ಸಹ ಸಾಲಂಕೃತಳಾಗಿದ್ದರೂ ಇಂದ್ರನಷ್ಟು ಶ್ರೀಮಂತ ತೊಡುಗೆಗಳು ಇವಳಿಗಿಲ್ಲ. ಎಡಗೈಯಲ್ಲಿ ಉತ್ಪಲವನ್ನು ಹಿಡಿದಿದ್ದಾಳೆ. ಇಂದ್ರ ಮತ್ತು ಇಂದ್ರಾಣಿಯರ ಬಲಗೈ ಪತಾಕ ಹಸ್ತದಲ್ಲಿದೆ.



**ಸುಂಕಂ ಗೋವರ್ಧನ**
ಬೆಂಗಳೂರು
ಮೊ : 9535762464

**ಅಗ್ನಿ :**



ಆಗ್ನಿಯು ಆಗ್ನೇಯ ದಿಕ್ಕಿನ ಒಡೆಯ. ಇವನ ವಾಹನ ಟಗರು, ಆಕೆಯ ಹೆಂಡತಿ ಸ್ವಾಹಾ. ಇಲ್ಲಿ ಅಗ್ನಿಯು ತನ್ನ ಹೆಂಡತಿ ಯಾದ ಸ್ವಾಹಾಳ ಜೊತೆ ಟಗರಿನ ಮೇಲೆ ಕುಳಿತು ನಟರಾಜನ ನಾಟ್ಯವನ್ನು ನೋಡಲು ಧಾವಿಸುತ್ತಿದ್ದಾರೆ. ಇಲ್ಲಿ ಟಗರಿನ ಚಿತ್ರಣವು ನಮ್ಮನ್ನು ಬೆರಗುಗೊಳಿಸುತ್ತದೆ. ಟಗರಿನ ಹಾಗೆ ಕೊಂಬಿದ್ದರೂ ಮುಖ ಮಾತ್ರ ವಿಶೇಷವಾಗಿದೆ. ಟಗರಿನ ಕತ್ತಲ್ಲಿ ಘಂಟಾಹಾರಗಳಿವೆ. ಅಗ್ನಿಗಾಗಿ ಹಾಸಿರುವ ಮೆತ್ತೆಯನ್ನು ಒಂದು ದೊಡ್ಡ ಬಟ್ಟೆಯಿಂದ ಕಟ್ಟಿದ್ದರೆ ಟಗರಿಗೆ ಎಡಬಲವಾಗಿಯೂ ಒಂದು ಪಟ್ಟಿಕೆಯನ್ನು ಕಟ್ಟಲಾಗಿದೆ. ಅಗ್ನಿಯು ಕರ್ಣಕುಂಡಲ, ಯಜೋಪವೀತ, ಕಂಠೀಹಾರ, ಕಾಲ್ಕಡಗಗಳನ್ನು ತೊಟ್ಟಿದ್ದಾನೆ. ತಾನು ತೊಟ್ಟಿರುವ ಅಧೋವಸ್ತ್ರವು ಅತ್ಯಂತ ನವುರಾಗಿದೆ. ಇಲ್ಲಿ ಸ್ವಾಹಾ ತನ್ನ ಎಡಗೈಯಲ್ಲಿ ಕಮಲದ ಮೊಗ್ಗನ್ನು ಹಿಡಿದಿದ್ದಾಳೆ. ಅಗ್ನಿ ಮತ್ತು ಸ್ವಾಹಾ ಇಬ್ಬರೂ ತಮ್ಮ ಬಲಗೈಯನ್ನು ಪತಾಕ ಹಸ್ತದಲ್ಲಿ ಇಟ್ಟುಕೊಂಡಿದ್ದಾರೆ.

**ಯಮ :**



ಯುಮುನು ದಕ್ಷಿಣದಿಕ್ಕಿನ ಅಧಿಪತಿ. ಅವನ ವಾಹನ ಕೋಣ. ಅವನ ಪತ್ನಿಯ ಹೆಸರು ಧೂಮ್ರೋರ್ಣ. ಯಮ ಮತ್ತು ಧೂಮ್ರೋರ್ಣರನ್ನು ಹೊತ್ತು ಓಡುತ್ತಿರುವ ಕೋಣದ ಕತ್ತಿನಲ್ಲಿ ಘಂಟಾಹಾರವಿದೆ. ಕೋಣದ ಬೆನ್ನಿಗೆ ಮೆತ್ತನೆಯ ಹಾಸನ್ನು ಕಟ್ಟರುವುದರಿಂದ ಅದನ್ನು ಕೋಣದ ಹೊಟ್ಟೆಗೆ ಒಂದು ಪಟ್ಟಿಕೆಯಿಂದ ಕಟ್ಟಿಹಾಕಲಾಗಿದೆ. ಈ ಮೆತ್ತನೆಯ ಹಾಸು ಸ್ವಲ್ಪ ದೊಡ್ಡದಿರುವುದರಿಂದ ಅದನ್ನು ಸರಿಯಾಗಿ ತಡೆಯಲು ಎಡ ಬಲಗಳಿಗೂ ಒಂದು ಪಟ್ಟಿಕೆಯನ್ನು ತೊಡಿಸಲಾಗಿದೆ. ಯಮನು ಕರ್ಣಕುಂಡಲ, ಯಜ್ಞೋಪ ವೀತ, ಕಂಠೀಹಾರ, ಕಾಲ್ಕಡಗಗಳನ್ನು ತೊಟ್ಟಿದ್ದಾನೆ. ತಾನು ತೊಟ್ಟಿರುವ ಅಧೋವಸ್ತ್ರವು ಅತ್ಯಂತ ನವುರಾಗಿದೆ. ಇಲ್ಲಿ ಧೂಮ್ರೋರ್ಣಳು ಸಹ ಕಮಲದ ಮೊಗ್ಗನ್ನು ತನ್ನ ಎಡಗೈಯಲ್ಲಿ ಇಟ್ಟುಕೊಂಡಿದ್ದಾಳೆ. ಯಮ ಮತ್ತು ಧೂಮ್ರೋರ್ಣ ಇಬ್ಬರ ಬಲಗೈ ಪತಾಕ ಹಸ್ತದಲ್ಲಿದೆ.

**ನಿರುತಿ :**



ನಿರುತಿ ನೈರುತ್ಯ ದಿಕ್ಕಿನ ಅಧಿಪತಿ. ಅವನ ವಾಹನ ಸಾಮಾನ್ಯವಾಗಿ ನರ. ಆತನ ಹೆಂಡತಿಯ ಹೆಸರು ಚಂಡಿಕೆ. ಈ ಅಷ್ಟದಿಕ್ಪಾಲಕರ ಪಟ್ಟಿಕೆಯಲ್ಲಿ ಅತ್ಯಂತ ವಿಶೇಷವಾದ ಶಿಲವೆಂದರೆ ನಿರುತಿಯದ್ದು. ನಿರುತಿಯ ವಾಹನ ನರ ಅಂದರೆ ಮನುಷ್ಯ ನೊಳಂಬರು ಹೇಮಾವತಿ ಮುಂತಾದೆಡೆಗಳಲ್ಲಿ ನಿರುತಿಯನ್ನು ಕೆತ್ತಬೇಕಾದರೆ ನರವಾಹನವಾಗಿ ಮಾತ್ರ ಕೆತ್ತಿದ್ದಾರೆ. ಆದರೆ ಇದೊಂದೇ ಸ್ಥಳದಲ್ಲಿ ಮಾತ್ರ ನಿರುತಿಯನ್ನು ಕತ್ತೆಯ ಮೇಲಿರುವಂತೆ ತೋರಿಸಲಾಗಿದೆ. ಗೋಪೀನಾಥರಾಯರು ತಮ್ಮ ಕೃತಿಯಲ್ಲಿ ನಿರುತಿಯು ಮತ್ತೊಂದು ವಾಹನ ಕತ್ತೆಯೆಂದು ವಿಷ್ಣುಧರ್ಮೋತ್ತರ ಪುರಾಣವು ತಿಳಿಸುತ್ತದೆ ಎಂದು ತಿಳಿಸಿರುತ್ತಾರೆ. ಇಲ್ಲಿ ನಿರುತಿ ಮತ್ತು ಚಂಡಿಕೆಯನ್ನು ಹೊತ್ತೊಯ್ಯುತ್ತಿರುವ ಕತ್ತೆಯ ಬೆನ್ನಿಗೆ ಮೆತ್ತನೆಯ ಹಾಸನ್ನು ಕಟ್ಟಿರುವುದರಿಂದ ಅದನ್ನು ಕತ್ತೆಯ ಹೊಟ್ಟೆಗೆ ಒಂದು ಪಟ್ಟಿಕೆಯಿಂದ ಕಟ್ಟಿಹಾಕಲಾಗಿದೆ, ಈ ಮೆತ್ತನೆಯ ಹಾಸು ಸ್ವಲ್ಪ ದೊಡ್ಡದಿರುವುದರಿಂದ ಅದನ್ನು ಸರಿಯಾಗಿ ತಡೆಯಲು ಎಡ ಬಲಗಳಿಗೂ ಒಂದು ಪಟ್ಟಿಕೆಯನ್ನು ತೊಡಿಸಲಾಗಿದೆ. ನಿರುತಿಯು ಕರ್ಣಕುಂಡಲ, ಯಜ್ಞೋಪವೀತ, ಕಂಠೀಹಾರ, ಕಾಲ್ಕಡಗಗಳನ್ನು ತೊಟ್ಟಿದ್ದಾನೆ. ತಾನು ತೊಟ್ಟಿರುವ ಅಧೋವಸ್ತ್ರವು ಅತ್ಯಂತ ನವುರಾಗಿದೆ. ಇಲ್ಲಿ ಚಂಡಿಕೆಯೂ ಸಹ ಕಮಲದ ಮೊಗ್ಗನ್ನು ತನ್ನ ಎಡಗೈಯಲ್ಲಿ ಇಟ್ಟುಕೊಂಡಿದ್ದಾಳೆ. ನಿರುತಿ ಮತ್ತು ಚಂಡಿಕೆ ಇಬ್ಬರ ಬಲಗೈ ಪತಾಕ ಹಸ್ತದಲ್ಲಿದೆ.

**ವರುಣ :**



ವರುಣ ಪಶ್ಚಿಮದಿಕ್ಕಿನ ಅಧಿಪತಿ. ಇವನ ವಾಹನ ಮಕರ ಅಥವಾ ಮೊಸಳೆ. ಇವನ ಪತ್ನಿಯ ಹೆಸರು ವಾರುಣಿ. ವರುಣ ಮತ್ತು ವಾರುಣಿಯನ್ನು ಹೊತ್ತು ನಡೆಯುತ್ತಿರುವ ಮಕರವು ಅತ್ಯಂತ ಅಲಂಕಾರಿಕವಾಗಿದೆ. ಬಾಯಿಯನ್ನು ತೆರೆದು ಓಡುತ್ತಿರುವ ಮೊಸಳೆಯು ತನ್ನ ಮೈಯನ್ನು ಕೆದರಿಕೊಂಡು ಬಳ್ಳಿಯಂತಹ ಅಲಂಕರಣವನ್ನು ಉಂಟುಮಾಡಿಕೊಂಡಿದೆ.

ಮುಂದುವರೆಯುವುದು......

# ಸಿದ್ಧರಾಮನೊಬ್ಬನೆ ಶಿವಯೋಗಿ

ನಮಗೆ ಬಸವಾದಿ ಶರಣರ ಜೀವನೋತ್ಸಾಹದ ಮಾರ್ಗವೇ ರಾಜಮಾರ್ಗ, ಆಸ್ವಾದಿದಷ್ಟು ಆನಂದ ಪರಮಾನಂದ. ಪರಮಾತ್ಮನೊಂದಿಗೆ ಬದುಕುವಷ್ಟು ಲೌಕಿಕದಲ್ಲಿ ಇದ್ದರು ಕೂಡ ಪಾರಮಾರ್ಥಿಕ ಅನುಭವ. ಇದಕ್ಕೆ ಕಾರಣ ಏನು?!

ಬಸವಣ್ಣನವರು ಲೋಕದ ಎಲ್ಲಾ ಧರ್ಮ ಶಾಸ್ತ್ರಗಳನ್ನು, ವಿವಿಧ ವರ್ಗದ ಬದುಕನ್ನು ಅಧ್ಯಯನ ಮಾಡಿ, ಅವಲೋಕಿಸಿ ಕಡೆಗೆ ಇಷ್ಟಲಿಂಗವನ್ನು ಕಂಡುಕೊಂಡರು. ಇಷ್ಟ ಲಿಂಗದ ಮುಖಾಂತರ ಸೃಷ್ಟಿಕರ್ತನ ಚೈತನ್ಯವನ್ನು ಸ್ವಯಂ ಅನುಭವಿಸುವ ಮಾರ್ಗವನ್ನು ಕಂಡುಕೊಂಡರು. ದೇವರು ಮತ್ತು ಧರ್ಮವನ್ನು ಸರಳೀಕರಣ ಮಾಡಿದರು. ಅದೇ ಶಿವಯೋಗ.

ಶಿವಯೋಗವೆಂದರೆ ಇದ್ದಲ್ಲಿಯೇ ಸೃಷ್ಟಿಕರ್ತನಾದ ಶಿವನ ಚೈತನ್ಯವನ್ನು ಕಾಣುವುದು. ನಮ್ಮೊಳಗೆ ಅಸಂಖ್ಯಾತ ಚಕ್ರಗಳುಂಟು, ಶಿವಯೋಗ / ದೃಷ್ಟಿಯೋಗ / ಲಿಂಗಾಂಗ ಯೋಗ/ಇಷ್ಟಲಿಂಗ ತ್ರಾಟಕ ಯೋಗ ಹಲವು ಹೆಸರುಗಳಿಂದ ಕರೆಯಲ್ಪಡುವ ಶಿವಯೋಗದ ಮೂಲಕ ನವ ಚಕ್ರಗಳನ್ನು ಆಂತರ್ಯದಲ್ಲಿ ಅನುಭವಿಸಿ, ಅನುಭಾವಿಸುವ ಮೂಲಕ ಕುಂಡಲಿನಿಯನ್ನು (ವಿಶೇಷವಾಗಿ ಆತ್ಮಶಕ್ತಿ) ಜಾಗೃತ ಮಾಡಿಕೊಳ್ಳುವುದು. ಈ ಶಿವಯೋಗ ವಿಜ್ಞಾನದ Quantum theory, black body, Cosmic energy ವಿಷಯಗಳಿಗೆ ಒಳಪಟ್ಟಿದೆ. ಇದು ಸೃಷ್ಟಿಕರ್ತನ ಚೈತನ್ಯವನ್ನು ಅನುಭವಿಸಲು ನಿಖರವಾದ ತಂತ್ರವಿದ್ಯೆ.

ಏಳುನೂರು ಎಪ್ಪತ್ತು ಅಮರ ಗಣಂಗಳು, ಲಕ್ಷದ ತೊಂಬತ್ತಾರು ಸಾವಿರ ಶರಣರು ಇದ್ದ ಕಲ್ಯಾಣದ ಶರಣ ಸಮೂಹದಲ್ಲಿ ಸಪ್ತಗಣಾಧೀಶರಾಗಿಯೂ, ಪಂಚಮಹಾ ಗಣಾಧೀಶರಾಗಿಯೂ ಪ್ರಾಮುಖ್ಯತೆ ಪಡೆದ ಸಿದ್ದರಾಮೇಶ್ವರ ಶರಣರ ಶಿವಯೋಗದ ಮಾರ್ಗವನ್ನು ನಾವು ಅಭ್ಯಾಸ ಮಾಡುವುದು ಅವಶ್ಯಕ ಮತ್ತು ಅನುಸರಿಸುವುದೇ ಸೂಕ್ತ ಮಾರ್ಗ.

ಮೂಲತಃ ಕುಡು ಒಕ್ಕಲಿಗ ಕುಟುಂಬದಿಂದ ಬಂದು ತಮ್ಮ ಜ್ಞಾನದ ಅರಿವಿನಿಂದ ಶೈವ ಮಾರ್ಗದಲ್ಲಿ ಗುರುವಾಗಿ, ನೊಳಂಬ ಸಂಸ್ಥಾನದ ರಾಜಗುರುವಾಗಿ, ಮಾರ್ಗದರ್ಶಿಯಾಗಿ ಜ್ಞಾನದ ಶಿಖರವನ್ನು ಏರಿದ ಮಹಾ ಯೋಗಿ ಸಿದ್ದರಾಮರು.

ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ತೊಡಗಿ ಕಾಯಕಯೋಗಿ ಸಿದ್ದರಾಮರಾಗಿ, ತಮ್ಮದೇ ಆದ ರಾಜ ಗೌರವದೊಂದಿಗೆ ವಿಜೃಂಭಣೆಯಿಂದ ಇರುವ ಸಿದ್ದರಾಮರನ್ನು ಬಸವಣ್ಣನವರು ಸಿದ್ದರಾಮರನ್ನು ಕಲ್ಯಾಣಕ್ಕೆ ಆಹ್ವಾನಿಸಿ ಶೂನ್ಯಪೀಠ ಅಲಂಕರಿಸಬೇಕೆಂದು ವಿನಂತಿ ಮಾಡಿದರು ಸಹ ಆ ಕೋರಿಕೆಯನ್ನು ಸ್ವೀಕರಿಸದೆ ತಮ್ಮ ಕಾಯಕದಲ್ಲಿ ನಿರತರಾಗಿರ್ತಾರೆ. ಹನ್ನೆರಡು ವರ್ಷಗಳ ಬಳಿಕ ಅಲ್ಲಮರೊಂದಿಗಿನ ಜ್ಞಾನದ ಸೆಣಸಾಟದಲ್ಲಿ ಅಲ್ಲಮರ ಪರವಶರಾಗಿ ಕಲ್ಯಾಣದ ಕಡೆ ಹೊರಡುತ್ತಾರೆ.

ಕಲ್ಯಾಣದಲ್ಲಿ ಬಸವಣ್ಣನವರಿಂದ ಅದ್ದೂರಿ ಸ್ವಾಗತ ಸಿಕ್ಕಿರೂ ಕೂಡ, ಒಮ್ಮೆ ಹೊಸದೊಂದು ಧರ್ಮದ ಮಾರ್ಗವನ್ನು ಸುಲಭವಾಗಿ ಒಪ್ಪದೆ ಹಠಯೋಗಿ ಆಗಿರುತ್ತಾರೆ. ದಿನಗಳೆದಂತೆ ಬಸವಣ್ಣನವರಿಗೆ ವಿಚಾರ ತಿಳಿದು ಸಿದ್ದರಾಮರಲ್ಲಿ ಬಂದಾಗ, ಸಿದ್ದರಾಮರು ಬಸವಣ್ಣನವರಿಗೆ ತಮ್ಮ ಪೂರ್ವ ಜ್ಞಾನದ ತಂತ್ರಗಳನ್ನು ಪ್ರಯೋಗಿಸಿ ಸವಾಲೆಸೆಯುತ್ತಾರೆ. ಸಿದ್ದರಾಮರ ತಂತ್ರಗಳು ಬಸವಣ್ಣನವರ ಮೇಲೆ ಯಾವುದೇ ಪರಿಣಾಮ ಬೀರದ ಕಾರಣ. ಸಿದ್ದರಾಮರಿಗೆ ಶಿವಯೋಗವೇ ಮಹಾತಂತ್ರ ಎಂಬುದು ಅರಿವಾಗುತ್ತದೆ.

ಕಲ್ಯಾಣದ ಹೊಸ ಧರ್ಮಕ್ಕೆ ಚನ್ನಬಸವಣ್ಣವರಿಂದ ಇಷ್ಟಲಿಂಗ ದೀಕ್ಷೆ ಪಡೆದು ಲಿಂಗವಂತರಾಗಿ ನಿರಂತರವಾದ ಶಿವಯೋಗ ಸಾಧನೆಯಲ್ಲಿ ತೊಡಗಿ. ಯಶಸ್ವಿಯಾಗುತ್ತಾರೆ. ಬೇರೆ ಎಲ್ಲಾ ತಂತ್ರಗಳ ಜ್ಞಾನ ಹೊಂದಿದ್ದರು ಸಹ ಈ ಶಿವಯೋಗದ ತಂತ್ರಜ್ಞಾನ ಸಿದ್ದರಾಮರನ್ನು ಬಹಳಷ್ಟು ಕಾಡುತ್ತದೆ. ಅಲ್ಲಮ, ಬಸವಣ್ಣನ, ಚನ್ನಬಸವಣ್ಣವರ ಸಲಹೆ ಸಹಕಾರದೊಂದಿಗೆ ಬಹಳ ಬೇಗ ಶಿವಯೋಗ ಸಾಧನೆ ಮಾಡಿ ಸಂತಸಗೊಂಡರು.



**ವಿನಯ್ ಆದಿಹಳ್ಳಿ**
ಶಿವಶಕ್ತಿ ಸಂಗಮ, ಆದಿಹಳ್ಳಿ,
ಅರಸೀಕೆರೆ ತಾಲ್ಲೂಕು, ಹಾಸನ
ಮೊ : 9901209374

**ಯೋಗದ ನೆಲೆಯನರಿದೆನೆಂಬಾತ**
**ಲಿಂಗಾರ್ಚನೆಯ ಮಾಡಯ್ಯ.**
**ಮನತ್ರಯ ಮದತ್ರಯ ಮಲತ್ರಯಂಗಳ ಕಳೆದು**
**ತನುತ್ರಯಂಗಳನೇಕೀಭವಿಸಿ ಲಿಂಗತ್ರಯದಲ್ಲಿ ಶಬ್ದಮುಗ್ಧನಾಗಿ**
**ಲಿಂಗಾರ್ಚನೆಯ ಮಾಡಯ್ಯಾ.**
**ಅದು ನಿಸ್ತಾರ ಸಮಸ್ತ ಯೋಗಿಗಳ ಮೀರಿದದು**
**ನಿಮ್ಮ ಕೂಡಿ ಬೆರಸುವ ಶಿವಯೋಗವಿಂತುಟಯ್ಯಾ,**
**ಕಪಿಲಸಿದ್ಧಮಲ್ಲಿಕಾರ್ಜುನಾ.**

**– ಸಿದ್ಧರಾಮೇಶ್ವರ**

ನೊಳಂಬ ಸಂಸ್ಥಾನಕ್ಕೆ ತೆರಳಿ ತಮ್ಮ ರಾಜಗುರು ಸನ್ಮಾನದೊಂದಿಗೆ ಅಲ್ಲಿಯೂ ಅರಿವು ಮೂಡಿಸಿ ಲಿಂಗಯೋಗದ ಬೀಜವನ್ನು ಬಿತ್ತಿ ಲಿಂಗವಂತ ಸಂಸ್ಕಾರವನ್ನು ಭೋದಿಸಿ. ಧರ್ಮ ಪ್ರಚಾರಕ್ಕಾಗಿ ಮಹಾರಾಷ್ಟ್ರದಿಂದ, ಮಧ್ಯ ಮತ್ತು ದಕ್ಷಿಣ ಕರ್ನಾಟಕದ ಕಡೆ ಪಯಣಿಸಿ ಮತ್ತೆ ಕಲ್ಯಾಣದ ಕಡೆ ಹಿಂದಿರುಗಿ. ಪಂಚಗಣಾಧಿಶರಲ್ಲಿ ಪ್ರಮುಖರಾಗಿ ಶೂನ್ಯ ಸಾಧನೆಯಲ್ಲಿ ನಿರತರಾಗಿ ಮಹಶಿವಯೋಗಿಯಾಗಿ ನಮಗೆ ಆದರ್ಶವಾಗಿದ್ದಾರೆ.

ಸಿದ್ದರಾಮರ ಸಮಕಾಲೀನ ಶರಣರಾದ ಸೊಡ್ಡಳ ಬಾಚರಸರು ಯೋಗಿಗಳ ಯೋಗಿ ಶಿವಯೋಗಿ ಸಿದ್ದರಾಮರನೊಬ್ಬನೆ ಅಂತ ತಮ್ಮ ವಚನದಲ್ಲಿ ಹೇಳಿದ್ದಾರೆ.

**ಉಂಡುಂಡು ಜರಿದವನು ಯೋಗಿಯೆ ?**
**ಅಶನಕ್ಕೆ ಅಳುವವನು ಯೋಗಿಯೆ ?**
**ವ್ಯಸನಕ್ಕೆ ಮರುಗುವವ[ನು] ಯೋಗಿಯೆ ?**
**ಆದಿವ್ಯಾಧಿಯುಳ್ಳವ[ನು] ಯೋಗಿಯೆ ?**
**ಯೋಗಿಗಳೆಂದಡೆ ಮೂಗನಾಗಳೆ ಕೊಯಿವೆ.**
**ಯೋಗಿಗಳ ಯೋಗಿ ಶಿವಯೋಗಿ ಸೊಡ್ಡಳಾ,**
**ಸಿದ್ಧರಾಮನೊಬ್ಬನೆ ಶಿವಯೋಗಿ.**

**– ಸೊಡ್ಡಳ ಬಾಚರಸ**

ಇನ್ನಾದರೂ ನಮ್ಮ ಅಜ್ಞಾನದ ಅಂಧ ಮಾರ್ಗಗಳನ್ನು ಬಿಟ್ಟು. ಗುರು ಶಿವಯೋಗಿ ಸಿದ್ದರಾಮರನ್ನು ಅನುಸರಿಸಿ ಶಿವಯೋಗದ ಪಥದಲ್ಲಿ ನಿಜಾಚರಣೆಯ ಅರಿವಿನ ಜ್ಞಾನದ ಲಿಂಗವಂತರಾಗಿ ಸೃಷ್ಟಿಕರ್ತ ಶಿವನ ಚೈತನ್ಯವನ್ನು ಕಂಡುಕೊಳ್ಳುವ ಶಿವಯೋಗ ಎಂಬ ಮಹಾ ತಂತ್ರವನ್ನು ನಮ್ಮ ಇಷ್ಟಲಿಂಗದ ಮುಖಾಂತರ ಅಭ್ಯಾಸ ಮಾಡೋಣ. ಇದರಲ್ಲಿಯೇ ನಮ್ಮೊಳಗೆ ಕೈಲಾಸ ಕಂಡುಕೊಂಡು ಶಿವಚೈತನ್ಯವ ಅನುಭವಿಸೋಣ.

---

**24ನೇ ಪುಟದಿಂದ ಮುಂದುವರೆದಿದೆ.....**

ಹೆಸರಿನೊಡನೆ ಸೇರಿಸಿಕೊಳ್ಳುತ್ತಿದ್ದರು. ಅಲ್ಲದೆ ತನ್ನ ಬಿರಿದನ್ನು ತನ್ನ ಸಾಮಂತರಿಗೆ, ಸೈನಿಕ ಸರದಾರರಿಗೆ, ನಿಷ್ಠಾವಂತ ಅಧಿಕಾರಿಗಳಿಗೆ ನೀಡುತ್ತಿದ್ದರು. ಪೂರಕವೆಂಬಂತೆ 1ನೇ ತೈಲಪ ತನ್ನ ಸೇನಾನಿ ಭೂತೇಯ ದೇವನಿಗೆ ಅವನ ಸಾಮರ್ಥ್ಯ ಮೆಚ್ಚಿ ಅಹವಮಲ್ಲ ಎಂಬ ಬಿರುದನ್ನ ನೀಡಿದ್ದನು. ಸಾಮಂತ ರಾಜರುಗಳು ಸಹ ತಮ್ಮ ದೊರೆಗಳ ನಾಣ್ಯಗಳ ಮಾದರಿಯಲ್ಲೀಯೇ ನಾಣ್ಯಗಳನ್ನ ಟಂಕಿಸುತ್ತಿದ್ದರು. ಸಾಮಂತರು ತಮ್ಮ ಪ್ರಭುಗಳ ಬಿರಿದನ್ನು ಧರಿಸುತ್ತಿದ್ದರಲ್ಲದೆ ಅವರದೇ ರೀತಿಯ ನಾಣ್ಯಗಳನ್ನು ಟಂಕಿಸುವುದು ರೂಢಿಯಲ್ಲಿತ್ತು.

ನೊಳಂಬರ ನಾಣ್ಯಗಳು ಅವುಗಳ ಆಕಾರದಲ್ಲಿ ವೈವಿಧ್ಯತೆ ಕಂಡುಬರುತ್ತವೆ. ನಾಣ್ಯಗಳು ವ್ಯಾಪಾರ, ತೆರಿಗೆ ಪಾವತಿ ಮತ್ತು ಇತರೆ ಸಾಮಾಜಿಕ, ಧಾರ್ಮಿಕ, ಕಲಾಕೌಶಲ್ಯ, ಜೀವನದ ಬಗ್ಗೆ ಮಾಹಿತಿ (ನೀಡುತ್ತಿವೆ) ತಿಳಿಯಲು ಸಹಾಯಕವಾಗಿವೆ. ನೊಳಂಬರ ಕೆಲವು ನಾಣ್ಯಗಳಲ್ಲಿ ಆನೆ, ಸಿಂಹ, ಇತರೆ ಪ್ರಾಣಿಗಳನ್ನು ಹೊಂದಿರುವಂತೆ ಟಂಕಿಸಿರುವುದನ್ನು ಕಾಣಬಹುದಾಗಿದೆ. ಕಾರಣ ಅವರ ಪ್ರಭುಗಳ ನಾಣ್ಯದೊಡನೆ ಬಾಂಧವ್ಯ ಸೂಚಕವಾಗಿದೆ. ಇಮ್ಮಡಿ ನೊಳಂಬ ನಾರಾಯಣ ಎಂದು ಕನ್ನಡ ಲಿಪಿಯಲ್ಲಿ ಮುದ್ರಿಸಿರುವುದನ್ನ ಕಂಡುಬರುತ್ತದೆ. ಈ ನಾಣ್ಯಗಳು ನಂದಿ ಗದ್ಯಾಣ ಎಂದೇ ಹೆಸರಾಗಿವೆ. ನನ್ನಿ ನೊಳಂಬ ಟಂಕಿತ ನಂದಿಗದ್ಯಾಣ ಹೊನ್ನು ಸಾಮಾಂತರು ಮತ್ತು ಅವರ ಪ್ರಭುಗಳ ನಡುವಿನ ಸಾಂಸ್ಕೃತಿಕ ಸಂಬಂಧಗಳ ಸೂಚನೆಯನ್ನು ತಿಳಿಸುತ್ತವೆ.

ನೊಳಂಬರಿಂದ ಮುದ್ರಾಂಕಿತಗೊಂಡ ವಿವಿಧ ಲೋಹಗಳ ನಾಣ್ಯಗಳು ವೈವಿದ್ಯಮಯ ಕಲಾಶೈಲಿ, ಆಕಾರಗಳಲ್ಲಿ ವೃತ್ತ, ಅಷ್ಟಕೋನದಲ್ಲಿದ್ದು ಆಯಾ ರಾಜರ ಹೆಸರು, ಕಾಲ, ಲಿಪಿ, ಭಾಷೆ, ರಾಜ ಲಾಂಛನ, ಅವರು ಆರಾಧಿಸುವ ದೇವರುಗಳು, ಅವರ ಕಲಾಭಿರುಚಿ, ಅಂದಿನ ಸ್ಥಿತಿಗತಿಯನ್ನು ತಿಳಿದುಕೊಳ್ಳಲು ತುಂಬಾ ಅಮೂಲ್ಯ ಆಕಾರಗಳಾಗಿದ್ದು ಅಧ್ಯಯನಕ್ಕೆ ಸಹಾಯಕವಾಗಿವೆ.


# ಗಾಂಧಿ ಚರಿತ ಮತ್ತು ಸ್ವಾಗತ ಗೀತ

ಹತ್ತೂರು ಪಂಡಿತ ಭರ್ಮೇಗೌಡರ ಸಮಗ್ರ ಕಾವ್ಯ ಇತ್ತೀಚೆಗೆ ಹತ್ತೂರು ಗ್ರಾಮದಲ್ಲಿ ಲೋಕಾರ್ಪಣೆಗೊಂಡಿತು. ಈ ಸಮಗ್ರ ಕಾವ್ಯವನ್ನು ಪ್ರೊ. ಚನ್ನೇಶ್ ಹೊನ್ನಾಳಿರವರು ಸಂಗ್ರಹ ಮತ್ತು ಸಂಪಾದನೆ ಮಾಡಿದ್ದಾರೆ. ಈ ಮೊದಲು 'ದಿ॥ ಪಂಡಿತ್ ಭರ್ಮೇಗೌಡರು ಕಂಡ ಮಹಾತ್ಮ ಗಾಂಧಿ' ಎಂಬ ಶೀರ್ಷಿಕೆಯಡಿಯಲ್ಲಿ ಸಾಂಗತ್ಯ ಕಾವ್ಯವನ್ನು ಬಿ.ಚನ್ನಪ್ಪ ಕತ್ತಿಗೆಯವರು ಸಂಗ್ರಹಿಸಿದ್ದು ಸದ್ರಿ ಗ್ರಂಥವನ್ನು ಹೊನ್ನಾಳಿಯಲ್ಲಿ ನಡೆದ 816ನೇ ಶ್ರೀ ಗುರುಸಿದ್ಧರಾಮೇಶ್ವರ ಜಯಂತಿ ಮಹೋತ್ಸವ ಸಮಿತಿಯವರು ಗ್ರಂಥ ಪ್ರಕಟಣೆ ಕೃಪೆಗೆ ಪಾತ್ರರಾಗಿದ್ದಾರೆ.

ಬಿ.ಎಸ್.ಪಂಡಿತ್ ಭರ್ಮೇಗೌಡರು ಈಗಿನ ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ಅಣಜಿ ಗ್ರಾಮದಲ್ಲಿ 01-05-1895ರಲ್ಲಿ ಜನನ. ಕೃಷಿ ಕುಟುಂಬದಲ್ಲಿ ಜನಿಸಿ ವಿದ್ಯಾಭ್ಯಾಸದ ಕಾಳಜಿ ಹಿರಿಯರು ತೋರಿಸುತ್ತಿರಲಿಲ್ಲ. ಭರ್ಮೇಗೌಡರ ಆಸಕ್ತಿ ಜ್ಞಾನದ ದಾರಿಯ ಕಡೆ ಎಳೆದೊಯ್ಯುತ್ತದೆ. ಎಸ್.ಎಸ್.ಎಲ್.ಸಿ. 1927ರಲ್ಲಿ ಪಾಸ್ ಮಾಡಿ. ಹಾವೇರಿ ಮಠದ ಒಬ್ಬ ಗುರುಗಳ ಆಶೀರ್ವಾದ ದೊರೆಯುತ್ತದೆ. ಚಿಕ್ಕಂದಿನಿಂದಲೇ ಸ್ವಾತಂತ್ರ್ಯದ ಚಳುವಳಿಯಲ್ಲಿ ಭಾಗವಹಿಸಿ ಸ್ವರಚನೆ ಕ್ರಾಂತಿಗೀತೆಗಳನ್ನು ರಚಿಸಿ ಚಳುವಳಿಗಾರರನ್ನು ಹುರಿದುಂಬಿಸುತ್ತಿದ್ದರು.

ಭರ್ಮೇಗೌಡರ ಜೀವನ ಶೈಲಿ ಸರಳ, ಎಲ್ಲರನ್ನು ಒಪ್ಪುವಂತಿದ್ದು ಆಕರ್ಷಿತ ವ್ಯಕ್ತಿಯಾಗಿದ್ದರು. ಓದುವ ಹಂಬಲ ಅವರಲ್ಲಿತ್ತು ಬೇರೆಯವರ ಆರ್ಥಿಕ ನೆರವಿನಿಂದ ಮೈಸೂರಿಗೆ ಹೋಗಿ ಕನ್ನಡ ಪಂಡಿತ್ ಪರೀಕ್ಷೆ ಕಟ್ಟಿ ತೇರ್ಗಡೆ ಹೊಂದಿ ಕನ್ನಡ ಶಿಕ್ಷಕರಾಗಿ ವೃತ್ತಿ ಜೀವನದೊಂದಿಗೆ ಸಾಹಿತ್ಯದ ಕೃಷಿಯನ್ನು ಮಾಡುತ್ತಾರೆ. ಶಿವಮೊಗ್ಗೆಯು ಅವರಿಗೆ ಅಕ್ಷರ ಬೀಜಕ್ಕೆ ಫಲವತ್ತಾದ ಭೂಮಿಯಾಗಿ ಪರಿಣಮಿಸುತ್ತದೆ.

ಶಿವಮೊಗ್ಗ ಸಮಾಜವಾದದ ನೆಲೆ ಅಲ್ಲಿಯ ಜನಮನವನ್ನು ಗೆದ್ದ ಭರ್ಮೇಗೌಡರು ಜನರ ವಿದ್ವಾಂಸರ ಬಾಯಲ್ಲಿ ಪಂಡಿತ್ ಭರ್ಮೇಗೌಡರಾದರು. ಆ ಕಾಲ ಘಟ್ಟದಲ್ಲಿ ಸಾಹಿತ್ಯ ರಚನೆ ಮಾಡಿ ಮುದ್ರಣ ಮಾಡಿಸುವ ಕಲ್ಪನೆ ಇರಲಿಲ್ಲ. ಬುದ್ಧಿ ಜೀವಿಗಳ ಸುಸಂಸ್ಕೃತ ಜನರ, ರಾಜಕೀಯ ಮುತ್ಸದ್ಧಿಗಳ ಸ್ನೇಹ ಸಂಪಾದನೆಯೊಂದಿಗೆ ತಮ್ಮ ಬರಹವನ್ನು ಶ್ರೀಮಂತಗೊಳಿಸಿದರು. ಪಂಡಿತ್ ಭರ್ಮೇಗೌಡರು ಗಾಂಧಿಯನ್ನು ಕಂಡ ದೂರದೃಷ್ಟಿ ಅವರ ವೈಯಕ್ತಿಕ ಬದುಕಿನ ಮೇಲೆ ಹೆಚ್ಚು ಪರಿಣಾಮ ಬೀರಿದೆ.



**ಕತ್ತಿಗೆ ಚನ್ನಪ್ಪ**
ಸಾಹಿತ್ಯಧಾರೆ, ಸಿದ್ಧರಾಮ ಬಡಾವಣೆ
ಶಿವಮೊಗ್ಗ. ಮೊ : 9844572572

ಶಿವಮೊಗ್ಗ ನಗರಕ್ಕೆ ಸುತ್ತಮುತ್ತ ನಡೆದ ಸರ್ಕಾರಿ ಅರೆಸರ್ಕಾರಿ ಕಾರ್ಯಕ್ರಮಗಳಿಗೆ ಸ್ವಾಗತ ಗೀತೆ ಭರ್ಮೇಗೌಡರೇ ರಚಿಸಿ ಕೊಡಬೇಕಾಗಿತ್ತು. ಅಂದೇ ಅವರು ಆಗಲೇ ಸಾಹಿತ್ಯ ಒಂದು ಪ್ರಕಾರವಾದ ಷಟ್ಪದಿಯಲ್ಲಿ ರಚನೆ ಮಾಡಿ ಸ್ವತಹ ಹಾಡುತ್ತಿದ್ದರು. ಬಿ. ಚನ್ನಪ್ಪ ಕತ್ತಿಗೆಯವರು "ಆತುರದಲ್ಲಿ ಮೂರು ಮೊಳ ನೇದರು" ಎಂಬ ನಾಣ್ನುಡಿಯಂತೆ ಒಂದೇ ದಿನದಲ್ಲಿ ಎ.ಬಿ.ಮಂಜಪ್ಪ ಇವರ ನೆರವಿನಿಂದ ಮೊಳೆ ಜೋಡಿಸಿದ ಮುದ್ರಣಾಲಯದಲ್ಲಿ ಷಟ್ಪದಿ ಕಾವ್ಯವನ್ನು ಅಚ್ಚು ಹಾಕಿಸಿದ್ದಾಯಿತು.

ಭರ್ಮೇಗೌಡರು ರಚಿಸಿದ ಪ್ರತಿಯೊಂದು ಬರಹಗಳು ಕಸದಬುಟ್ಟಿ ಕಾಣುತ್ತಿದ್ದವು. ಅವುಗಳನ್ನು ಹೆಕ್ಕಿ ತೆಗೆದು ಪ್ರೊ. ಚನ್ನೇಶ್ ಹೊನ್ನಾಳಿರವರು ಒಳ್ಳೆಯ ಕೆಲಸವನ್ನು ಮಾಡಿ ಸಾಹಿತ್ಯದ ಹಾರಕ್ಕೆ ಒಂದು ಸುಂದರ ಹೂ ಮುಡಿಸಿದ್ದಾರೆ. ಅವರು ತುಂಬಾ ಒಳ್ಳೆಯ ಮನಸ್ಸುಳ್ಳವರು ಹಾಗೂ ಕರ್ತವ್ಯ ಪ್ರಜ್ಞೆ ಇರುವವರು. ಶ್ರೀಯುತ ಪಂಡಿತ್ ಭರ್ಮೇಗೌಡರು ಹಳ್ಳಿಯ ಸೊಗಡಿನ, ದೋಣಿ ಸಾಲಿನ ಕುಗ್ರಾಮದಲ್ಲಿ ಜನಿಸಿ ಭಾವನಾತ್ಮಕ ಭಾಂದವ್ಯದೊಂದಿಗೆ ಶಿವಮೊಗ್ಗೆಯ ದುರ್ಗಿಗುಡಿಯಲ್ಲಿ ನೆಲಸಿ ಅನೇಕ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಕೀರ್ತಿ ಇವರದಾಗಿದೆ.

ಯಾವುದೇ ಒಬ್ಬ ವ್ಯಕ್ತಿ ತನ್ನ ಜೀವಿತಾವಧಿಯಲ್ಲಿ ಹೇಗೆ ಬದುಕಿಬಾಳಿದ ಎಂಬುದು ಒಂದು ಕಡೆಯಾದರೆ ಆತ ಬದುಕಿದ ಅವಧಿಯಲ್ಲಿ ಸಮಾಜಕ್ಕೆ ಕೊಟ್ಟ ಕೊಡುಗೆ ಏನು? ಎಂದು ನಾವು ಪ್ರಶ್ನೆ ಮಾಡಿಕೊಂಡರೆ ಪಂಡಿತ್ ಭರ್ಮೇಗೌಡರು ನಮ್ಮನ್ನು ಅಗಲಿರಬಹುದು ಆದರೆ! ಚನ್ನೇಶ್ ಹೊನ್ನಾಳಿರವರು ಸಂಪಾದಿಸಿದ "ಗಾಂಧಿಚರಿತ ಮತ್ತು ಸ್ವಾಗತ ಗೀತ" ಮೂಲಕ ಚಿರಸ್ಥಾಯಿಯಾಗಿ ಉಳಿದಿದ್ದಾರೆ.


**ಪತ್ರಿಕೆಗೆ ಚಂದಾದಾರಾಗಿ**

# ಮೆಣಸಿನಹಾಳ ತಿಮ್ಮನಗೌಡ

ಮೆಣಸಿನಾಳ ಎಂಬುದು ಊರಿನ ಹೆಸರು. ಆ ಊರಿನ ತಿಮ್ಮನಗೌಡ ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿ ವೀರಮರಣ ಹೊಂದಿದ ಅಸಮಾನ್ಯ ವ್ಯಕ್ತಿ. ನಮ್ಮ ನೊಳಂಬ ಸಮಾಜದ ವ್ಯಕ್ತಿ ಎಂಬುದು ನಮ್ಮ ಸಮಾಜವೇ ಹೆಮ್ಮೆಪಡುವ ವಿಚಾರ. ಸೂರ್ಯಚಂದ್ರ ಇರುವವರೆಗೂ. ಅದರೆ ಅವರಿಂದ ಸಮಾಜಕ್ಕೆ ಏನು ಕೊಡುಗೆ ಬಂದಿದೆ ಎಂದು ಕೇಳುವುದಕ್ಕೆ ಏನನ್ನಬೇಕು ನೋಡಿ ತಿಮ್ಮನಗೌಡರ ಸ್ವತಂತ್ರ ಚಳುವಳಿಯಲ್ಲಿ ನನ್ನ ಅಜ್ಜ, ಕಾಗಿನಲ್ಲಿಯ ನಾಲ್ಕು ಜನ, ಎರೇಹಳ್ಳಿಯ ಒಬ್ಬರು ಭಾಗವಹಿಸಿದ್ದರು. ನಮ್ಮ ಹಳ್ಳಿಗಳ ಕಡೆಯಿಂದ. ಹೀಗೆ ಸ್ವತಂತ್ರ ಚಳುವಳಿಯಲ್ಲಿ ಭಾಗವಹಿಸಿದ ಕುಟುಂಬದವರು ಅನುಭವಿಸಿದ ಕಷ್ಟಗಳು ಅನುಭವಿಸಿದವರೇ ಬಲ್ಲರು.

ಬ್ರಿಟಿಷ್ ಆಡಳಿತದ ವಿರುದ್ಧದ ಹೋರಾಟ ಅಂದರೆ, ಸರ್ಕಾರದ ವಿರುದ್ಧದ ಹೋರಾಟ. ಬ್ರಿಟಿಷ್ ಆಡಳಿತಕ್ಕೆ ಹೆದರಿದ್ದ ಇಡೀ ಊರಿಗೆ ಊರೇ ಸ್ವತಂತ್ರ ಚಳುವಳಿಯಲ್ಲಿ ಭಾಗವಹಿಸಿದ್ದ ಕುಟುಂಬಗಳನ್ನು ಇಡೀ ಊರೇ ಬಹಿಸ್ಕರಿಸಿದಂತೆ ನಡೆದುಕೊಳ್ಳುತ್ತಿತ್ತು. ಆ ಕುಟುಂಬ ಗಳಿಗೆ ಸಹಕಾರ ನೀಡಿದವರನ್ನು ಪೋಲೀಸ್ ಬಂದು ಎಳಕೊಂಡು ಹೋಗುತ್ತಿದ್ದರು. ಈ ಹೆದರಿಕೆಯಲ್ಲಿ ಯಾರು ಸ್ವತಂತ್ರ ಚಳುವಳಿಯಲ್ಲಿ ಭಾಗವಹಿಸಿದ ಕುಟುಂಬದವ ರೊಂದಿಗೆ ಮಾತಾಡಲು ಹೆದರುವ ಸನ್ನಿವೇಶವಿತ್ತು ಆವತ್ತು. ಇಂತಹ ಸ್ಥಿತಿಯಲ್ಲಿದ್ದ ಆ ಕುಟುಂಬದ ಬದುಕು ಆ ಊರಲ್ಲಿ ಹೇಗಿತ್ತು ಎಂಬುದನ್ನು ಊಹಿಸಿ. ಈ ಪರಿಸ್ಥಿಯಲ್ಲಿ ಸ್ವತಂತ್ರ ಚಳುವಳಿಯಲ್ಲಿ ಭಾಗವಹಿಸಿದ ನನ್ನ ಅಜ್ಜನ ಕುಟುಂಬದ ಸ್ಥಿತಿ ಹೇಗಿತ್ತು ಊಹಿಸಿ.

ನನ್ನ ಅಜ್ಜನಿಗೆ ಹತ್ತು ಜನ ಮಕ್ಕಳು. ಎಲ್ಲಾ ಹನ್ನೊಂದು ವರ್ಷದ ಕೆಳಗಿನವರು. ಬೇಸಾಯವೇ ಮೂಲಕಸುಬು. ಬಿತ್ತಿ ಬೆಳೆದರೆ ಒಂದೊತ್ತಿಗೆ ಗಂಗಾಳದಲ್ಲಿ ರೊಟ್ಟಿ ಕಾಣಬಹುದಿತ್ತು. ಇಂತಹ ಸ್ಥಿತಿಯಲ್ಲಿ ನನ್ನ ಅಜ್ಜ ಊರುಮನೆ ಬಿಟ್ಟು ಮೆಣಸಿನಾಳು ತಿಮ್ಮನಗೌಡರ ಜೊತೆ ಕಾಗಿನಲ್ಲಿ ನೆಂಟರ ಹುಡುಗರ ಜೊತೆ ಸೇರಿಕೊಂಡು ಸೀಮೇನೆ ತಿರುಗುತ್ತಾ ಹೋದರೆ, ಹೊಲ ಮನೆಯಲ್ಲಿ ಬಿತ್ತಿ ಬೆಳೆಯುವ ಕೈಯೇ ಇಲ್ಲದಾಗಿ ಮನೆಯಲ್ಲಿರುವ ಹನ್ನೊಂದು ಹೊಟ್ಟೆಗಳನ್ನು ತುಂಬಿಸಲು ನನ್ನಜ್ಜಿಯು ದಿನದ ಪಡಿಪಾಟಲು, ಗೋಳು ಹೇಳಲು ಅಸಾಧ್ಯ. ಈ ಸಂದರ್ಭದಲ್ಲಿ ನನ್ನಜ್ಜಿ ಮೆಣಸಿನಾಳು ತಿಮ್ಮನಗೌಡ ಹಾಗೂ ಕಾಗಿನಲ್ಲಿ ನೆಂಟರ ಹುಡುಗರಿಗೆ ಸಾಬಿಸದೇ ಇದ್ದ ದಿನವಿಲ್ಲ. ನನ್ನಜ್ಜಿಯಷ್ಟೇ ಅಲ್ಲ ಕಾಗಿನಲ್ಲಿ ಊರಲ್ಲಿ ಎರೇಹಳ್ಳಿ ಊರಾಗೆ ಈರೀತಿ ತಿರುಗುತ್ತಿರುವ ಹುಡುಗರನ್ನು ಕುರಿತು ಬೈಯುವ ಜನರೇ ಇರಲಿಲ್ಲ.



ಡಿ.ಬಿ.ಶಂಕರಪ್ಪ
ಹುತ್ತೇಶ ಕೃಪ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಸವಳಂಗ ರಸ್ತೆ, ಶಿವಮೊಗ್ಗ.
ಮೊ : 9448516344

ಒಮ್ಮೆ ನಾನು ನನ್ನ ಅಜ್ಜಿ ಜೊತೆ ಕಾಗಿನಲ್ಲಿ ಮದುವೆಗೆ ಹೋಗಿದ್ದೆ. ನಾಲ್ಕು ವರ್ಷದವನಿರಬೈದು. ಆ ಮದುವೆ ದಿನ ಮಧ್ಯರಾತ್ರಿ ಕದ್ದು ಬಂದು ಮದುವೆ ಊಟ ಮಾಡಿ ಹೋಗಿದ್ದರು ಈ ಸ್ವತಂತ್ರ ಚಳುವಳಿಯ ಹುಡುಗರು. ಊರಗೌಡ ಸರ್ಕಾರದ ಪರ ಕೆಲಸ ನಿರ್ವಹಿಸುವ ಸರ್ಕಾರದ ವ್ಯಕ್ತಿ. ಯಾವ ಸಂದರ್ಭದಲ್ಲಾದರು ಹಿಡಿಸಬಹುದಿತ್ತು. ಇಡೀ ಊರುಗಳೇ ಸರ್ಕಾರಕ್ಕೆ ಹೆದರಿ ಆತಂಕದಿಂದ ಬದುಕುವ ದಿನಗಳು ನಿರ್ಮಾಣವಾಗಿದ್ದಿತು. ಇಂತಹ ದಿನಗಳಲ್ಲಿ ಆಗಿನ ನಮ್ಮ ಸಮಾಜದ ಜನ ಈ ಚಳುವಳಿಗಾರರಿಗೆ ಹಿಡಿಶಾಪ ಹಾಕದವರಿರಲಿಲ್ಲ. ಇವಕ್ಕೆ ಯಾಕೆ ಬೇಕಿತ್ತು ಎಂಬ ಮಾತು ಎಲ್ಲೆಲ್ಲೂ.

ಅದರೆ ಸ್ವತಂತ್ರ ಭಾರತದಲ್ಲಿ ಬದುಕುತ್ತಿರುವ ನಾವು ಅವರ ಸ್ಮರಣೆಯನ್ನು ಮಾಡಿಕೊಂಡು ಗೌರವ ಅರ್ಪಿಸುತ್ತಿದ್ದೇವೆ. ಮೆಣಸಿನಾಳು ತಿಮ್ಮನಗೌಡನ ನೆನಪು ನಮ್ಮ ಸಮಾಜ ಹೆಮ್ಮೆಪಡುವ ಸಂಗತಿಯಾಗಿ ಸ್ವೀಕರಿಸಿ. ಅವರ ಜನ್ಮದಿನಾಚರಣೆ ಆಚರಿಸುವುದು ಆಥವಾ ಸ್ವತಂತ್ರ ದಿನಾಚರಣೆ ದಿನ ಅವರ ಊರಲ್ಲಿ ವಿಷೇಶ ಕಾರ್ಯಕ್ರಮ ನಡೆಸುವುದು ಮುಖ್ಯವಲ್ಲವೆ. ಮೆಣಸಿನಾಳು ತಿಮ್ಮನಗೌಡರ ಚಳುವಳಿಗೆ ನಮ್ಮ ಸಮಾಜದ ಯುವಕರು ಯುವತಿಯರು ಹೇಗೆ ಸ್ಪಂದಿಸಿದರು ಎಂಬುದನ್ನು ನಾನು ನಮ್ಮ ಅಜ್ಜ ಆಗಾಗ ಮೆಲಕು ಹಾಕುತ್ತಿದ್ದು ಅಲ್ಪಸ್ವಲ್ಪ ಕೇಳಿಸಿಕೊಂಡಿದ್ದೆ ಅದನ್ನು ನೆನಪಿಸಿಕೊಂಡು "ಬೆಳಗು ಹರಿಯುವ ಮುನ್ನ" ಕಾದಂಬರಿಯನ್ನು 2008ರಲ್ಲಿ ರಚಿಸಿದ್ದೆನು. ಆ ಕಾದಂಬರಿಗೆ ಶಿವರಾಮಕಾರಂತರ ಹೆಸರಿನಲ್ಲಿ ನೀಡುವ ಉತ್ತಮ ಕಾದಂಬರಿಯ ಪ್ರಶಸ್ತಿ ಬಂದಿರುವುದು. ಈವತ್ತು ಯಾಕೆ ಇವರನ್ನು ನೆನೆಯಬೇಕು; ಯಾಕೆ ಅವರ ಹೆಸರಲ್ಲಿ ಕಾರ್ಯಕ್ರಮ ನಡೆಸಬೇಕು; ಅವರಿಂದ ನಮ್ಮ ಸಮಾಜಕ್ಕೆ ಆಗಿರುವ ಅನುಕೂಲವೇನು; ಎಂಬ ಮಾತು

ಮುಖ್ಯವಲ್ಲ. ಅವರ ಕಾರ್ಯದಿಂದ ದೇಶಕ್ಕೆ ನಾಡಿಗೆ ಆಗಿರುವ ಅನುಕೂಲವೇನು ಎಂಬುದು ಮುಖ್ಯವಾಗುತ್ತದೆ.

ಲಂಕೇಶ್ ರಚಿಸಿದ ಕನ್ನಡ ಸಾಹಿತ್ಯ; ಸಾಹಿತ್ಯ ಲೋಕದಲ್ಲಿ ಹೊಸ ಬರಹಗಾರರಿಗೆ ಹೊಸ ಸಂಚಲನ ಮೂಡಿಸಿದೆ, ಲಂಕೇಶ್ ರಚಿಸಿದ ನಾಟಕಗಳು ಹೊಸ ಆಲೋಚನೆಗೆ ಚಿಂತನೆಗೆ ಕಾರಣೀಭೂತವಾಗಿವೆ, ಲಂಕೇಶ್ ನಿರ್ಮಿಸಿದ ಸಿನಿಮಾಗಳು ರಾಷ್ಟ್ರಮಟ್ಟದಲ್ಲಿ ಗುರುತಿಸಲ್ಪಟ್ಟಿವೆ, ಲಂಕೇಶ್ ಪತ್ರಿಕೆ ಆಗಿನ ರಾಜಕೀಯದಲ್ಲಿ ಹೊಸದೊಂದು ಮನ್ವಂತರವನ್ನೇ ಸೃಷ್ಟಿಸಿದ್ದು ಒಂದು ಇತಿಹಾಸ, ಆವತ್ತಿನ ಯುವ ಜನಾಂಗಕ್ಕೆ ಒಂದು ಮಾದರಿಯ ನಡೆನುಡಿಯನ್ನೇ ತಂದುಕೊಟ್ಟಿದ್ದು ಮರೆಯುವುದು ಹೇಗೆ. ಆ ದಿನದಲ್ಲಿ ಲಂಕೇಶ್ ಪತ್ರಿಕೆ ಕೈಯಲ್ಲಿ ಹಿಡಿದು ಓಡಾಡುವುದು, ಓದುವುದು, ಪತ್ರಿಕೆ ತರಿಸುವುದು ಒಂದು ನಾಗರೀಕ ಸಂಸ್ಕೃತಿಯ ಸಂಕೇತವೇ ಎಂದು ತಿಳಿದ ಕಾಲವಿತ್ತು. ನಾಡಿನ ಉದ್ದಗಲಕ್ಕೂ ಇಂತಹ ಸಂಚಲನ ಸೃಷ್ಟಿಸಿದ ಅಸಮಾನ್ಯ ವ್ಯಕ್ತಿ ನಮ್ಮ ಸಮಾಜದ ಕೊಡುಗೆ ಎಂದು ಹೆಮ್ಮೆಪಡುವ ಅವಕಾಶ ನಮ್ಮದಾಗಿದೆ. ಅದಕ್ಕಾಗಿ ಅವರನ್ನು ಗೌರಯುತವಾಗಿ ಸ್ಮರಿಸುತ್ತಾ ಅವರ ಬಗ್ಗೆ ಕಾರ್ಯಕ್ರಮ ನಡೆಸುವುದರಿಂದ ಮುಂದಿನ ಪೀಳಿಗೆಗೆ ಒಂದು ಒಳ್ಳೆಯ ಸಂದೇಶ ನೀಡುವುದಾಗಿದೆ.

ಅದು ಸಂಸ್ಥೆಯ ಅಧ್ಯಕ್ಷರ ವೈಭವೀಕರಣಕ್ಕೆ ಮಾಡುವ ಕಾರ್ಯಕ್ರಮವಲ್ಲ. ಅಧ್ಯಕ್ಷರು ಈಗಾಗಲೇ ಇಂತಹ ಕಾರ್ಯಕ್ರಮ ಮಾಡಿಮಾಡಿ ಸುಸ್ತಾಗಿ ಕೊನೆಯ ಹಂತದಲ್ಲಿ ಇದ್ದಾರೆ. ನಮ್ಮ ಸಮಾಜದ ಪ್ರಾತಿನಿಧಿಕ ಸಂಸ್ಥೆಯಾದ ನಂದಿ ವಿದ್ಯಾಸಂಸ್ಥೆಯು ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವ ಮೂಲಕ ಒಂದು ಒಳ್ಳೆಯ ಸಂಸ್ಕೃತಿ ಬೆಳೆಯಲು ಕಾರಣವಾಗಲಿ ಎಂಬ ಸದುದ್ದೇಶದಿಂದ ಈ ಕಾರ್ಯಕ್ರಮದ ನಡೆಸುತ್ತಿರುವುದು. ಈ ರೀತಿಯ ಕಾರ್ಯಕ್ರಮ ನಡೆಸುವುದರಿಂದ ನಮ್ಮ ಸಂಸ್ಥೆ ಹೊರಲಾರದ ಆರ್ಥಿಕ ಸಂಕಷ್ಟದಲ್ಲಿ ಸಿಲುಕುವ ಸ್ಥಿತಿಯನ್ನಂತೂ ತಲುಪಲಾಗಿಲ್ಲ. ಆ ಎಚ್ಚರಿಕೆಯಿಂದಲೇ ಕಾರ್ಯಕ್ರಮನ್ನು ಆಯೋಜನೆ ಮಾಡುತ್ತಾ ಬಂದಿರುತ್ತದೆ ಸಂಸ್ಥೆ. ಹಾಗೆ ಸಂಸ್ಥೆ ನಡೆಸುತ್ತಾ ಬಂದಿರುವ ಕಳೆದ ಒಂದು ವರ್ಷದಲ್ಲಿನ ಯಾವ ಕಾರ್ಯಕ್ರಮವೂ ಕಳಪೆಯಾಗಿಲ್ಲ. ಹಾಗೆ ಎಲ್ಲರೂ ತಿಳಿದಿರುವುದಕ್ಕಿಂತಲೂ ಯಶಸ್ವಿಯಾಗಿರುತ್ತವೆ. ಹಾಗೆ ಜನರ ಮನ್ನಣೆಗೆ ಪಾತ್ರವೂ ಆಗಿವೆ.

ನಮ್ಮ ಕಾರ್ಯಕ್ರಮದಿಂದ ನಮ್ಮ ಶಿವಮೊಗ್ಗದಲ್ಲಿ ನಮ್ಮ ಸಮಾಜದ ಯವಕ ಯುವತಿಯರಲ್ಲಿನ ಪ್ರತಿಭೆ ಬೆಳಕಿಗೆ ಬರಲು ಕಾರಣವೂ ಆಗಿದೆ. ಆವತ್ತು ಮೆಣಸಿನಾಳು ತಿಮ್ಮನಗೌಡನ ಹಿಂಬಾಲಕರು ಇರುವ ಊರು, ಕೇರಿ, ಮನೆಗಳ ಮೇಲೆ ದಿನನಿತ್ಯ ನಿರಂತರ ದಾಳಿ ನಡೆಯುತ್ತಿತ್ತು ಪೋಲೀಸರಿಂದ. ಆ ದಾಳಿಯ ಸುಳಿವು ಗೊತ್ತಾಗುತ್ತಿದ್ದಂತೆ ಮನೆಯ ಗಂಡಸರೆಲ್ಲಾ ಓಡಿಹೋಗಿರುತ್ತಿದ್ದರು ಮನೆಯಲ್ಲಿ ಉಳಿದಿದ್ದ ಹೆಂಗಸರ ಗೋಳು ಹೇಳತೀರದಾಗಿರುತ್ತಿತ್ತು. ನಮ್ಮ ಮನೆಯ ಮೇಲೆ ಆಗಾಗ ನಡೆಯುತ್ತಿದ್ದ ಪೋಲೀಸರ ದಾಳಿ ನನಗೆ ಈಗಲು ಅಸ್ಪಷ್ಟವಾಗಿ ಕಣ್ಣಮುಂದೆ ಬರುತ್ತಿದೆ. ಮನೆ ತುಂಬಾ ಪೋಲೀಸರ ಬೂಟಿನ ಸದ್ದು ಆ ಪೋಲೀಸರ ಕಾಲಿಡಿದು ನಮ್ಮವ್ವ ಅಂಗಲಾಚಿ ಗೋಳೋ ಎಂದು ಅಳುತ್ತಿದ್ದದು. ಪೋಲೀಸರು ನಮ್ಮ ಮನೆಯಲ್ಲಿನ ಎಲ್ಲಾ ವಸ್ತುಗಳನ್ನು ಅಂಗಳಕ್ಕೆ ಎಸೆಯುತ್ತಿದ್ದು ಅಡಿಗೆಮನೆಯ ರೊಟ್ಟಿಗಳು ಅಂಗಳದಲ್ಲಿ ಚಲ್ಲಾಪಿಲ್ಲಿಯಾಗಿ ಬಿದ್ದರೆ ಅಂಬಲಿ ಸೋರೆ ಒಡೆದು ಚೂರಾಗಿರುತ್ತಿತ್ತು ಅಂಗಳದಲ್ಲಿ ಬಿದ್ದಿದ್ದ ಒಡೆದ ಮಣ್ಣಿನ ಚೂರುಗಳಿಗೆ ಮೆತ್ತಿದ್ದ ಅಂಬಲಿಯನ್ನು ನನ್ನಕ್ಕ ಅಳುತ್ತಿದ್ದ ನನಗೆ ತನ್ನ ಬೆರಳಿನಿಂದ ಸೀಟಿ ನನ್ನ ಬಾಯಿಯ ಹತ್ತಿರ ತಂದು ನೆಕ್ಕೋ ಎಂದು ಅಳುತ್ತಾ ಕಣ್ಣೀರು ಸುರಿಸುತ್ತಾ ಹೇಳುತ್ತಿದ್ದು ಈಗಲೂ ಕಣ್ಣಿಗೆ ಕಟ್ಟಿದಂತೆ ಇದೆ.

ನಮ್ಮ ಕುಟುಂಬ ಇಂತದ್ದೆಲ್ಲಾ ನೋವು ಅನುಭವಿಸುತ್ತಿದ್ದು ನನ್ನಜ್ಜ ಚಳುವಳಿಗೆ ಹೋಗಿದ್ದು. ಚಳುವಳಿಯ ಕಾರಣಕರ್ತನಾದ ಮೆಣಸಿನಾಳ ತಿಮ್ಮನಗೌಡ. ಆಗ ನನ್ನಜ್ಜಿ ಬೈಯುತ್ತಿದ್ದೆ. ಈ ರೀತಿಯಲ್ಲಿ ನಮ್ಮ ಸಮಾಜದ ಹಲವು ಕುಟುಂಬಗಳ ನೋವಿಗೆ ಕಾರಣ. ಆದರೆ ಆವತ್ತು ಸಮಾಜದ ಕುಟುಂಬಗಳ ನೋವಿಗೆ ಕಾರಣರಾದ ನಮ್ಮಸಮಾಜದ ಮಹಾಪುರುಷ ಮಣಸಿನಾಳು ತಿಮ್ಮನಗೌಡರನ್ನು ಹೆಮ್ಮೆಯಿಂದ ಸ್ಮರಿಸುತ್ತೇವೆ. ಕಾರಣ ನಾಡಿಗಾಗಿ ದೇಶಕ್ಕಾಗಿ ಅವರ ತ್ಯಾಗಕ್ಕಾಗಿ ಇಡೀ ನಾಡೇ ನಮಿಸುತ್ತದೆ. ಇಲ್ಲಿ ದೇಶಕ್ಕಾಗಿ ಕೊಟ್ಟಕೊಡುಗೆ ಮುಖ್ಯ. ನಮ್ಮ ಊರು ನಮ್ಮ ಸಮಾಜ ಜಾತಿ ಮುಖ್ಯವಲ್ಲ.

ಅಷ್ಟೇಅಲ್ಲ ನಾನು ನೋಡಿಲ್ಲ ಕೇಳಿದ್ದೇನೆ ಮೆಣಸಿನಾಳು ತಿಮ್ಮನಗೌಡರ ಪ್ರತಿಮೆಯುನ್ನು ರಾಣೇಬೆನ್ನೂರು ತಾಲ್ಲೂಕು ಕಛೇರಿಯ ಮುಂದೆ ಸ್ಥಾಪಿಸಲಾಗಿದೆ ಎಂದು ನನ್ನಜ್ಜ ಸ್ವತಂತ್ರ ಹೋರಾಟದಲ್ಲಿ ಭಾಗಿಯಾಗಿದ್ದರು ಎಂದು ಅವರಿಗೆ ನೀಡುವ ಹಣಕ್ಕೆ ಕೈಚಾಚಲೇ ಇಲ್ಲ. ಎಂದು. ಸ್ವತಂತ್ರನಂತರ ಹುಟ್ಟಿದ ಕೂಸುಗಳು ತಾವು ಚಳುವಳಿಯಲ್ಲಿ ಭಾಗಿ ಎಂದು ಹಣಪಡೆದವರನ್ನು ಕಂಡಿದ್ದೇವೆ.......ಈ ಕಾಲದಲ್ಲಿ...

# ಆರೋಗ್ಯಾಮೃತ 40


## ಜೀವಾಮೃತ

ಹಿಂದಿನ ಸಂಚಿಕೆಯಿಂದ.....

### ತ್ವಗೇಂದ್ರಿಯ ವಿಷಯದಿಂದ ಆನೆ ಕೆಡುವುದು ರಾಜನ ಕೃತಕದಲ್ಲಿ

ಹಿಂದಿನ ಕಾಲದಲ್ಲಿ ಆನೆಗಳನ್ನು ಹಿಡಿಯಲು ಅನೇಕ ತಂತ್ರಗಳನ್ನು ಮಾಡುತ್ತಿದ್ದರು. ಹೆಣ್ಣಾನೆಯ ಅಥವಾ ಗಂಡಾನೆಯ ಕೃತಕ ರೂಪಗಳನ್ನು ಮಾಡಿ ನಿಲ್ಲಿಸಿದಾಗ ಅದರ ಆಕರ್ಷಣೆಯಿಂದ ಸ್ಪರ್ಶ ಸುಖವನ್ನು ಅನುಭವಿಸಬೇಕೆಂದು ಆನೆಗಳು ಬರುತ್ತಿದ್ದವು. ಆ ದಾರಿಯಲ್ಲಿ ದೊಡ್ಡ ದೊಡ್ಡ ತಗ್ಗುಗಳನ್ನು ತೋಡಿ ಅವುಗಳು ಕಾಣದಂತೆ ಮುಚ್ಚಿ ಆನೆಗಳು ಆ ತಗ್ಗಿನಲ್ಲಿ ಬೀಳುವಂತೆ ಮಾಡುತ್ತಿದ್ದರು. ಚರ್ಮೇಂದ್ರಿಯದ ವಿಕಾರಕ್ಕೊಳಗಾಗಿ ಸ್ಪರ್ಶ ಸುಖವನ್ನು ಬಯಸಿದ ಆನೆ ಮೋಸಕ್ಕೊಳಗಾಗಿ ಬಂಧನಕ್ಕೀಡಾಗುತ್ತಿತ್ತು. ಆನೆ ಕೇವಲ ಶಾರೀರಿಕವಾಗಿ ದೊಡ್ಡದು. ಅದರ ಮನ ಬುದ್ಧಿಗಳು ಈ ಮಾನವನ ಮೋಸವನ್ನು ಅರ್ಥ ಮಾಡಿಕೊಳ್ಳುವಷ್ಟು ಬೆಳೆದಿಲ್ಲ ಎಂಬುದು ನಿಜ. ಆದರೆ, ಮನಸ್ಸು ಬುದ್ಧಿ ಬೆಳೆದ ಈ ಮಾನವನೂ ಮೇಲೆ ಮೇಲೆ ಚರ್ಮ ಸೌಂದರ್ಯವನ್ನು ಕಂಡು ಒಳಗಿನ ಗುಣಗಳನ್ನು ನೋಡುವ ವಿವೇಕಶಕ್ತಿಯನ್ನು ಕಳೆದುಕೊಂಡಿದ್ದಾನಲ್ಲ. ಅಷ್ಟೇ ಅಲ್ಲದೆ ಬೇರೆಯವರನ್ನು ಆಕರ್ಷಿಸಲು ತನ್ನ ದುರ್ಗುಣಗಳನ್ನು ಮುಚ್ಚಿಕೊಳ್ಳಲು ಅನೇಕ ಬಣ್ಣಬಣ್ಣದ ಬಟ್ಟೆಗಳನ್ನು, ಅನೇಕ ಲಾಂಛನಗಳನ್ನು, ಆಭರಣಗಳನ್ನು ಧರಿಸಿ ಬೇರೆಯವರನ್ನು ವಂಚಿಸಿ ತನ್ನನ್ನು ತಾನೇ ಮೋಸಗೊಳಿಸಿಕೊಳ್ಳುತ್ತಿದ್ದಾನಲ್ಲ, ಏನೆನ್ನಬೇಕು.

ಈ ಸಂದರ್ಭದಲ್ಲಿ ಅಷ್ಟಾವಕ್ರನೆಂಬ ತತ್ವಜ್ಞಾನಿಯು ಅವನು ಗಳಿಸಿಕೊಂಡ ಆತ್ಮಜ್ಞಾನವನ್ನು ನೋಡದೇ ಅವನ ವಕ್ರತೆಗಳನ್ನು ನೋಡಿ ನಕ್ಕ ರಾಜಾಸ್ಥಾನದ ಪಂಡಿತರನ್ನು, ವಿದ್ವಾಂಸವನ್ನು ಚಮ್ಮಾರರು ಎಂದು ಕರೆದುದು ಸೂಕ್ತವಾಗಿದೆಯಲ್ಲವೇ? ಹಾಗೆ ನಾವು ಕೂಡ ಎಷ್ಟೋ ಸಂದರ್ಭಗಳಲ್ಲಿ ಮೇಲೆ ಮೇಲೆ ನೋಡಿ ಚರ್ಮದ ಕುರೂಪು ಸುರೂಪುಗಳನ್ನು ನೋಡಿ ಮೋಸ ಹೋಗಿ ಚಮ್ಮಾರರೇ ಆಗುತ್ತಿದ್ದೇವಲ್ಲವೆ ?



**ಶ್ರೀ ಶ್ರೀ ಬಸವಾನಂದಸ್ವಾಮಿಗಳವರು**
ಗುರುಬಸವ ಮಹಾಮನೆ,
ಮನಗುಂಡಿ, ಧಾರವಾಡ

ಚರ್ಮದ ವಿಕಾರಗಳ ಬಗ್ಗೆ ಬರೆಯುವಾಗ ಬಟ್ಟೆಗಳ ಮೋಹ, ಆಭರಣಗಳ ಆಸೆಯಿಂದಾಗುತ್ತಿರುವ ಅನರ್ಥಗಳನ್ನು ಹೇಳದೆ ಇರಲಾಗುತ್ತದೆಯೇ ? ಮೊದಲು ಬೆತ್ತಲೆ ಅಡ್ಡಾಡಿ ನಂತರ ಎಲೆ, ತೊಗಟೆ, ಪ್ರಾಣಿಗಳ ಚರ್ಮದಿಂದ ಮೈ ಮುಚ್ಚಿಕೊಂಡ ಈ ಮಾನವ ವಸ್ತ್ರಮೋಹ ಹೇಗೆ ಬೆಳೆಯುತ್ತಿದೆಯೆಂಬುದು ನಿಮಗೆಲ್ಲ ತಿಳಿದ ಸಂಗತಿಯೇ ಆಗಿದೆ. ಹತ್ತಿಯನ್ನು ಕಂಡುಹಿಡಿದಾಯಿತು. ರೇಷ್ಮೆಯ ಥಳ-ಥಳ ಹೊಳೆಯುವ ಬಟ್ಟೆಗಾಗಿ ಕೋಟ್ಯಂತರ ಹುಳುಗಳನ್ನು ಕೊಂದು ತಾವು ಮಿಂಚಿದ್ದಾಯಿತು. ಈಗ ರಾಸಾಯನಿಕಗಳಿಂದ ತಯಾರಾದ ಕೃತಕ ನೂಲುಗಳ ಯುಗ. ಸ್ವಲ್ಪ ಬೆಂಕಿ ಸೋಂಕಿದರೆ ಮುಗಿಯಿತು. ಮೇಣದಂತೆ ಕರಗಿ ದೇಹಕ್ಕೆಲ್ಲಾ ಅಂಟಿಕೊಂಡು ಹಾಕಿಕೊಂಡವರ ಕಥೆಯನ್ನೇ ಮುಗಿಸಿಬಿಡುತ್ತದೆ. ಚರ್ಮವೂ ಕೂಡ ಉಸಿರಾಡುತ್ತದೆಯೆಂಬ ಸತ್ಯ ಬಹಳ ಜನ ವಸ್ತ್ರಮೋಹಿಗಳಿಗೆ ಗೊತ್ತಿದ್ದಂತೆ ಕಾಣುವುದಿಲ್ಲ. ಹಾಗೆ ಗೊತ್ತಾಗಿದ್ದರೆ ತಮ್ಮ ಮೈ ಬೆವೆತು ಹಿಂಸೆಯಾಗುತ್ತಿದ್ದರೂ ಬೇರೆಯವರ ಕಣ್ಣಿಗೆ ಹೊಳೆಯುವಂತೆ ರೇಷ್ಮೆ ಅಥವಾ ಕೃತಕ ನೂಲಿನಿಂದ ತಯಾರಾದ ಯಾವುದೇ ಬಟ್ಟೆಗಳನ್ನು ಹಾಕಿಕೊಳ್ಳುತ್ತಿರಲಿಲ್ಲ. ಎಂತಹ ವಿಚಿತ್ರ ಆಕರ್ಷಣೆಯಲ್ಲವೇ? ತಮ್ಮ ಆನಂದ ಆರೋಗ್ಯಗಳನ್ನು ಬಲಿಕೊಟ್ಟಾದರೂ ಪರರ ಕಣ್ಣನ್ನು ಮೆಚ್ಚಿಸುವ ಈ ಹುಚ್ಚು ಏಕೆ? ಇದು ಚರ್ಮೇಂದ್ರಿಯದ ವಿಕಾರವಲ್ಲವೇ?

### ಶ್ರವಣೇಂದ್ರಿಯ ವಿಷಯದಿಂದ ಎರಳೆ ಕೆಡುವುದು, ಬೇಟೆಗಾರನ ಸರಳಿನಲ್ಲಿ

ಬಿಲ್ಲು ಬಾಣಗಳನ್ನು ಹಿಡಿದು ಬೇಟೆಗೆ ಹೋಗುತ್ತಿದ್ದ ಕಾಲ, ಜನಸಂಖ್ಯೆ ಬಹಳ ಕಡಿಮೆ. ಜಾನುವಾರುಗಳ ಸಂಖ್ಯೆಯೇ ಹೆಚ್ಚಾಗಿದ್ದ ಕಾಲ. ಬೇಟೆ

ಅಪರಾಧವಾಗಿರದೆ ಸಾಹ ಎಂದು ತಿಳಿದ ಕಾಲವೊಂದಿತ್ತು. ಆಗ ಬೇಟೆಗೆ ಹೋದವರು ಜಿಂಕೆಗಳನ್ನು ಬೇಟೆಯಾಡುತ್ತಿದ್ದುದೇ ಹೆಚ್ಚು. ಜಿಂಕೆಯು ಬಹು ಚುರುಕಾದ ಪ್ರಾಣಿ, ಅತಿ ವೇಗವಾಗಿ ಓಡುವ, ಅತಿದೂರಕ್ಕೆ ಜಿಗಿಯುವ ಪ್ರಾಣಿಯಾಗಿದ್ದುದರಿಂದ ಅದಕ್ಕೆ ಬಾಣ ಹೊಡೆಯುವುದು ತುಂಬಾ ಕಷ್ಟವಾಗುತ್ತಿತ್ತು. ಅದಕ್ಕೆ ಬೇಟೆಗಾರರು ಒಂದು ಉಪಾಯ ಮಾಡುತ್ತಿದ್ದರು. ಕೊಳಲನ್ನು ನುಡಿಸುತ್ತಾ ಒಂದುಕಡೆ ನಿಲ್ಲುತ್ತಿದ್ದರು. ಆ ಕೊಳಲು ಶಬ್ದ ಕೇಳುತ್ತಾ ಮೈಮರೆತು ನಿಲ್ಲುತ್ತಿತ್ತು. ಆಗ ಬೇಡ ಅದಕ್ಕೆ ಬಾಣ ಬಿಡುತ್ತಿದ್ದ. ಶ್ರವಣೇಂದ್ರಿಯ ಎಂದರೆ ಕಿವಿ. ಆ ಕಿವಿಯ ವಿಕಾರದಿಂದ ಜಿಂಕೆ ತನ್ನ ಪ್ರಾಣವನ್ನೇ ನೀಗಿಕೊಳ್ಳುತ್ತಿತ್ತು. ಒಂದು ಕಾಲದಲ್ಲಿ ಇಂತಹ ಮುಗ್ಧ ಪ್ರಾಣಿಗಳ ಕಿವಿಯ ವಿಕಾರವನ್ನು ಬಳಸಿಕೊಂಡು ಕೊಂದು ತಿಂದ ಮಾನವ ಈಗ ಕಿವಿಯ ವಿಕಾರಕ್ಕೆ ಮನಸೋತು ಸಂಪೂರ್ಣವಾಗಿ ದಾರಿ ತಪ್ಪಿದ್ದಾನೆ. ಒಂದು ಕಾಲವಿತ್ತು ಗಂಡ ಹೆಂಡತಿಯರು ಪರಸ್ಪರ ಮಾತನಾಡಿಕೊಳ್ಳುವಾಗಲೂ ಕುಟುಂಬದ ಸದಸ್ಯರಿಗೆ ಹೆದರಿಕೊಂಡು, ಮಕ್ಕಳಿಗೆ ನಾಚಿಕೊಂಡು ಗುಟ್ಟಾಗಿ ಮಾತನಾಡಬೇಕಾಗುತ್ತಿತ್ತು. ಈಗ ದೂರದರ್ಶನದ ಗುಂಡಿ ಒತ್ತಿದರೆ ಮುಗಿಯಿತು. ಪ್ರಚೋದಕ ಸಲ್ಲಾಪಗಳು, ಕಾಮ ಪ್ರಚೋದಕ ಗೀತೆಗಳು ಯಾವ ಸಮಯದಲ್ಲಿ ಬೇಕಾದರೂ ಸಿಗುತ್ತವೆ. 24 ಗಂಟೆಯೂ ಪ್ರಚೋದನಕಾರಕ ಅಶ್ಲೀಲ ಚಿತ್ರಗೀತೆಗಳನ್ನು ಪ್ರಸಾ ಮಾಡುವ ರೇಡಿಯೋ, ಟಿ.ವಿ. ಕೇಂದ್ರಗಳಿಗೇನೂ ಕಡಿಮೆಯಿಲ್ಲ. ಹಾಗಾದರೆ ಭಕ್ತಿಗೀತೆಗಳಿಗೆ ಜಾಗ? ಬೆಳಗಿನ ಹೊತ್ತು ನೆಪಮಾತ್ರಕ್ಕೆ ಮಾತ್ರ ಅರ್ಧಗಂಟೆ ಭಕ್ತಿಗೀತೆಗಳನ್ನು ಪ್ರಸಾರ ಮಾಡಿ ಉಳಿದ ಸಮಯದಲ್ಲೆಲ್ಲಾ ಕೀಳು ಪ್ರವೃತ್ತಿಗಳನ್ನು ಬಡಿದೆಬ್ಬಿಸುವ ಪ್ರಚೋದನಕಾರಿ ಕಾರ್ಯಕ್ರಮಗಳೇ ಹೆಚ್ಚಾಗಿ ಪ್ರಸಾರವಾಗುತ್ತಿವೆ. ಹಸು ಎಂತಹ ಆಹಾರವನ್ನು ತಿನ್ನುತ್ತದೆಯೋ ಅಂತಹ ಹಾಲನ್ನು ಕೊಡುವಂತೆ ಕಿವಿಯಿಂದ ಏನು ಕೇಳುತ್ತೇವೆಯೋ ಅದೇ ಬಾಯಿಯಿಂದಲೂ ಬರುತ್ತದೆ. ಈ ಕಾರಣದಿಂದಲೇ ಈಗಿನ ಯುವಕ ಯುವತಿಯರ ಬಾಯಲ್ಲಿ ಕೇವಲ ಸಿನಿಮಾ ಹಾಡುಗಳೇ ಹೆಚ್ಚಾಗಿ ತುಂಬಿ ತುಳುಕಾಡುತ್ತವೆ. ಎಂತಹ ಹಾಡುಗಳನ್ನು ಹಾಡುತ್ತಾರೋ ಅಂತಹ ಮನಸ್ಸು ರೂಪುಗೊಳ್ಳುತ್ತಿರುತ್ತದೆ. ನಾರದ ಸೂತ್ರದಲ್ಲಿ ಭಕ್ತಿಯನ್ನು ಒಂಭತ್ತು ವಿಧವಾಗಿ ವಿಂಗಡಿಸಲಾಗಿದೆ. ನವವಿಧ ಭಕ್ತಿಗಳ ಬಗ್ಗೆ ನೀವೆಲ್ಲಾ ಕೇಳಿರಬಹುದಲ್ಲವೇ? ಅದರಲ್ಲಿ ಮೊದಲನೆಯ ಭಕ್ತಿ ಯಾವುದು ಗೊತ್ತೆ? ಶ್ರವಣಭಕ್ತಿ! ಅಂದರೆ ಭಕ್ತಿ ಕೇಳುವುದರಿಂದ ಪ್ರಾರಂಭವಾಗುತ್ತದೆ. ಆದುದರಿಂದ ಮಕ್ಕಳಿಗೆ ಭಕ್ತಿ ಉದ್ದೀಪನವಾಗಬೇಕಾದರೆ ಶುಭಕರವಾದ ಮಂಗಳಪ್ರದ ತತ್ವಯುಕ್ತ ಗೀತೆಗಳನ್ನು ಕೇಳಿಸುತ್ತಿರಬೇಕು. ನಾನು ಪ್ರಯೋಗ ಮಾಡಿದ್ದೇನೆ. ಒಂದು ತಿಂಗಳ ಕಾಲ ಒಂದು ಊರಿನಲ್ಲಿ ಪ್ರವಚನ ಕಾರ್ಯಕ್ರಮ ನಡೆಸುವಾಗ ಪ್ರತಿದಿನ ಕೆಲವು ನಿರ್ದಿಷ್ಟ ವಚನಗಳನ್ನು ಹೇಳುತ್ತಿದ್ದರೆ, ಕೇಳುತ್ತಿದ್ದ ಮಕ್ಕಳು ತಮಗರಿಯದಂತೆ ಮನೆಯಲ್ಲಿ ಶಾಲೆಯಲ್ಲಿ ಆಟದ ಬಯಲಲ್ಲಿ ಅದೇ ವಚನಗಳನ್ನು ಗುನುಗುತ್ತಿರುತ್ತಾರೆ. ಹೀಗೆ ವಚನಗಳನ್ನು ಭಕ್ತಿಗೀತೆಗಳನ್ನು ಹಾಡುವುದರಿಂದ ಭಕ್ತಿಯನ್ನು ಉದ್ದೀಪನಗೊಳಿಸಿಕೊಳ್ಳ ಬಹುದು. ಈಗ ಈ ಎರಡು ವಿಧಾನಗಳು ಪೂರ್ಣ ಮಲಿನವಾಗಿದೆ. ಈ ಇಂದ್ರಿಯಗಳನ್ನು ಅಂದರೆ ಶ್ರವಣೇಂದ್ರಿಯ ಮತ್ತು ಕರ್ಮೇಂದ್ರಿಯವಾದ ಬಾಯಿ. ಇವುಗಳನ್ನು ಸರಿಪಡಿಸದೇ ಜನಾಂಗದ ನೈತಿಕ ಮಟ್ಟವನ್ನು ಮೇಲೆತ್ತುವುದು ಸಾಧ್ಯವಿಲ್ಲ. ನೈತಿಕತೆ ಅಧ್ಯಾತ್ಮಿಕತೆಗಳನ್ನು ಅಳವಡಿಸಿಕೊಂಡು ಶುದ್ಧರಾಗದಿದ್ದರೆ ಪೂರ್ಣ ಆರೋಗ್ಯ ಸಾಧ್ಯವಿಲ್ಲ.

ಷಣ್ಮುಖ ಶಿವಯೋಗಿಗಳು ತಮ್ಮ ವಚನವನ್ನು ಮುಕ್ತಾಯ ಮಾಡುವುದು ಹೀಗೆ–

**ಇಂತೀ ಪ್ರಾಣಿಗಳು ಒಂದೊಂದು ವಿಷಯದಿಂದ**
**ಬಂಧನಕ್ಕೊಳಗಾದವು ಇಂತಪ್ಪ**
**ಪಂಚೇಂದ್ರಿಯ ವಿಷಯ ವ್ಯಾಪಾರದಲ್ಲಿ**
**ಲಂಪಟರಾದ ಮನುಜರು ಕೆಟ್ಟ**
**ಕೇಡನೇನೆಂಬೆನಯ್ಯಾ ಅಖಂಡೇಶ್ವರಾ**

ಅಲ್ಲಮಪ್ರಭುಗಳೂ ಹೇಳಿಲ್ಲವೇ? **'ಬಂಡಿಯ ಹೊಡೆವವರು ಐವರು ಮಾನಿಸರು ಒಬ್ಬರಿಗೊಬ್ಬರು ಸಮನಿಲ್ಲಯ್ಯಾ. ಅದರಿಚ್ಛೆಯನರಿದು ಹೊಡೆಯದಿರ್ದಡೆ ಅದರಚ್ಚು ಮುರಿಯಿತ್ತು ಗುಹೇಶ್ವರಾ'**. ಒಂದೊಂದು ಇಂದ್ರಿಯವು ತನ್ನದೇ ನಡೆಯಬೇಕೆಂದು ಮೇಲಾಟ ನಡೆಸುತ್ತದೆ. ಇಂದ್ರಿಯಗಳ ಲಂಪಟತೆಯ ಈ ಮೇಲಾಟದಲ್ಲಿ ಶರೀರವೆಂಬ ಬಂಡಿ ನುಗ್ಗು ನುರಿಯಾಗುತ್ತದೆ.

ಆದ್ದರಿಂದ ಪ್ರತಿಯೊಬ್ಬ ಆರೋಗ್ಯ ಆಕಾಂಕ್ಷಿಯು ಈ ಇಂದ್ರಿಯಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲೇ ಬೇಕು. ಇಂದ್ರಿಯಗಳ ಮೇಲೆ ನಿಯಂತ್ರಣ ಸಾಧಿಸಿದವರಿಗೂ ಅದನ್ನು ಸಾಧಿಸದೇ ಇರುವವರಿಗೂ ಏನು ವ್ಯತ್ಯಾಸ ಎಂಬುದಕ್ಕೆ ಒಂದು ಕಥೆ ಹೇಳಲೇ? ಏಕೆಂದರೆ ಇಷ್ಟು ಹೊತ್ತು ನಿಮ್ಮ ಇಂದ್ರಿಯಗಳಿಗೆ ಬಯ್ಯುತ್ತಿರುವುದನ್ನು ಕೇಳಿ ನಿಮಗೆ ನಿದ್ರೆ ಬರುತ್ತಿರಬಹುದು. ಈ ಕಥೆಯನ್ನು ಕೇಳಿ ಆಮೇಲೆ ಏನನ್ನಿಸುತ್ತದೆ ಹೇಳಿ.

**ಮುಂದುವರೆಯುವುದು........**

# ಆರೋಗ್ಯಕ್ಕಾಗಿ ಆಯುರ್ವೇದ

**ಸಂಚಿಕೆ – 1**

**ಲೈಫು ಹೀಗಿರಲಿ**

**ಪ್ರಾತರುತ್ಥಾನ (ಮುಂಜಾವಿನಲ್ಲಿ ಎದ್ದ) ನಂತರ ಏನು ಮಾಡಬೇಕು ?!**

ಶೌಚವಿಧಿ /ಮಲಮೂತ್ರ ವಿಸರ್ಜನೆ. ನಂತರದ ಸರದಿ ಶೌಚವಿಧಿಯಾಗಿರಲಿ. ಹಿಂದಿನ ದಿನದ ಮಲಮೂತ್ರಗಳನ್ನು ಎದ್ದ ನಂತರ ಮುಗಿಸಬೇಕು. ಮಲಮೂತ್ರ ವಿಸರ್ಜನೆ ಒಂದು ಅಭ್ಯಾಸದಂತೆ. ಸೋಂಬೇರಿತನವೋ, ಅಲಕ್ಷ್ಯವೋ,ಸಮಯ ಹೊಂದಿಸಿಕೊಳ್ಳುವ ವೈಫಲ್ಯವೋ, ಮಲ ವಿಸರ್ಜನೆಗೆ ಒತ್ತಡ ಬಂದಿಲ್ಲವೆಂದೋ, ಆಮೇಲೆ ಮುಗಿಸಿದರಾಯಿತು ಎನ್ನುವ ಭಾವದಿಂದಲೋ ಹೀಗೆ ಇತರೆ ನೆಪಗಳನ್ನೊಡ್ಡಿ ಮಲವಿಸರ್ಜನೆಯನ್ನು ಪ್ರತಿದಿನವೂ ನಿಗದಿತ ಸಮಯದಲ್ಲಿ ಮಾಡುವುದನ್ನು ರೂಢಿಸಿಕೊಂಡಿರುವುದಿಲ್ಲ. ಮನೆಯ ಟಾಯ್ ಲೆಟ್ ಒಂದು ಕ್ಷಣ ಕಟ್ಟಿಕೊಂಡರೇ ಅದನ್ನು ಉಪಯೋಗಿಸಲು ಆಗುವುದಿಲ್ಲ ಅಂತಹುದರಲ್ಲಿ ಶರೀರವನ್ನು ಮಲಮೂತ್ರಾದಿಗಳಿಂದ ಕಲುಷಿತಗೊಳಿಸಿದ್ದು ಅದನ್ನು ಪ್ರತಿನಿತ್ಯ ಖಾಲಿ ಮಾಡಿ ಒಡಲನ್ನು ಸ್ವಚ್ಛವಾಗಿರಿಸಿಕೊಳ್ಳಬೇಕೆಂಬ ಸಾಮಾನ್ಯ ಜ್ಞಾನ ಹೊಂದಿರಬೇಕು.

ಭಾರತೀಯ ಶೈಲಿಯ ಶೌಚಾಲಯದ ಉಪಯೋಗ ಅತ್ಯುತ್ತಮ. ಈಗಂತು ಯುರೋಪಿಯನ್ನ ಕಮೋಡ್ಗಳ ಪ್ರಯೋಗ ಹೆಚ್ಚಾಗಿದ್ದು ಆಧುನಿಕ ಜೀವನ ಶೈಲಿಯ ಪ್ರತೀಕದಂತಿದೆ ಯುರೋಪಿಯನ್ ಕಮೋಡ್ಗಳು ಇವುಗಳನ್ನು ಉಪಯೋಗಿಸುವಾಗ ಒಂದು ಪುಟ್ಟ ಸ್ಟೂಲನ್ನು ಅಥವಾ ಮಣೆಯನ್ನು ಕಮೋಡಿನ ಮುಂದೆ ಇರಿಸಿ ಅದರ ಮೇಲೆ ಕಾಲುಗಳನ್ನು ಮಡಿಚಿದ ರೀತಿಯಲ್ಲಿ ಶೌಚ ವಿಧಿ ಪೂರೈಸಬಹುದು. ನಂತರ ಮಲದ್ವಾರವನ್ನು ನೀರಿನಿಂದ ತೊಳೆದು ಸ್ವಚ್ಛವಾಗಿಡಬೇಕು. ವಿದೇಶಿಯರ ರೀತಿ ಟಿಶ್ಯೂ ಕಾಗದದಿಂದ ಒರೆಸುವುದು ಸಲ್ಲದು. ಆನಂತರ ಕೈ ಕಾಲುಗಳನ್ನು ತೊಳೆದುಕೊಳ್ಳುವ ಅಭ್ಯಾಸ ಮಾಡಿಕೊಳ್ಳಬೇಕು. ಕನಿಷ್ಠಪಕ್ಷ ಮನೆಗಳಲ್ಲಿ ಇದ್ದ ಸಮಯದಲ್ಲಾದರೂ ಇಂತಹ ವಿಧಿಗಳನ್ನು ಅನುಸರಿಸಬೇಕು.



**ಡಾ. ಶ್ರೀಪ್ರಸಾದ್ ಎಚ್.ಎಸ್.**
ಬಿಎಎಂಎಸ್ (ಆಯುರ್ವೇದ), ಬಿಎಎಂಎಸ್ (ಇಂಟಿಗ್ರೇಟೆಡ್)
ಶ್ರೀಪ್ರಸಾದ್ ಆಯುರ್ವೇದ # 9, ಮನುವನ,
ವಿಜಯನಗರ. ಬೆಂಗಳೂರು 560040
ಸ್ಥಿರ ದೂರವಾಣಿ : 080 23301090

ಭಾರತೀಯ ಶೈಲಿಯ ಶೌಚಾಲಯದ ಉಪಯೋಗ ಸೂಕ್ತವಾದುದು (ಇದು ಮಂಡಿಗೂ ಒಳ್ಳೆಯದು, ಕುಂಡಿಗೂ ಒಳ್ಳೆಯದು)

**ಎಷ್ಟು ಸಮಯ ಕೂರಬಹುದು?!**

ಹಿಂಗೋಗಿ ಹಂಗೆ ಬಂದು ಬಿಡಬೇಕು, ಮಲವಿಸರ್ಜನೆಗೆ ವೇಗ ಬಂದ ತಕ್ಷಣ ಹೋಗಿ ವಿಸರ್ಜನೆ ಮುಗಿಸಿ ಎದ್ದು ಬಿಡಬೇಕು,ಇನ್ನೂ ಸಂಪೂರ್ಣ ವಿಸರ್ಜನೆಯಾಗಿಲ್ಲ ಎಂದು ಕಾಯುತ್ತ ಕೂರಬಾರದು, ವಿಸರ್ಜನೆಗೆ ಮುಕ್ಕುವುದು, ತಿಣುಕುವುದನ್ನು ಮಾಡಬಾರದು. ಮಲ ವಿಸರ್ಜನೆಗೆ ಅನೇಕರು ಹಲವಾರು ರೀತಿಯ ಸ್ವಯಂನಿಯಮಗಳನ್ನು ಹಾಕಿಕೊಂಡು ಬಿಟ್ಟಿರುತ್ತಾರೆ.

ಉದಾಹರಣೆಗೆ ಬಿಸಿ ನೀರು, ಕಾಫಿ ಅಥವಾ ಟೀ ಕುಡಿದರೇ ಮಲ ಹೊರಬರುವುದು ಎಂಬುದಾಗಿಯೋ, ಧೂಮಪಾನ ಮಾಡಿದರೆ ಮಲವಿಸರ್ಜನೆಯಾಗುವುದೆಂದೂ ಕೆಲವರು ನಂಬಿಕೊಂಡಿರುತ್ತಾರೆ. ಹಲವಾರು ಶೌಚಾಲಯವನ್ನು ಓದುವ ಕೊಠಡಿ ಅಥವಾ ಗ್ರಂಥಾಲಯವನ್ನಾಗಿ ಮಾಡಿಕೊಂಡು ದಿನಪತ್ರಿಕೆ, ನಿಯತಕಾಲಿಕೆಗಳು, ಯಾಕೆ ಪುಸ್ತಕಗಳನ್ನೂ ಕಮೋಡಿಗೆ ಒಯ್ದು ಪಠಣವನ್ನು ಶುರು ಮಾಡಿ ತಾವು ಬಂದ ಕಾರಣವನ್ನು ಮರೆತುಬಿಡುತ್ತಾರೆ. ಇಂತಹವರಲ್ಲಿ ಮಲವಿಸರ್ಜನೆ ಏರುಪೇರು ಆಗಿ ಅದರ ಸಂಬಂಧಿತವ್ಯಾಧಿಗಳಿಗೆ ಕಾರಣವಾಗುತ್ತದೆ. ಇಂತಹ ಅಸಹಜ ಕ್ರಿಯೆಗಳಿಂದ ದೂರವಿರಬೇಕು.

ಮಲವಿಸರ್ಜನೆಗಾಗಿ ತಾವಾಗಿಯೇ ಚೂರ್ಣ, ಮಾತ್ರೆ ಇತ್ಯಾದಿಗಳನ್ನು ತೆಗೆದುಕೊಳ್ಳಬಾರದು. ವೈದ್ಯರ ಸಲಹೆ ತೆಗೆದುಕೊಳ್ಳುವುದು ಅವಶ್ಯ. ವಿಧಿ ಸೂಕ್ತ ಆಹಾರ, ವಿಹಾರಗಳು

ಮಲವಿಸರ್ಜನೆಯನ್ನು ಸರಾಗವಾಗಿಸುತ್ತವೆ. ಮಲ ವಿಸರ್ಜಿಸಿದ ನಂತರ ಮಲ ಹೇಗಿದೆ ಎಂದು ನೋಡುವುದನ್ನು ರೂಢಿಸಿಕೊಳ್ಳಬೇಕು, ಪಕ್ವ ಮಲವು ನೀರಿನಲ್ಲಿ ತೇಲುತ್ತದೆ. ಅನಿವಾರ್ಯವಾಗಿದ್ದರೆ ಸಾರ್ವಜನಿಕ ಶೌಚಾಲಯಗಳನ್ನು ಉಪಯೋಗಿಸಲು ಹಿಂಜರಿಯ ಬಾರದು. ಈಗಂತೂ ಎಲ್ಲೆಡೆ ಸ್ಯಾನಿಟೈಸರ್‌ಗಳನ್ನು ಇಟ್ಟಿರುತ್ತಾರೆ. ಟಿಶ್ಯೂ ಪೇಪರ್‌ನಲ್ಲಿ ಸ್ಯಾನಿಟೈಸರ್ ಅನ್ನು ಎದ್ದಿಕೊಂಡು ಕಮೋಡಿನ ಸೀಟಿನ ಮೇಲ್ಭಾಗವನ್ನು ಒರೆಸಿ ಶೌಚಾಲಯವನ್ನು ಉಪಯೋಗಿಸಬಹುದು. ಸಾರ್ವಜನಿಕ ಶೌಚಾಲಯಗಳು ನೈರ್ಮಲ್ಯದಿಂದಿರುವುದಿಲ್ಲ ಎಂಬ ನೆಪ ಒಡ್ಡಿ ಮಲವೇಗವನ್ನು ತಡೆಯುವುದಕ್ಕಿಂತ ಇಂತಹ ಉಪಾಯಗಳನ್ನು ಮಾಡಬಹುದು.

ಹಿಂದಿನ ದಿನ ರಾತ್ರಿ ದೇಹದಲ್ಲಿ ಸಂಗ್ರಹವಾಗಿದ್ದ ಮೊಲ ಮೂತ್ರಗಳನ್ನು ವಿಸರ್ಜನೆ ಮಾಡಿ ಶರೀರವನ್ನು ಹಗುರ ಮಾಡಿಕೊಂಡ ನಂತರ ದಂತಧಾವನ ಅಂದರೆ ಹಲ್ಲುಗಳನ್ನು ಉಜ್ಜಬೇಕು.

**ದಂತಧಾವನ/ಹಲ್ಲುಜ್ಜುವುದು**

ಹಲ್ಲುಜ್ಜುವುದರಲ್ಲಿ ಸೋಂಬೇರಿತನ ಮಾಡಬಾರದು ಪ್ರತಿನಿತ್ಯ ಎರಡು ಬಾರಿ ಖಂಡಿತವಾಗಿ ಹಲ್ಲುಜ್ಜುವುದನ್ನು ರೂಢಿಸಿಕೊಳ್ಳಬೇಕು ಒಮ್ಮೆ ಮುಂಜಾವಿನಲ್ಲಿ ಮತ್ತು ರಾತ್ರಿ ಮಲಗುವ ಮುನ್ನ ಮಿಕ್ಕಂತೆ ಆಹಾರ ಸೇವನೆಯ ನಂತರವೂ ಹಲ್ಲುಜ್ಜ ಬೇಕೆಂದು ಶಾಸ್ತ್ರ ಹೇಳುತ್ತದೆ.ಪ್ರತಿ ಆಹಾರದ ನಂತರ ಹಲ್ಲುಜ್ಜಲು ಆಗದಿದ್ದರೆ ಮೃದುವಾದ ಕಡ್ಡಿ ಅಥವಾ ಫ್ಲಾಸ್ ಗಳಿಂದ ಹಲ್ಲುಗಳ ಸಂಧಿಯನ್ನು ಶುದ್ಧಿ ಮಾಡಿ ನೀರಿನಲ್ಲಿ ಚೆನ್ನಾಗಿ ಬಾಯಿಯನ್ನು ಮುಕ್ಕಳಿಸಬೇಕು.

ಹಲ್ಲುಗಳನ್ನು ಗೆಲುವು ಯಕ್ಕ ಹೊಂಗೆ ಮತ್ತಿ ಮಾವು ಆಲ ಬೇವು ಮುಂತಾದ ಕಹಿ, ಒಗರು ಖಾರ ರುಚಿಗಳ ಮರದ ಕಡ್ಡಿಗಳ ತುದಿಯನ್ನು ಹಲ್ಲುಗಳಿಂದ ಕಚ್ಚಿ ಮೃದುವಾಗಿ ಬ್ರಷ್ಷಿನಂತೆ ಮಾಡಿಕೊಂಡು ವಸಡುಗಳಿಗೆ ಹಾನಿಯಾಗದಂತೆ ಹಲ್ಲುಗಳನ್ನು ಉಜ್ಜಬೇಕು. ಹಲ್ಲುಗಳನ್ನು ಮೇಲಿಂದ ಕೆಳಕ್ಕೆ ಉಜ್ಜ ಬೇಕೇ ವಿನಹ ಎಡದಿಂದ ಬಲಕ್ಕೆ ಗರಗಸದಂತೆ ತಿಕ್ಕಬಾರದು. ಬಹುತೇಕ ಕಡೆ ಪ್ರಕೃತಿದತ್ತ ಗಿಡ ಮರಗಳು ಕಾಣೆಯಾಗಿದ್ದು, ನಗರವಾಸಿಗಳಿಗೆ ಲಭ್ಯವಿಲ್ಲದಿದ್ದು ಅವುಗಳ ಬದಲಿಗೆ ಲಭ್ಯವಿರುವ ಆಯುರ್ವೇದದಂತ ಮಂಜನಗಳು, ಚೂರ್ಣಗಳು ಉತ್ತಮ. ಟೂತ್ ಪೇಸ್ಟ್ ಬಳಸುತ್ತಿದ್ದರೆ ಕಡಿಮೆ ರಾಸಾಯನಿಕ ಬಳಸಿದ ಪೇಸ್ಟ್ ಗಳನ್ನು ಉಪಯೋಗಿಸಬಹುದು ಮತ್ತು ಜೆಲ್ / ಪೇಸ್ಟಿನಿಂದ ಹಲ್ಲುಜ್ಜಿದ ನಂತರ ಆಯುರ್ವೇದ ಹಲ್ಲಿನ ಪುಡಿಗಳಿಂದ ಹಲ್ಲು ಮತ್ತು ವಸಡುಗಳನ್ನು ಮೃದುವಾಗಿ ಕೈ ಬೆರಳಿನಿಂದ ಮರ್ದನ ಮಾಡಬೇಕು. ಹಲ್ಲುಪುಡಿಗಳು ನುಣ್ಣಗೆ ಇದ್ದರೆ ಒಳಿತು. ಹಲ್ಲುಜ್ಜುವ ಬ್ರಷ್‌ಗಳು ಮೃದುವಾಗಿರಬೇಕು ಆಗಾಗ್ಗೆ ಅವನ್ನು ಬದಲಿಸಲೂಬೇಕು. ಪುಡಿಗಳನ್ನು ಬ್ರಷ್ ಬಳಸಿಯೂ ಹಲ್ಲುಜ್ಜಬಹುದು. ಒಟ್ಟಾರೆ ಹಲ್ಲುಜ್ಜುವುದನ್ನು ಮರೆಯಬಾರದು. ಹಲ್ಲುಜ್ಜುವುದನ್ನು ಮಕ್ಕಳಿಗೆ ಹಾಲುಹಲ್ಲು ಬಂದಾಗಲೆ ಪ್ರಾರಂಭಿಸಿದರೆ, ಬೊಚ್ಚು ಬಾಯಿ ಬೇಗ ಆಗದು.

**ಎಷ್ಟು ಹೊತ್ತು ಹಲ್ಲುಜ್ಜಬೇಕು?**

ಮನುಷ್ಯರಲ್ಲಿರುವ ಮೂವತ್ತೆರಡು ಹಲ್ಲುಗಳನ್ನು ಪರಿಗಣಿಸಿ ದಂತಧಾವನ ಮಾಡುವಾಗ ಪ್ರತಿ ಹಲ್ಲನ್ನು ಮೂವತ್ತೆರಡು ಬಾರಿ ಉಜ್ಜಬೇಕು.

**ಬರೀ ಹಲ್ಲುಜ್ಜಿದರೆ ಸಾಕೆ?**

ಜಿಹ್ವಾನಿರ್ಲೇಖನ / ನಾಲಿಗೆ ಕೆರೆಯುವುದು. ಮುಖ ನಿಮ್ಮ ಮನಸ್ಸಿನ ಕನ್ನಡಿಯಾದರೆ, ನಾಲಿಗೆ ನಿಮ್ಮ ಉದರದ ಕನ್ನಡಿ. ಹಲ್ಲುಜ್ಜಿದ ನಂತರ ನಾಲಿಗೆಯನ್ನು ಕೆರೆದು ಶುದ್ಧ ಮಾಡಬೇಕು. ಬಹಳಷ್ಟು ಜನರು ಇದನ್ನು ಕಡೆಗಾಣಿಸಿರುತ್ತಾರೆ. ಬರೀ ಬೆರಳಿನಿಂದಲೋ ಅಥವಾ ಟೂತ್ ಬ್ರಷ್ಷಿನಿಂದಲೋ ನಾಲಿಗೆ ಸ್ವಚಗೊಳಿಸಿಬಿಡುತ್ತಾರೆ ಅದು ಸಲ್ಲದು. ನಾಲಿಗೆ ಕೆರೆಯಲು ತಾಮ್ರದ/ಉಕ್ಕಿನ, ಫೈಬರಿನ 'ನಾಲಿಗೆಕೆರಕ'ಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ, ತಾಮ್ರದ ನಾಲಿಗೆ ಕೆರಕಗಳು ಉತ್ತಮವಾದುದು. ಉಳ್ಳವರು ಬೆಳ್ಳಿ /ಬಂಗಾರದ ನಾಲಿಗೆಕೆರಕಗಳನ್ನು ಮಾಡಿಸಿಕೊಂಡು ಉಪಯೋಗಿಸಿದರೆ ಅದರ ಲಾಭ ಇಮ್ಮಡಿಗೊಳ್ಳುವುದು. ನಾಲಿಗೆಯ ಮೇಲಿನ ಲೇಪನವನ್ನು ಮೃದುವಾಗಿ ಹಿಂದಿನಿಂದ ಮುಂದಕ್ಕೆ ಕೆರೆದು ಲೇಪನ ತೆಗೆಯಬೇಕು. ಇದರಿಂದ ಬಾಯಿರುಚಿ ಹೆಚ್ಚುವುದಲ್ಲದೆ ಬಾಯಿ ದುರ್ಗಂಧ ದೂರವಾಗುವುದು. ನಾಲಿಗೆ ಕೆರೆಯುವುದನ್ನು ದಿನಕ್ಕೊಮ್ಮೆ ಮುಂಜಾನೆ ದಂತಧಾವನದ ನಂತರ ಮಾಡಬೇಕು. ಪ್ರತಿ ಸಾರಿ ದಂತಧಾವನ ಮತ್ತು ಜಿಹ್ವಾನಿರ್ಲೇಖನಗಳನ್ನು ಮಾಡಿದ ನಂತರ ಟೂತ್ ಬ್ರಷ್ ಮತ್ತು ನಾಲಿಗೆ ಕೆರಕಗಳನ್ನಾಗಲಿ ಚೆನ್ನಾಗಿ ತೊಳೆದು ಒಣಗಿಸಿಡಬೇಕು. ಒಟ್ಟಾರೆ ಅವುಗಳ ಸ್ವಚ್ಛತೆಗೆ ಗಮನ ಕೊಡಬೇಕು, ಅವನ್ನು ಎಲ್ಲೆಂದರಲ್ಲಿ ಬಿಸಾಡದೆ, ನಿರ್ದಿಷ್ಟ ಸ್ಥಳದಲ್ಲಿ ಸ್ವಚ್ಛವಾಗಿಡುವ ಅಭ್ಯಾಸ ಮಾಡಿಕೊಳ್ಳಬೇಕು..

**ಮುಂದುವರಿಯುವುದು.............**

# ಕವಿ ಮಹಾಲಿಂಗ ರಂಗ

ರಂಗನಾಥನೆಂಬ ಕವಿ "ಮಹಾಲಿಂಗ ರಂಗ" ಎಂಬ ನಾಮಾಂಕಿತದಲ್ಲಿ "ಅನುಭವಾಮೃತ"ವೆಂಬ ಮಹಾಕಾವ್ಯವನ್ನು ರಚಿಸಿರುವನು. ಇವನ ಕಾಲ ಹದಿನೆಂಟನೆ ಶತಮಾನದ ಪೂರ್ವಾರ್ಧ. ಇವನು ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕು, ಉಚ್ಚಂಗಿ ಎಂಬ ಊರಿನವನು. ಇವನ ತಂದೆ ಮಹಲಿಂಗದೇವ, ಇವನ ಗುರುಗಳು ಸಹಜಾನಂದರು. ಇದೆಲ್ಲವನ್ನೂ ಕವಿ ತನ್ನ ಕಾವ್ಯದಲ್ಲಿ ಹೇಳಿಕೊಂಡಿದ್ದಾನೆ. ಇವನು ಹಾಸನ ಜಿಲ್ಲೆಯ, ಹಳೇಬೀಡು ಹತ್ತಿರವಿರುವ ಪುಷ್ಪಗಿರಿ ಮಲ್ಲಿಕಾರ್ಜುನಸ್ವಾಮಿಯ ಪರಮಭಕ್ತನಾಗಿದ್ದನು. ಇವನು ಲಿಂಗಾಯುತ ಸಂಪ್ರದಾಯದವನೆಂದು ತಿಳಿದುಬರುತ್ತದೆ. ತನ್ನ ಕಾವ್ಯದ ಮೊದಲ ಪದ್ಯದಲ್ಲಿ ಗಿರಿ ಮಲ್ಲಿಕಾರ್ಜುನಸ್ವಾಮಿಯನ್ನು ಸ್ತುತಿಸಿದ್ದಾನೆ.

**ಶ್ರೀಮದನುಪಮತೇಜನತಜನ**
**ಕಾಮಿತಾರ್ಥ ಫಲ ಪ್ರದಾಯಕ**
**ಸೋಮಶೇಖರ ಸುರಮುನೀಂದ್ರ ಜಿನತ ಪದಂಭೋಜ**
**ಸಾಮಗಾನ ಪ್ರಿಯ ಸದಾಶಿವ**
**ವಾಮಭಾಗಶ್ರಿತ ಭವಾನಿ**
**ಪ್ರೇಮ ಶ್ರೀಗಿರಿ ಮಲ್ಲಿಕಾರ್ಜುನ ಸಲಹು ಮೂಜಗವ**

**ಅನುಭವಾಮೃತವೆಂಬ ಗ್ರಂಥವ**
**ಮನವೊಲಿದು ಮಹಾಲಿಂಗ ರಂಗನು**
**ವಿನುತ ಶ್ರೀಗಿರಿ ಮಲ್ಲಿಕಾರ್ಜುನಗಳಂಕಿತ ಮಾಡಿ**
**ಘನವೆನಿಪ ವಾಕ್ಪುಷ್ಪದಿಂದ ರಚಿಸಿ**
**ಅನುಭವಿಗಳಹುದೆನಲು ಪೇಳಿ**
**ಅನುಭವಾಮೃತವಾದುದು ಕೇಳಿ**

ಎಂಬಂತೆ ಈ ಷಟ್ಪದಿ ಗ್ರಂಥವನ್ನು ತನ್ನ ಆರಾಧ್ಯ ದೈವ ಶ್ರೀಗಿರಿ ಮಲ್ಲಿಕಾರ್ಜುನನಿಗೆ ಅರ್ಪಿಸಿದ್ದಾನೆ. ಇದೊಂದು ಆಧ್ಯಾತ್ಮಿಕ ವೇದೋಪನಿಷತ್ ತತ್ವಪದಗಳನ್ನೊಳಗೊಂಡ ಸಂಪ್ರದಯಾಚರಣೆಯನ್ನು ತಿಳಿಸುವ ಗ್ರಂಥವಾಗಿದೆ. ಜೀವನ್ಮುಕ್ತಿಯ ಸಾಧನೆಯ ಹಲವು ಹಂತಗಳ ನಿರೂಪಣೆಗಳಿವೆ. ಸರಳವಾದ ದೃಷ್ಟಾಂತಗಳಿಂದ ಸುಲಭ ಶೈಲಿಯಲ್ಲಿ ರಚಿತವಾಗಿದೆ. ಈ ಗ್ರಂಥವು ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದ್ದು ಇದರಲ್ಲಿ ಹನ್ನೊಂದು ಅಧ್ಯಾಯಗಳಿವೆ. ಸೂಚನ ಪದ್ಯಗಳನ್ನು ಬಿಟ್ಟು ಒಟ್ಟು 805 ಪದ್ಯಗಳಿವೆ. ಈ ಗ್ರಂಥವು ಸಾಧಕನಿಗೆ ಇರಬೇಕಾದ ಅರಿವು ವೈರಾಗ್ಯಗಳ ನೈಜ ನಿರೂಪಣೆಯನ್ನೊಳಗೊಂಡಿದೆ. ಕನ್ನಡ ನಾಡಿನ ಸುಭಗತೆಯನ್ನು ಮತ್ತು ಕನ್ನಡ ಭಾಷೆಯ ಘನತೆಯನ್ನು ಎತ್ತಿಹಿಡಿವ ಪದ್ಯಗಳು ಇಲ್ಲಿವೆ. ಎಲ್ಲರಿಗೂ ತಿಳಿದಿರುವ ಕನ್ನಡಾಭಿಮಾನವನ್ನು ಹೇಳುವ ಪದ್ಯವೊಂದು ಈ ರೀತಿ ಇದೆ.

**ಸುಳಿದ ಬಾಳೆಯ ಹಣ್ಣಿನಂದದಿ**
**ಕಳೆದ ಸಿಗುರಿನ ಕಬ್ಬಿನಂದದಿ**
**ಲಳಿಸಿ ದುಷ್ಟದ ಹಾಲಿನಂದದಿ ಸುಲಭವಾಗಿಪನ**
**ಲಲಿತವಹ ಕನ್ನಡ ನುಡಿಯಲಿ**
**ತಿಳಿದು ತನ್ನೊಳು ತನ್ನ ಮೋಕ್ಷವ**
**ಗಳಿಸಿಕೊಂಡರೆ ಸಾಲದೆ ಸಂಸ್ಕೃತದಲ್ಲೇನಿದೆ**

ಎಂದು ಕೇಳುವ ಇಂತಹ ಪದ್ಯಗಳು ಕನ್ನಡ ನಾಡಿನ ಹಳ್ಳಿ ಹಳ್ಳಿಗಳಲ್ಲಿ ಪರಿಚಿತವಾಗಿ ಓದುಗರ ಮನ ಸೆಳೆಯುತ್ತವೆ.

ಅನುಭವಾಮೃತವು ಅನೇಕ ದಾರ್ಶನಿಕರ ಸುಮಾರ್ಗವನ್ನು ತೋರಿಸುತ್ತದೆ. ಇಹಭೋಗ ಮೂಲದಿಂದಾಗುವ ಜೀವನದಲ್ಲಿ ದ್ವೇಷ, ಅಸೂಯೆ, ಕಲಹ, ಅವಮಾನ, ಅಶಾಂತಿ, ಕ್ರೌರ್ಯ, ಸಂಘರ್ಷ ಇತ್ಯಾದಿಗಳನ್ನು ತೊಡೆದುಹಾಕಿ, ಅಮೃತ ಮೂಲವಾದ ಪ್ರೀತಿ, ಪ್ರೇಮ, ಸತ್ಯ, ಧರ್ಮ, ಅಹಿಂಸೆ, ಧಾರ್ಮಿಕತೆ, ಆತ್ಮಾನುಭಾವವನ್ನು ಭೋದಿಸುತ್ತದೆ. ಅಜ್ಞಾನವನ್ನು ಹೋಗಲಾಡಿಸಿ, ಸುಜ್ಞಾನವನ್ನು ಪಡೆಯುವುದೇಗೆಂಬುದನ್ನು ನಿರೂಪಿಸುತ್ತದೆ. ಸ್ವಾನುಭಾವದಿಂದ ಆತ್ಮಜ್ಞಾನವನ್ನು ಪಡೆಯುವ ಮಾರ್ಗವನ್ನು ಭೋದಿಸುತ್ತದೆ. ಮುಮುಕ್ಷುವು ಅನುಭಾವದಿಂದ ತನ್ನ ಸ್ವರೂಪವನ್ನು ತಿಳಿಯುವ ಪರಿಯನ್ನು ವಿವರಿಸುತ್ತದೆ. ಆತ್ಮಜ್ಞಾನವನ್ನು ಪಡೆಯಲು ಆಚಾರ ವಿಚಾರಗಳೆರಡೂ ಅಗತ್ಯವೆಂಬುದನ್ನು ಸಾದರಪಡಿಸುತ್ತದೆ. ಸಾಮರಸ್ಯವಿಲ್ಲದ ತತ್ವಗಳಿಂದ ಏನನ್ನೂ ಸಾಧಿಸಲಾಗದು ಎಂಬುದನ್ನು ತಿಳಿಸುತ್ತದೆ. ತತ್ವವಿಚಾರ, ವಿವರಣೆ ಸಮಸ್ತ ಜೀವಮಾನವ ಲೋಕದಲ್ಲಿ ನಡೆದುಬರುವ ಸೂಕ್ಷ್ಮ ತರಂಗಗಳನ್ನು ಉದಾಹರಣೆ ಮೂಲಕ ಪ್ರಸ್ತುತಪಡಿಸುತ್ತದೆ. ಇದರಲ್ಲಿ ಗ್ರಂಥಕರ್ತನ ಅಪಾರ ಅನುಭವ ಮತ್ತು ಜ್ಞಾನವೈಶಾಲ್ಯ ಕಂಡುಬರುತ್ತದೆ. ಪ್ರತಿಯೊಂದು ಪದ್ಯದಲ್ಲಿ ಚಿಂತನೆಗಳು ಮತ್ತು ಅವುಗಳ ವಿಶ್ಲೇಷಣೆ ತುಂಬ ಪರಿಣಾಮಕಾರಿಯಾಗಿ ಹೇಳಲ್ಪಟ್ಟಿವೆ. ಸಾಮಾನ್ಯರಿಂದ ಅಸಮಾನ್ಯರವರೆಗೆ ಮನಸ್ಸನ್ನು ಸೆಳೆದೊಯ್ಯುವ ಗಹನವಾದ ವಿಷಯಗಳು ಇಲ್ಲಿವೆ. ಅಮೃತ

ಮೌಲಿಕ ತತ್ವಗಳು ಮತ್ತು ಭೋದನೆ ಇದರಲ್ಲಿವೆ.ಕೆಲವು ಪದ್ಯಗಳನ್ನು ಇಲ್ಲಿ ಉದಾಹರಣೆಗಾಗಿ ನೋಡಬಹುದು. ಕನ್ನಡಾಭಿಮಾನಿಯಾದ ಕವಿ ಈ ಪದ್ಯದಲ್ಲಿ ಹೀಗೆ ಹೇಳುತ್ತಾನೆ;

**ಕನ್ನಡ ನುಡಿಯೆಂದುಪೇಕ್ಷಿಸ**
**ಲಿನ್ನು ಹಿರಿಯರಿಗಂಜಿ ನುಡಿವೆನು**
**ಕನ್ನಡಿಯೇ ದರ್ಪಣವಲ್ಲದಲ್ಲದೆ ಬೇರೇನಿಹುದು**
**ಮುನ್ನ ಉಪನಿಷದರ್ಥವನು ಸಂ**
**ಪನ್ನ ಮತಿಗಳು ಪೇಳ್ವದನುಪಮನಾ**
**ಕನ್ನಡಿಸಿದನು ಕೊರತೆಯಾದಡೆ ಮನ್ನಿಸುವುದು**

ಕವಿಯ ಕನ್ನಡಾಭಿಮಾನ ಮೋಕ್ಷ ಸಾಧನೆಗೆ ಕನ್ನಡವೇ ಶ್ರೇಷ್ಠ ಸಂಸ್ಕೃತಭ್ಯಾಸದ ಅಗತ್ಯವಿಲ್ಲ. ಆಧ್ಯಾತ್ಮನಾಸಕ್ತಿಗೆ ಗುರುಪಾದಗಳೇ ಸಾಕ್ಷಿ. ಗುರುಪದೇಶವು ಆತ್ಮಾನುಭವವನ್ನುಂಟು ಮಾಡಲು ಸಾಧನವಾಗಿದೆ. ಸ್ವಾನುಭಾವವೇ ವೇದಾಂತಕ್ಕಿಂತ ಅಧಿಕವೆನ್ನುತ್ತಾನೆ. ಅಲ್ಲದೆ ಲೋಕಜ್ಞಾನವನ್ನು ಹಲವು ಪದ್ಯಗಳಲ್ಲಿ ವಿಜೃಂಭಿಸಿದ್ದಾನೆ.

**ಎತ್ತಿಗುತ್ತಮ ಲಿಂಗಮುದ್ರೆಯ**
**ನೊತ್ತಿದರೆಯದು ಬಸವನೆಂಬರು**
**ಕತ್ತೆಯನು ಹಿಡಿತಂದು ಮುದ್ರೆಯನೊತ್ತಲಾ ಕತ್ತೆ**
**ಕತ್ತೆಯಲ್ಲದೆ ಬಸವನಪ್ಪುದೆ**
**ಸತ್ಯಸಂಧಗೆ ಯೋಗ್ಯವಲ್ಲದೆ**
**ತೊತ್ತು ಬಡಿಗಂಗೇಕೆ ತತ್ವವಿಚಾರ ಹೇಳೆಂದ**

ಎತ್ತಿಗೆ ಲಿಂಗಮುದ್ರೆಯನೊತ್ತಿದರೆ ಅದನ್ನು ಬಸವನೆಂದು ಕರದಾರು. ಕತ್ತೆಗೆ ಲಿಂಗಮುದ್ರೆಯನೊತ್ತಿದರೆ ಬಸವನೆಂದು ಹೇಳಲಾಗದು. ಅಂತೆಯೇ ಸತ್ಯವಂತರಿಗಲ್ಲದೆ ತತ್ವವಿಚಾರಗಳು ವಿಷಯಾಸಕ್ತರಿಗೆ ರುಚಿಸದು ಎಂದು ಹೇಳುತ್ತಾನೆ.

**ಪಶುಗಳಿಗೆ ಮನುಜರಿಗೆ ಭೇದವ**
**ನುಸುರಬಾರದೇಕೆನಲು ಸರಿ**
**ಹುಸಿಯ ಭೌತಿಕ ದೇಹ ನಿದ್ರಾಹಾರ ಭಯಸಂಗ**
**ವ್ಯಸನ ಮೊದಲಾದವು ಸಮಾನನ**
**ೞಸೆದು ತೋರ್ಪವು ನಿತ್ಯದೊಳುತಾ**
**ವಿಷಯ ಬುದ್ದಿಯ ನುಳಿದವನೆ ಪಶುಪತಿಯು**

ಫಲದಾಶೆಯನ್ನು ತೋರಿಸಿ ಬಿದ್ದುಹೋಗುವ ಹುಸಿಯಾದ ಈ ಭೌತಿಕ ದೇಹ ಆಹಾರ, ನಿದ್ರೆ, ಭಯ, ಮೈಥುನಗಳು ಸಮಾನವಾಗಿರುವುದರಿಂದ ಪಶುಗಳಿಗೂ ಮನುಷ್ಯರಿಗೂ ಭೇದವಿಲ್ಲ. ಯಾವನು ವಿಷಯಾಸಕ್ತಿಯನ್ನು ಬಿಟ್ಟು ಆತ್ಮರಾಮನಾಗುವನೋ ಅವನು ಪಶುಪತಿಗೆ ಸಮಾನ ಎಂದಿರುವನು. ಇದೇ ರೀತಿಯ ಅನೇಕ ಪದ್ಯಗಳಲ್ಲಿ ಸಂಸ್ಕೃತಿ ಸಂಸ್ಕಾರಗಳನ್ನು ಅಳವಡಿಸಿಕೊಳ್ಳುವ ಅಗತ್ಯವನ್ನು ಹೇಳಿರುವನು. ಆದುದರಿಂದ ಈ ಅನುಭವಾಮೃತವನ್ನು ಆಧ್ಯಾತ್ಮದಲ್ಲಿ ಆಸಕ್ತರಾಗಿರುವವರು, ಸಜ್ಜನರು ಓದಲೇಬೇಕಾದಂತ ಗ್ರಂಥವಾಗಿರುವುದು.

ಹೀಗೆ ನಮ್ಮ ಸುತ್ತಿನ ಕನ್ನಡದ ಮೇರು ಕವಿಯೊಬ್ಬನ ಕನ್ನಡಾಭಿಮಾನ ಹಾಗೂ ಲೌಕಿ, ಪಾರಮಾರ್ಥಿಕ ವಿಷಯಗಳನ್ನು ಸರ್ವಜನರು, ಅದೂ ಕನ್ನಡಿಗರು ಪರಾಂಭರಿಸುವ ಅಗತ್ಯವಿದೆ. ಇತ್ತೀಚಿನ ನವನೂತನ ಕಾವ್ಯಮಾರ್ಗವನ್ನು ಅನುಸರಿಸುತ್ತಿರುವ ಕಾವ್ಯಾಭಿಮಾನಿಗಳು ಇದನ್ನು ಅಭ್ಯಾಸ ಮಾಡುವುದು ಉಚಿತವಾಗಿದೆ.

**ಕೆ.ಎಂ.ರೇವಣ್ಣ**
ಬೆಂಗಳೂರು.
ಮೊ : 8884756079

**20ನೇ ಪುಟದಿಂದ ಮುಂದುವರೆದಿದೆ.......**
ಬೇಲಿ ಎಂಬುದಿಲ್ಲ. ಏಕೆಂದರೆ ಸಾಹಿತ್ಯ ಎಂದರೆ ಬದುಕು. ಬದುಕೆಂದರೆ ಸಾಹಿತ್ಯ. ಸಂಕಿರಣ ಬದುಕಿನ್ನ ಎಲ್ಲ ಪದರಗಳನ್ನು ವರ್ಣಿಸುವ ಸಮರ್ಥ ಮಾಧ್ಯಮವಾಗಿದೆ. ಆಧುನಿಕ ವಚನಗಳಲ್ಲಿ ಪ್ರಾಚೀನ ಸಂಪ್ರದಾಯವಿದೆ, ಆಧುನಿಕ ವಿಚಾರಧಾರೆ ಇದೆ, ಭಕ್ತಿ ಭಾವುಕತೆಯಿದೆ. ರಾಜಕಾರಣವಿದೆ ವೈಚಾರಿಕತೆ ಇದೆ ಆದರ್ಶವಿದೆ. ವಾಸ್ತವಿಕತೆ ಇದೆ.

ಜನರಲ್ಲಿ ಆತ್ಮವಿಶ್ವಾಸ ಧೈರ್ಯ ಸಾಹಸಗಳನ್ನು ಪ್ರತಿಭಟನಾ ಶಕ್ತಿಯನ್ನು ಶ್ರಮ ಗೌರವ ಬುದ್ಧಿಯನ್ನು, ಶ್ರದ್ಧೆಯನ್ನು ಸ್ವತಂತ್ರ ಮನೋಧರ್ಮವನ್ನು, ಸ್ವಾಭಿಮಾನವನ್ನು ಹಾಗೂ ವಿವೇಚನಾ ಶಕ್ತಿಯನ್ನು ಇಂದಿನ ವಚನಗಳು ಸಮಾಜಕ್ಕೆ ನೀಡಬೇಕು. ಪುರೋಹಿತ ಅಧಿಕಾರ ಶಾಹಿ, ಬಂಡವಾಳಶಾಹಿಗಳ ಕರಿನೆರಳಲ್ಲಿ ಬಳಲುತ್ತಿರುವ ಶ್ರೀಸಾಮಾನ್ಯರು ಹೋರಾಟ ನಡೆಸುವಂತೆ ಆಧುನಿಕ ವಚನಗಳು ಪ್ರೇರೇಪಣೆ ನೀಡುವಂತಿರಬೇಕು. ಇಂದಿನ ವಚನಕಾರರು ಜಾತಿ ಭಾಷೆ ಪ್ರಾಂತ್ಯ ನಾಡು ಪ್ರದೇಶಗಳ ಭೇದ ಮರೆತು ಸಕ್ರಿಯವಾಗಿ ಸಾಮಾಜಿಕ ನಿಲುವುಗಳನ್ನು ವ್ಯಕ್ತಪಡಿಸುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು.

# ಪುಣ್ಯಭೂಮಿ ನಮ್ಮ ಭಾರತ

ಸೂರ್ಯ ಮುಳುಗದ ಬಲಿಷ್ಠ ಸಾಮ್ರಾಜ್ಯವನ್ನು ಸ್ಥಾಪಿಸಿದ್ದ ಬ್ರಿಟೀಷರನ್ನು ಶಾಂತಿ, ಅಹಿಂಸೆ, ಅಸಹಕಾರ ಆಂದೋಲನ, ಸತ್ಯಾಗ್ರಹ ಮತ್ತು ಉಪವಾಸಗಳಂತಹ ಆಯುಧಗಳಿಂದ ಮಣಿಸಿ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ ಯಶಸ್ಸು ಮಹಾತ್ಮಗಾಧೀಜಿಯವರಿಗೆ ಸಲ್ಲುತ್ತದೆ. ಪಿತಾಮಹನೆನಿಸಿದ ಇಂತಹ ವ್ಯಕ್ತಿ ಹುಟ್ಟಿದ ಪಾವನ ಭೂಮಿ ಪುಣ್ಯಭೂಮಿ ನಮ್ಮ ಭಾರತ. ಈ ಪುಣ್ಯ ಭೂಮಿಯಲ್ಲಿ ಇನ್ನೂ ಅನೇಕ ಮಹಾಪುರುಷರುಗಳು ಹುಟ್ಟಿ ಸಾಧನೆಗೈದು ಮರೆಯಾಗಿ ಹೋಗಿದ್ದಾರೆ. ನಾವು ಹೆಮ್ಮೆಪಡಬೇಕಾದ ವಿಚಾರವೆಂದರೆ ನಮ್ಮ ಭಾರತ ತ್ಯಾಗ ಭೂಮಿ, ಕರ್ಮಭೂಮಿ ಇಲ್ಲಿ ನಾವೆಲ್ಲ ಜನಿಸಿರುವುದು ನಮ್ಮ ಪುಣ್ಯ. ಯಾರು ಸತ್ಯದ ಹಾದಿಯಲ್ಲಿ ನಡೆಯುತ್ತಾರೊ ಅವರ ಹೆಜ್ಜೆ ಗುರುತುಗಳು ಯಾವಾಗಲೂ ದೃಢವಾಗಿರುತ್ತವೆ.

ನಮ್ಮ ರಾಷ್ಟ್ರದ ಮಣ್ಣಿನಲ್ಲಿ ಪ್ರತಿಯೊಂದು ರೋಗವನ್ನು ಗುಣಪಡಿಸುವಂತಹ ಸಾಮರ್ಥ್ಯಹೊಂದಿದೆ ಎಂದು ಗಾಂಧೀಜಿಯವರು ನಂಬಿದ್ದರು. ಹಾಗಾಗಿ ನಾವು ಭಾರತದಲ್ಲಿ ಜನಿಸಿದ್ದಕ್ಕೆ ಮತ್ತು ಭಾರತೀಯರಾಗಿರುವುದಕ್ಕೆ ಹೆಮ್ಮೆ ಪಡಬೇಕು. ಇಂತಹ ಪುಣ್ಯಭೂಮಿ ಎನಿಸಿದ ಭಾರತವನ್ನು ನಮ್ಮ ಸೈನಿಕರುಗಳು ಭಾರತದ ಗಡಿಯಲ್ಲಿ ಹಗಲೂ ರಾತ್ರಿ ಜಾಗೃತರಾಗಿ ತಮ್ಮ ಪ್ರಾಣಗಳನ್ನೇ ಪಣಕ್ಕಿಟ್ಟು ಭಾರತಾಂಬೆಯ ರಕ್ಷಣೆ ಮಾಡುತ್ತಿದ್ದಾರೆ.

ಇಂತಹ ಪುಣ್ಯಭೂಮಿ ಭಾರತದಲ್ಲಿ ಅಧಿಕಾರದ ದಾಹ, ಹಣದ ವ್ಯಾಮೋಹ, ಸ್ವಾರ್ಥ, ಹಿಂಸಾಚಾರಗಳು ಜಾತಿವೈಷಮ್ಯಗಳು ದಿನನಿತ್ಯ ನಡೆಯುತ್ತಲೇ ಇವೆ. ಅತಿಯಾಸೆ, ಹುಚ್ಚು ಅಭಿಮಾನ, ಅತಿಯಾದ ವ್ಯಾಮೋಹ ಎಂತಹ ದುರಂತಕ್ಕೆ ಕೊಂಡೊಯ್ಯುತ್ತವೆ ಇದರಿಂದ ಅಮಾಯಕರು ತಮ್ಮ ಪ್ರಾಣಗಳನ್ನೇ ಕಳೆದುಕೊಳ್ಳುತ್ತಿರುವ ದೃಶ್ಯಗಳನ್ನು ನಾವು ಕಾಣುತ್ತಿದ್ದೇವೆ.



**ಆರ್. ರಂಗನಾಥ್**
ಬೆಂಗಳೂರು.
ಮೊ : 7829999060

ನಾನು ಪ್ರೈಮರಿ ಶಾಲೆಯಿಂದ ಹೈಸ್ಕೂಲ್ವರೆಗೆ ನನ್ನ ಹಳ್ಳಿಯಲ್ಲಿ ಓದುತ್ತಿದ್ದಾಗ ಶಾಲೆಗೆ ಹೋಗುವ ಮುಂಚೆ ಶಾಲೆಯಿಂದ ಬಂದ ನಂತರ ಹಾಗೂ ರಜಾದಿನಗಳಲ್ಲಿ ದನ–ಕರುಗಳನ್ನು ಮೇಯಿಸುವುದು, ಹೊಲ ಊಳುವುದು ಮುಂತಾದ ಕೆಲಸಗಳಲ್ಲಿ ತೊಡಗಿರುತ್ತಿದ್ದೆವು. ನಮ್ಮ ತಂದೆ–ತಾಯಿಗಳೂ ಸಹ ಶ್ರಮಪಟ್ಟು ದುಡಿಯುತ್ತಿದ್ದರು. ನಮ್ಮ ಊರಿಗೆ ಆಗಿನ್ನು ಕರೆಂಟು ಬಂದಿರಲಿಲ್ಲ ಜಮೀನುಗಳಿಗೆ ಕಪಿಲೆ ಒಡೆದು ನೀರು ಹರಿಸಬೇಕಾಗಿತ್ತು. ನಮ್ಮ ತಂದೆ ನಮ್ಮ ಚಿಕ್ಕಪ್ಪ ಮತ್ತು ಅಕ್ಕ ಪಕ್ಕದ ಹಿರಿಯರು ಸೇರಿಕೊಂಡು ಕಪಿಲೆಯಿಂದ ನೀರು ಹರಿಸಿ ಬೆಳೆ ಬೆಳೆಯುತ್ತಿದ್ದರು. ಕಪಿಲೆ ಹಗ್ಗದ ಮೇಲೆ ಕೂತು ಅವರುಗಳ ಪಿರ್ರೆಗಳು ದದ್ದು ಕಟ್ಟಿಹೋಗಿದ್ದವು. ಹೀಗೆ ಬೆಳಗ್ಗೆಯಿಂದ ಸಂಜೆಯತನಕ ಶ್ರಮಪಟ್ಟು ಕೆಲಸ ಮಾಡಿ, ಬೆಳೆ ಬೆಳೆದು ಸಂತೋಷದಿಂದ ಇರುತ್ತಿದ್ದರು. ಉಳ್ಳವರು ಇಲ್ಲದವರಿಗೆ ಕೊಟ್ಟು ಸಹಕರಿಸುತ್ತಿದ್ದರು. ಆಗ ಹಳ್ಳಿಗಳಲ್ಲಿದ್ದ ಸಂತೋಷ, ನೆಮ್ಮದಿ, ಸಹಕಾರ, ಅನ್ಯೋನ್ಯತೆಗಳು ಕ್ರಮೇಣ ಮರೆಯಾಗಿ ಈಗ ಹಳ್ಳಿಗಳಲ್ಲಿ ಜಾತಿ ಸಂಘರ್ಷಗಳು ರಾಜಕೀಯ ಸಂಘರ್ಷಗಳು ಹೆಚ್ಚಾಗಿವೆ. ಶಿಕ್ಷಣ ಕಲಿತ ಯುವಕರೆಲ್ಲ ಹಳ್ಳಿತೊರೆದು ನಗರಗಳ ಕಡೆ ವಲಸೆಬರುತ್ತಿದ್ದಾರೆ. ಮೈಯಲ್ಲಿ ಬೆವರು ಇಳಿಸಿ ದುಡಿಯುವಂತವರು ಕಡಿಮೆಯಾಗಿದ್ದಾರೆ. ವಯಸ್ಸಾದ ಮುದುಕರೂ ಕೂಡ ಸುಮ್ಮನೆ ಕೂರುತ್ತಿರಲಿಲ್ಲ ಮಕ್ಕಳನ್ನು ಆಡಿಸುವುದು ಮನೆ ಮುಂದೆ ಒಣಗಿ ಹಾಕಿದ ದವಸ ಧಾನ್ಯಗಳನ್ನು ಕಾಯುವುದು, ರಾಗಿ ಬೀಸುವುದು ಮುಂತಾದ ಕೆಲಸಗಳಲ್ಲಿ ತೊಡಗಿರುತ್ತಿದ್ದರು. ಬೇಸಾಯ ಮಾಡುವ ಜನ ಕಡಿಮೆಯಾದ ಮೇಲೆ ಮುದುಕರುಗಳಿಗೆ ಕೆಲಸ ಇಲ್ಲದಂತಾಯಿತು ನೆಮ್ಮದಿಯಾಗಿ ಬೆಳೆ ಬೆಳೆದು ಕಣ್ಣಿಗೆ ಹಸಿರಿನ ಸಂತೋಷವನ್ನು ನೀಡುತ್ತಿದ್ದ ಎಷ್ಟೋ ಭೂಮಿಗಳು ಬರಡು ಭೂಮಿಗಳಾಗಿ ಮುಳ್ಳು ಗಿಡಗಳು ಬೆಳೆದು ನಿಂತಿವೆ. ಯಾರು ಪ್ರತಿದಿನ ತಮ್ಮ ಮೈಯಲ್ಲಿ ಬೆವರು ಸುರಿಸಿ ದುಡಿಯುತ್ತಿದ್ದರೊ ಅಂತಹವರು ಯಾವುದೇ ರೋಗ ರುಜಿನೆಗಳಿಲ್ಲದೆ ಆರೋಗ್ಯವಾಗಿ ಹೆಚ್ಚು ಕಾಲ ಬದುಕುತ್ತಿದ್ದರು. ಈಗಲೂ ಬದುಕುತ್ತಿದ್ದಾರೆ.

ಈಗ ಯಾರು ಬಿಸಿಲಿನಲ್ಲಿ ಕೆಲಸ ಮಾಡಲು ಮನಸು ಮಾಡುವುದಿಲ್ಲ, ಸುಲಭ ಮಾರ್ಗದಲ್ಲಿ ಹಣ ಸಂಪಾದನೆ ಮಾಡುವ ಮಾರ್ಗಗಳನ್ನು ಹುಡುಕುವ ಜನರೇ ಹೆಚ್ಚಾಗಿದ್ದಾರೆ. ಆಗ ಪ್ರತಿಯೊಂದು ಮನೆಯಲ್ಲೂ ಹೊಲ ಊಳುವ ನೇಗಿಲುಗಳು ಇರುತ್ತಿದ್ದವು. ಈಗ ಅವುಗಳ

ಸಂಖ್ಯೆ ತುಂಬಾ ಕಡಿಮೆಯಾಗಿದೆ. ಶ್ರಮಕ್ಕೆ ಬೆನ್ನು ತೋರಿಸಿ ಹಳ್ಳಿಯ ಜನ ಕೂಡ ಸಣ್ಣಪುಟ್ಟ ಕೆಲಸಗಳನ್ನು ಹುಡುಕಿಕೊಂಡು ಪಟ್ಟಣ ಮತ್ತು ನಗರಗಳ ಕಡೆ ವಲಸೆ ಬಂದು ಗಾರ್ಮೆಂಟ್ಸ್ ಮತ್ತು ಫ್ಯಾಕ್ಟರಿಗಳಲ್ಲಿ ದುಡಿಯುತ್ತಿದ್ದಾರೆ. ಅಕ್ಕ ಪಕ್ಕದ ಹಳ್ಳಿಗಳಿಂದ ಅಕ್ಕ ಪಕ್ಕದ ರಾಜ್ಯಗಳಿಂದ ಕೆಲಸ ಹುಡುಕಿಕೊಂಡು ಬರುವ ಜನ ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ಜನಸಂಖ್ಯೆಯ ಒತ್ತಡ, ವಾಹನಗಳ ಸಂಖ್ಯೆ ಹೆಚ್ಚಾಗಿ ಉತ್ತಮ ಗಾಳಿ ಇಲ್ಲದಂತಾಗಿ ಒತ್ತಡದ ಬದುಕಿನಲ್ಲಿ ಜನ ವಾಸಿಸುತ್ತಿದ್ದಾರೆ. ಭಾರತದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳು ಅಸ್ಥಿರ ಸ್ಥಿತಿಯನ್ನು ತಲುಪುವುದಕ್ಕೆ ದಿಕ್ಕು ದೆಸೆಯಿಲ್ಲದೆ ಹದಗೆಡುವುದಕ್ಕೆ ಒಂದು ಸರಳವಾದ ಮುಖ್ಯ ಕಾರಣವಿದೆ. ಆ ಕಾರಣ ಯಾವುದೆಂದರೆ ಗಾಂಧಿಯನ್ನು ಮತ್ತು ಗಾಂಧಿಯವರ ಆದರ್ಶಗಳನ್ನು ಮರೆತಿರುವುದು. ಗಾಂಧಿಯ ಬಗ್ಗೆ ಈ ದೇಶದ ಯಾರೇ ಆಗಲಿ ಋಣಾತ್ಮಕವಾಗಿ ಮಾತನಾಡಿದರೆ ಅದು ಅವರ ಮೂರ್ಖತನವೆಂದು ಸಾರಾ ಸಗಟಾಗಿ ನಿರ್ಧಾರಕ್ಕೆ ಬರಬಹುದಾಗಿದೆ. ಏಕೆಂದರೆ ಜಗತ್ತು ಕಂಡ ಅತ್ಯಂತ ಶ್ರೇಷ್ಠ ಸಮಾಜ ಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ ಮತ್ತು ತತ್ವಜ್ಞಾನಿ ಆಗಿದ್ದರು ಗಾಂಧಿ. ಮಾನವೀಯತೆಗಿಂತ ಮಿಗಿಲಾದ ದೇವರಿಲ್ಲ, ಧರ್ಮವಿಲ್ಲ ಮತ್ತು ಕಾನೂನಿಲ್ಲ. ಸಮೃದ್ಧ ಸಂಭ್ರಮಗಳಿಂದ ತುಂಬಿ ತುಳುಕುತ್ತಿದ್ದ ಭಾರತದ ಹಳ್ಳಿಗಾಡಿನ ಬದುಕು ಬರಡಾಗಿದೆ. ಗಾಂಧಿಯ ಸೂತ್ರಗಳಾದ ಶ್ರಮ, ಶ್ರದ್ಧೆ, ಸಹಕಾರ, ಸ್ವಾಭಿಮಾನಗಳು ಕಡಿಮೆಯಾಗಿವೆ. ಅನೇಕ ಸಾಮಾಜಿಕ ಸಮಸ್ಯೆಗಳಿಂದ ಗ್ರಾಮ ಭಾರತವಿಂದು ತತ್ತರಿಸುತ್ತಿದೆ. ಶ್ರಮ ಪಡದ ಯಾವುದೇ ವ್ಯಕ್ತಿ, ಕುಟುಂಬ, ಸಮಾಜ, ದೇಶ ಖಂಡಿತವಾಗಿಯೂ ಮುಂದುವರಿದು ಸಂಭ್ರಮದಿಂದಿರಲು ಸಾಧ್ಯವೇ ಇಲ್ಲ ಎಂಬುದು ನನ್ನ ಅಭಿಪ್ರಾಯ.

ಭಾರತದ ಅಭಿವೃದ್ಧಿಯಲ್ಲಿ ಬೆವರನ್ನು ಕಂಡಾಗ ಮಾತ್ರ ಅದು ಸದೃಢವಾಗಿರುತ್ತದೆ ಆದ್ದರಿಂದ ಭಾರತ ಸಂತೋಷದಿಂದ ಉಸಿರಾಡಬೇಕಾದರೆ ಗಾಂಧಿಯ ಸೂತ್ರಗಳಾದ ಶ್ರಮ, ಶ್ರದ್ಧೆ, ಸಹಕಾರ ನಮ್ಮ ಉಸಿರಾಗಬೇಕು.

# ಜೀವ ಮತ್ತು ಜೀವನ

**ಸೂರ್ಯನ ಉದಯ ತಾವರೆಗೆ ಜೀವಾಳ**
**ಚಂದ್ರಮನುದಯ ನೆಯ್ದಿಲೆಗೆ ಜೀವಾಳ**
**ಕೂಪರ ತಾವಿನಲ್ಲಿ ಕೂಟ ಜೀವಾಳವಯ್ಯ**
**ಒಲಿದ ತಾವಿನಲ್ಲಿ ನೋಟ ಜೀವಾಳವಯ್ಯ**
**ಕೂಡಲ ಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವಯ್ಯ**
**– ಬಸವಣ್ಣ**

ಒಂದರ ಜೀವ ಮತ್ತು ಜೀವನ ಮತ್ತೊಂದರಲ್ಲಿ ಇರುತ್ತದೆ. ಅವು ಎರಡೂ ಒಂದಾಗುವುದರಲ್ಲಿ ಸುಖವಿದೆ, ಆನಂದವಿದೆ, ತುಂಡಾಗುವುದರಲ್ಲಿ ದುಃಖವಿದೆ, ವ್ಯಸನವಿದೆ ಅದುವೇ ಕೂಡಿ ಬಾಳಿದರೆ ಸ್ವರ್ಗ ಸುಖ, ಜಗಳವಾಡಿ ಬೇಸರ ಮಾಡಿಕೊಂಡು ಹೊಡೆದಾಡಿಕೊಂಡು ಸತ್ತರೆ ದುಃಖ, ನರಕ. ಇದುವೇ **"ಜೀವ ಜೀವನ ಸೂತ್ರ"** ಅಣ್ಣ ಬಸವಣ್ಣನವರಿಗೆ ಕೂಡಲಸಂಗನ ಶರಣರ ಆಗಮನವೇ ಜೀವಾಳ ಬಸವಣ್ಣನವರು ಶರಣರ ಸಂಗದಲ್ಲಿ ಕೂಡಲ ಸಂಗನನ್ನು ಕಂಡು ಪರಮಾನಂದವನ್ನು ಅನುಭವಿಸುತ್ತಾರೆ. ಶರಣರಿಂದ, ಶರಣರಿಗಾಗಿ, ಶರಣರಿಗೋಸ್ಕರ ಬದುಕಿ ವಿಶ್ವಗುರುವಾದ ಶಿವಶರಣ ಜಗಜ್ಯೋತಿ ಬಸವಣ್ಣ ಕಮಲದ ಹೂವಿನ ಜೀವಾಳ ಸೂರ್ಯೋದಯ, ಕಮಲದ ಹೂವು ಸೂರ್ಯನ ಕಿರಣಗಳ ಸ್ಪರ್ಶಕ್ಕೆ ಅರಳಿ ನಳನಳಿಸಿ ಪರಮಾನಂದವನ್ನು ಅನುಭವಿಸುತ್ತದೆ. ನೈದಿಲೆಯ ಜೀವಳ ಚಂದ್ರೋದಯ, ಚಂದ್ರನ ಬೆಳದಿಂಗಳ ಸ್ಪರ್ಶಕ್ಕೆ ನೈದಿಲೆ ಅರಳಿ ನವಜೀವ ಪಡೆಯುತ್ತದೆ. ನಲ್ಲರ ಜಾಗದಲ್ಲಿ ಕೂಟವೇ ಜೀವಾಳ, ಒಲವಿನ ಜಾಗದಲ್ಲಿ ನೋಟವೇ ಜೀವಾಳ. ಇದುವೇ ಜೀವ–ಜೀವನ.

**ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ**
**ಅಂಭುಜಕೆ ಬಾನುವಿನ ಉದಯದ ಚಿಂತೆ**
**ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ**
**ಎನಗೆ ನಮ್ಮ ಶರಣರ ನೆನೆವುದೆ ಚಿಂತೆ**



**ಆರ್. ರಾಜಯ್ಯ**
ನಿವೃತ್ತ ಶಿಕ್ಷಕರು, ವ್ಯವಸ್ಥಾಪಕರು,
ನೊಳಂಬ ಲಿಂಗಾಯತ ಸಂಘ,
ಬಸವೇಶ್ವರನಗರ, ಬೆಂಗಳೂರು.

# ಲಿಂಗಾಯತ ಧರ್ಮ ಯಾವ ಸಿದ್ಧಾಂತಕ್ಕೆ ಒಳಪಟ್ಟಿದೆ ?

ಲಿಂಗಾಯತ ಧರ್ಮವು ಹನ್ನೆರಡನೆಯ ಶತಮಾನದ ಅನ್ವೇಷಿತ ಸಹಜದತ್ತವಾದ ಧರ್ಮ. ಜಿಡ್ಡುಗಟ್ಟಿ ಸಾಯಬಹುದಾದ ಭಾರತೀಯ ಸನಾತನ ವ್ಯವಸ್ಥೆಗೆ ಪರ್ಯಾಯವಾಗಿ ನೂತನ ವೈಜ್ಞಾನಿಕ ವೈಚಾರಿಕ ಧರ್ಮವೊಂದು ಹುಟ್ಟಿಕೊಂಡಿತು. ವಚನಗಳೆಂಬ ಸಂಘರ್ಷ ದೇಸಿ ಸಾಹಿತ್ಯದೊಂದಿಗೆ ಬಂಡಾಯ ಆಂದೋಲನವನ್ನು ಹುಟ್ಟು ಹಾಕಿದ ಶರಣರು ವರ್ಗರಹಿತ ವರ್ಣರಹಿತ ಲಿಂಗಭೇದರಹಿತ ಆಶ್ರಮರಹಿತ ಸಾಂಸ್ಥಿಕರಣವಲ್ಲದ ಜಗತ್ತಿನ ಮುಕ್ತವಾದ ಮಾನವ ಮತ್ತು ಸಕಲ ಜೀವಾತ್ಮರ ಲೇಸನ್ನೇ ಬಯಸುವ ಧರ್ಮವು ಲಿಂಗಾಯತ ಧರ್ಮವು. ಅದ್ವೈತ ವಿಶಿಷ್ಟಾದ್ವೈತ ದ್ವೈತ ಶಿವಾದ್ವೈತ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ ಶಿವಾದ್ವೈತ ಹೀಗೆ ಶೈವ ವೈಷ್ಣವ ಮಧ್ವ ಪರಂಪರೆಗೆ ಒಳಪಟ್ಟ ಭಾರತೀಯ ಧಾರ್ಮಿಕ ಸಂಸ್ಕೃತಿಯಲ್ಲಿ ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮವು ಯಾವ ಸಿದ್ಧಾಂತಕ್ಕೆ ಒಳಪಟ್ಟಿದೆ ಎಂದು ಗಮನ ಹರಿಸುವುದು ಸೂಕ್ತ ಹಾಗು ಬಹುಮುಖ್ಯ ಸಂಗತಿಯಾಗಿದೆ.

ಅದ್ವೈತ ಸಿದ್ಧಾಂತವು ಎಂಟನೆಯ ಶತಮಾನದಲ್ಲಿ ಆರಂಭಗೊಂಡಿತು. ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿ ಹೇಳಿದ ಆಚಾರ್ಯತ್ರಯರಲ್ಲಿ ಶಂಕರಾಚಾರ್ಯರು ಮೊದಲಿಗರು (ಆದಿಶಂಕರರು). ಅವರು ಕೇರಳದ ಒಂದು ಹಳ್ಳಿಯಲ್ಲಿ 788ರಲ್ಲಿ ಜನಿಸಿ ಕೇವಲ 32 ವರ್ಷಗಳ ಕಾಲ ಜೀವಿಸಿದ್ದರು. ಶಂಕರಾಚಾರ್ಯರು, ಈ ಅಲ್ಪಾವಧಿಯಲ್ಲಿಯೇ ದೇಶದ ಮೂಲೆ ಮೂಲೆ ಗಳಿಗೆ ಸಂಚರಿಸಿ ಗೀತಾಚಾರ್ಯ ಶ್ರೀಕೃಷ್ಣನ ಸಿದ್ಧಾಂತ ವಾದ 'ಅದ್ವೈತ' ತತ್ವವನ್ನು ಪ್ರತಿಪಾದಿಸುತ್ತ ಜಗತ್ತಿಗೆ ಸಾರಿ, ಹಲವಾರು ಮತಗಳಿಂದ ದಾಳಿಗೊಳಗಾಗುತ್ತಿದ್ದ ಸನಾತನ ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿದರು. ಶೈವ, ವೈಷ್ಣವ, ಶಾಕ್ತ, ಗಾಣಪತ್ಯ, ಸೌರ ಹಾಗೂ ಸ್ಕಂದ ಮತಗಳನ್ನು ಒಗ್ಗೂಡಿಸಿ, ಷಣ್ಮತ ಪ್ರತಿಷ್ಠಾಪಕರಾದರು. ಆದಿಶಂಕರರು ಭಗವದ್–ಗೀತೆ, ಉಪನಿಷತ್ ಹಾಗು ಬ್ರಹ್ಮ ಸೂತ್ರಗಳಿಗೆ ಭಾಷ್ಯ ಬರೆದ ಮೊದಲ ಆಚಾರ್ಯರಾದರು.

ಶ್ರೀ ರಾಮಾನುಜರು ಸಂತರು, ವಿದ್ವಾಂಸರು ಹಾಗೂ ದಾರ್ಶನಿಕರು ಮತ್ತು ಶ್ರೀ ವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಪಾದಕರು ಆಗಿದ್ದರು. ರಾಮಾನುಜ ಅಥವಾ ರಾಮಾನುಜಾಚಾರ್ಯ (ಜೀವಾವಧಿ: 1017–1137 ಮಧ್ಯೆ) ವೇದಾಂತದ ಪ್ರಸಿದ್ಧ ಸಿದ್ಧಾಂತಗಳಲ್ಲೊಂದಾದ ವಿಶಿಷ್ಟಾದ್ವೈತದ ಪ್ರತಿಪಾದಕರಲ್ಲಿ ಪ್ರಮುಖರು. ಇವರು ತಮಿಳುನಾಡಿನ ಪೆರಂಬದೂರಿನಲ್ಲಿ ಸುಮಾರು 1017ರಲ್ಲಿ ಹುಟ್ಟಿದರು. ರಾಮಾನುಜ ಅವರ ಗುರುಗಳು ಯಾದವ ಪ್ರಕಾಶ. ಇವರು ಬಹುದೊಡ್ಡ ವಿದ್ವಾಂಸರು. ಇವರು ಪ್ರಾಚೀನ ಅದ್ವೈತ ವೇದಾಂತ ಸನ್ಯಾಸ ಸಂಪ್ರದಾಯದ ಭಾಗವಾಗಿದ್ದರು. ಶ್ರೀ ವೈಷ್ಣವ ಸಂಪ್ರದಾಯದ ಪ್ರಕಾರ ರಾಮಾನುಜನು ತನ್ನ ಗುರುಗಳ ವಿರುದ್ಧ ನಿಂತು ಅವನು ಪರಿಪೂರ್ಣ ಅದ್ವೈತ ವೇದಾಂತವನ್ನು ಪಾಲಿಸಿದ ಎಂದು ಹೇಳಲಾಗಿದೆ. ರಾಮಾನುಜರವರು ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು ಇವರ ತಂದೆ ಅಸುರಿ ಕೇಶವ ಸೊಮಯಾಜಿ ದೀಕ್ಷಿತರು. ತಾಯಿಯ ಹೆಸರು ಕಾಂತಿಮ.

ಶ್ರೀ ಮಧ್ವಾಚಾರ್ಯರು ಉಡುಪಿಯ ಹತ್ತಿರದಲ್ಲಿರುವ ಪಾಜಕ ಗ್ರಾಮದಲ್ಲಿ ತಂದೆ ಮಧ್ಯಗೇಹ ಭಟ್ಟ ಮತ್ತು ತಾಯಿ ವೇದವತಿಗೆ ಜನಿಸಿದರು. ತಂದೆ ತಾಯಿ ವಾಸುದೇವನೆಂದು ಹೆಸರಿಟ್ಟಿದ್ದರು. ಬಾಲ್ಯದಲ್ಲೆ ಅಸಾಧಾರಣ ಪ್ರತಿಭೆ ತೋರಿದ ವಾಸುದೇವ, ತನ್ನ ಹನ್ನೆರಡೆನೆಯ ವಯಸ್ಸಿನಲ್ಲಿ ವಿಧ್ಯಾಭ್ಯಾಸ ಮತ್ತು ವೇದಾಭ್ಯಾಸಗಳೆರಡನ್ನು ಮುಗಿಸಿ ಗುರು ಅಚ್ಯುತಪ್ರಜ್ಞ ಸನ್ಯಾಸವನ್ನು ಪಡೆದು ಪೂರ್ಣಪ್ರಜ್ಞರೆಂಬ ಹೆಸರು ಪಡೆದರು. ಶ್ರೀಮದ್ವಾಚಾರ್ಯರಿಗೆ ಗುರುಗಳು ವೈದಿಕ ಸಾಮ್ರಾಜ್ಯದಲ್ಲಿ ಪಟ್ಟಾಭಿಶೇಕ ನೆರವೇರಿಸಿ ಇಟ್ಟ ನಾಮ ಆನಂದತೀರ್ಥ. ವೇದಾಂತ ದರ್ಶನದಲ್ಲಿ, ಮದ್ವಚಾರ್ಯರು ದ್ವೈತ ಸಿದ್ಧಾಂತದ ಉಗ್ರ ಪ್ರತಿಪಾದಕರು. ಅವರು ಹದಿಮೂರು ಹದಿನಾಲ್ಕನೇ [1238–1317] ಶತಮಾನದಲ್ಲಿ ಇದ್ದವರು. ಅವರು ಭಕ್ತಿ ಮಾರ್ಗದ ಪ್ರವರ್ತಕರಲ್ಲಿ ಪ್ರಮುಖರು.

ಲಿಂಗಾಯತ ಧರ್ಮ ಸ್ಥಾಪಕ ಬಸವಣ್ಣ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಸ್ಥಾಪಿಸಿ ಆ ತತ್ವವನ್ನು ಒಪ್ಪಿಕೊಂಡಿದ್ದರೆ? ಹೌದು ಎಂದೆನ್ನುತ್ತಾರೆ ಅನೇಕ ಪಂಡಿತ ಪಾಮರರು, ಸ್ವಾಮಿಗಳು, ಮಾತೆಯರು, ಶರಣರು, ಅಕ್ಕ ಅಣ್ಣನವರು, ಲಿಂಗಾಯತ ಧರ್ಮ ಗುರುಗಳು ಹಾಗು ಸಂಶೋಧಕರು ಆದರೆ ಇದು ಶುದ್ಧ ಸುಳ್ಳು ಅಪ್ಪ ಬಸವಣ್ಣನವರು ಕಾಯಕ ಮತ್ತು ದಾಸೋಹದ ಸಿದ್ಧಾಂತದ ಆಧಾರದ ಮೇಲೆ ಶರಣ ಸಂಸ್ಕೃತಿಯನ್ನು ಒಪ್ಪಿಕೊಂಡು ಅಷ್ಟಾವರಣಗಳ ಕಾಯುಗುಣಗಳನ್ನಾಗಿ ಕಂಡು ಮರುವ್ಯಾಖ್ಯಾನಿಸಿ ಪಂಚಾಚಾರಗಳ ನಿಜನಿಲುವನ್ನು, ಷಟಸ್ಥಲಗಳ ಮುಕ್ತಿ ಮಾರ್ಗವನ್ನು ಕಂಡುಕೊಂಡ ನಿಷ್ಪತ್ತಿ ಬಯಲು ಶೂನ್ಯ ಸಿದ್ಧಾಂತವೇ ಬಸವಣ್ಣನವರ ಸ್ಥಾಪಿಸಿದ

ಲಿಂಗಾಯತ ಧರ್ಮದ ತಿರಳು. ಹದಿನೈದನೆಯ ಶತಮಾನದಲ್ಲಿ ಅದ್ವೈತ ಸಿದ್ಧಾಂತಕ್ಕೆ ಪೂರಕವಾಗಿ ಶಿವಾದ್ವೈತವು ಹುಟ್ಟಿಕೊಂಡಿತು. ಇದನ್ನು ಶಿವಾ ವಿಶಿಷ್ಟಾದ್ವೈತವೆಂತಲೂ ಹೇಳುತ್ತಾರೆ. ಶಿವನನ್ನೇ ಆರಾಧಿಸುವ ಪದ್ದತಿಯು ಈ ಸಿದ್ಧಾಂತದಲ್ಲಿ ಕಂಡುಬರುತ್ತದೆ. ಬ್ರಹ್ಮಸೂತ್ರ ಇಲ್ಲಿ ಪ್ರಮುಖವಾದ ಗ್ರಂಥವಾಗಿದೆ. ಅನೇಕರು ಲಿಂಗಾಯತ ಧರ್ಮವು ಶಿವಾ ಅದ್ವೈತ ಸಿದ್ಧಾಂತದ ಮೇಲೆ ನಿಂತಿದೆ ಎಂತಲೂ ಹೇಳುತ್ತಾರೆ. ನೀಲಕಂಠ ಶಿವಾಚಾರ್ಯರು ಶಿವಾ ಅದ್ವೈತ ಸಿದ್ಧಾಂತಕ್ಕೆ ಭಾಷೆ ಬರೆದರು ಅದನ್ನು ಮುಂದೆ ಅಪ್ಪಯಪ್ಪ ಶಾಸ್ತ್ರಿ ವ್ಯಾಖ್ಯಾನಿಸುತ್ತಾರೆ. ಶಿವನೇ ಭಕ್ತ ಭಕ್ತನೇ ಶಿವಾ ಎಂದೆನ್ನುವ ಹಿಂದುವಾದವನ್ನು ಅನಗತ್ಯವಾಗಿ ಲಿಂಗಾಯತರ ತಲೆಗೆ ಕಟ್ಟಲಾಯಿತು. 1926ರಲ್ಲಿ ಡಾ. ಫ.ಗು.ಹಳಕಟ್ಟಿಯವರು ವಚನಗಳನ್ನು ಹುಡುಕಿ ಸಂಶೋಧಿಸಿ ಪ್ರಕಟಿಸಿದರೂ  ಸಹಿತ ಲಿಂಗಾಯತ ಧರ್ಮದರ್ಶನ ವಾಗ್ಮಯ ಸಿದ್ಧಾಂತಗಳನ್ನು ತಿಳಿದುಕೊಳ್ಳಲು ಒಂದು ಶತಮಾನವೇ ಬೇಕಾಯಿತು. ಹದಿನೈದನೆಯ ಶತಮಾನದ ವಚನ ಸಂಕಲನ  ಕಾಲವನ್ನು ಕಲಬೆರಕೆ ಕಾಲವೆಂದೇ ಅಥವಾ ಪ್ರಕ್ಷಿಪ್ತಿಕರಣ ಕಾಲವೆಂದು ಹೇಳಬಹುದು. ಆಗ ಹುಟ್ಟಿಕೊಂಡ ಶೂನ್ಯ ಸಂಪಾದನೆಯ ವೈಭವೀಕರಣ ಪುರಾಣಗಳ ಕಪೋಲಕಲ್ಪಿತ ಕಥೆಗಳಿಂದ ಶರಣ ಸಿದ್ಧಾಂತಕ್ಕೆ ಸ್ವಲ್ಪಮಟ್ಟಿಗೆ ಹಿನ್ನಡೆಯಾಯಿತು.

ಶರಣ ಸಂಸ್ಕೃತಿಯನ್ನು ಶೈವೀಕರಣಗೊಳಿಸಿ ಶಿವಾ ಪದ ಬಳಕೆಯನ್ನು ವಚನಗಳುದ್ದಕ್ಕೂ ಮಾಡಿ ಸದ್ಧರ್ಮ ಶಿವಯೋಗ ಪ್ರದೀಪಿಕೆ, ಶಿವಯೋಗ ಪ್ರದೀಪಿಕೆ  ಮುಂತಾದ ಶೈವೀಕರಣಗೊಳ್ಳುವ ಶಿವಾಗಮಗಳ ವಿಚಾರಗಳನ್ನು ಶರಣರ ತತ್ವಗಳಲ್ಲಿ ಸೇರಿಸಿ ವಿರೂಪಗೊಳಿಸಿದರು. ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವು ಶಿವಾ ಪುರುಷ  ಮತ್ತು ಶಕ್ತಿ ಸ್ತ್ರೀ ಇವರಿಬ್ಬರ ಮಿಲನ ಇವರಿಂದ ಉತ್ಪತ್ತಿಯಾಗುವ ಧರ್ಮವೆಂದು ಬಸವ ಭಕ್ತರನ್ನು ನಂಬಿಸುವ ಹುನ್ನಾರವನು ಶಿವಾಚಾರ್ಯರು ನಿರಂತರವಾಗಿ ಮಾಡುತ್ತಲೆ ಬಂದರು. ಗುರು ಲಿಂಗ ಜಂಗಮ ತತ್ವಗಳನ್ನು ಉಪಾಧಿತವನ್ನಾಗಿ ಮಾಡಿ ಗುರುವನ್ನು ವ್ಯಕ್ತಿ ಮಾಡಿ ಶ್ರೇಣೀಕೃತ ವ್ಯವಸ್ಥೆಗೆ ದಾರಿ ಮಾಡಿಕೊಟ್ಟರು. ನೂರೊಂದು ವಿರಕ್ತರು ಹದಿನಾರನೆಯ ಶತಮಾನದ ಶೈವವಾದಿಗಳು ವೀರಶೈವರು ಶರಣರ ಆಶಯಗಳಿಗೆ ಕೊಡಲಿ ಏಟು ಕೊಟ್ಟರು ಅಂದಿನಿಂದ ಇಲ್ಲಿಯವರೆಗೆ ಶೈವೀಕರಣಗೊಂಡ ಲಿಂಗಾಯತ ಧರ್ಮವು ಆಚಾರ ವಿಚಾರ ಸಮನ್ವಯತೆ ಮರೆತು ಆಚರಣೆಗೆ ಸಂಪ್ರದಾಯಕ್ಕೆ ಬಲಿಯಾಗಿ ಕಮರಿ ಹೋಗುತ್ತಿದೆ. ಕಾವಿಗಳು ಲಾಂಛನಗಳು ಮಠಗಳು ಲಿಂಗಾಯತ ಧರ್ಮದಲ್ಲಿಲ್ಲ. ಸನ್ಯಾಸತ್ವವನ್ನು ಬ್ರಹ್ಮಚರ್ಯೆಯನ್ನು ಶರಣು ವಿರೋಧಿಸಿದರು. ಇದು ಸಂಸಾರಸ್ಥರ ದಾಂಪತ್ಯ ಧರ್ಮವಾಗಿದೆ.

**"ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು ಬಯಲು ಬಯಲೊಳಗೆ ಬಯಾಲಾದೆನಯ್ಯ"** ಎಂದೆನ್ನುವ ಅಲ್ಲಮರ ಉನ್ನತ ಉದಾತ್ತೀಕರಣದ ಪರಿಕಲ್ಪನೆಯನ್ನು ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವೆಂದು ಹೇಳುವುದು ಎಷ್ಟು ಸಮಂಜಸ? ಬಯಲು ಶೂನ್ಯ ತತ್ವಗಳನ್ನು ಜಗತ್ತಿಗೆ ಕೊಟ್ಟು ಉದಾತ್ತೀಕರಣದ ಔನ್ನತ ಸಿದ್ಧಾಂತವನ್ನು ಪ್ರತಿಪಾದಿಸಿ ಬದುಕಿನ ಎಲ್ಲಾ ರಂಗಗಳನ್ನು ಸ್ವೀಕರಿಸಿ ಸತ್ಯವ ನಂಬಿ ಬದುಕಿದ ಸಿದ್ಧಾಂತವನ್ನು ಸನಾತನಿಗಳ ಸಿದ್ಧಾಂತಗಳಿಂದ ಬಿಡುಗಡೆಗೊಳಿಸುವುದು ನಮ್ಮ ಆದ್ಯ ಕರ್ತವ್ಯವಾಗಬೇಕು. ಬಸವಕಾಲದ ಶರಣರ ವಚನಗಳನ್ನು ಪರಿಷ್ಕರಣೆಗೆ ಒಳಪಡಿಸುವ ಅಗತ್ಯವಿದೆ ಆದರೆ ಅದಕ್ಕಿಂತ ಮೊದಲು ಶರಣ ಸಿದ್ಧಾಂತದ ಸ್ಪಷ್ಟತೆ ಪಾರದರ್ಶಕತೆಯನ್ನು ನಾವು ಅರಿತುಕೊಳ್ಳಬೇಕು. ಷಟಸ್ಥಲದಲ್ಲಿನ ಅಷ್ಟಾವರಣಗಳ ವಿವರಣೆಗೂ ಬಸವಣ್ಣನವರ ಹೆಚ್ಚಿನ ವಚನಗಳಲ್ಲಿನ ಅಷ್ಟಾವರಣ ವಿವರಣೆಗೂ ಅಜಗಜಾಂತರ ಅಂತರವಿದೆ. ಕಾರಣ ಬಸವ ಸಮಿತಿ ಮತ್ತು ಬಸವ ಭಕ್ತರು ಇದನ್ನು ಒಂದು ಸಾಮೂಹಿಕ ಹೊಣೆಗಾರಿಕೆಯೆಂದು ತಿಳಿದು ಶರಣ ಸಿದ್ಧಾಂತವನ್ನು ಪರಿಷ್ಕರಿಸಿ ಆಚರಣೆಗಳನ್ನು ಶುದ್ಧೀಕರಿಸಿ ಮುಂದಿನ ಜನಾಂಗಕ್ಕೆ ಕೊಡುವುದು ನಮ್ಮ ಕರ್ತವ್ಯ ಧರ್ಮವಾಗಿದೆ.

**– ಡಾ. ಶಶಿಕಾಂತ ಪಟ್ಟಣ**
ರಾಮದುರ್ಗ.

## ನೊಳಂಬವಾಣಿ ಪತ್ರಿಕೆಯ ಚಂದದಾರರಲ್ಲಿ ಮನವಿ

**ಪ್ರೀತಿಯ ಚಂದದಾರ ಬಂಧುಗಳೇ,**

**ನೊಳಂಬವಾಣಿ ಪತ್ರಿಕೆಯು 15ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದು ಈ ಸಂದರ್ಭದಲ್ಲಿ ನೊಳಂಬವಾಣಿ ಚಂದಾ ಹಣವನ್ನು 5 ವರ್ಷ, 10 ವರ್ಷಗಳಿಗೆ ಮಾಡಿಸಿರುತ್ತೀರಿ, ತಮ್ಮಗಳ ಅವಧಿಯು ಮುಗಿದಿದ್ದು 2000 ರೂಗಳನ್ನು ನೀಡಿ ಆಜೀವ ಸದಸ್ಯತ್ವವನ್ನು ನವೀಕರಿಸಬೇಕೆಂದು ಎಲ್ಲರಿಗೂ ಪ್ರೀತಿಪೂರ್ವಕವಾಗಿ ಸಂಪಾದಕ ಮಂಡಳಿ ಮತ್ತು ನೊಳಂಬ ಲಿಂಗಾಯಿತ ಸಂಘ (ರಿ.) ಬೆಂಗಳೂರಿನ ಪರವಾಗಿ ತಮ್ಮಲ್ಲಿ ವಿನಯಪೂರ್ವಕವಾಗಿ ಕೋರುತ್ತೇನೆ.**

**–ಸಂಪಾದಕ**

# ನೊಳಂಬರ ಕೆರೆಕಟ್ಟೆ ಬಾವಿಗಳು



**ಶಿವಕುಮಾರ್ .ಎಸ್**
ಈಡೇನಹಳ್ಳಿ,
ತಿಪಟೂರು ತಾ. ತುಮಕೂರು ಜಿಲ್ಲೆ.

ಹಿಂದಿನ ಸಂಚಿಕೆಯಿಂದ.......

**ಗೋಡೆಕೆರೆ**

ಕರ್ನಾಟಕದ ತಪೋಭೂಮಿಗಳಲ್ಲೊಂದಾಗಿರುವ ಸುಕ್ಷೇತ್ರ ಗೋಡೆಕೆರೆಯು ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿದೆ. ಮ್ಯಾಂಗನೀಸ್ ಅದಿರನ್ನು ಭೂಗರ್ಭದಲ್ಲಿಟ್ಟುಕೊಂಡು, ಅಡಿಕೆ, ತೆಂಗು ತೋಟಗಳ ಸಂಪದ್ಭರಿತ ಪುಣ್ಯ ಭೂವ್ಯಾಪ್ತಿಯಲ್ಲಿರುವ ಗೋಡೆಕೆರೆಯು ನೊಳಂಬರ ಪುಣ್ಯಕ್ಷೇತ್ರ. ಸುಮಾರು 60 ಎಕರೆ ತಪೋವನವನ್ನು ಒಳಗೊಂಡು ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಶಿವಯೋಗಿ ಸಿದ್ಧರಾಮರ ಗದ್ದುಗೆಯು ಪ್ರಮುಖವಾದುದು.

ಜಗತ್ತಿನ ಉನ್ನತಿಗಾಗಿ ಸುಪುತ್ರನನ್ನು ಹೆತ್ತ ಸೊನ್ನಲಾದೇವಿಯು ಹಾಲುಣಿಸುವಾಗ ಹೇಳುತ್ತಿದ್ದ ಮಾತುಗಳು “ಇವು ಕೆರೆಯಂ ಕಟ್ಟಿಸು, ಬಾವಿಯಂ ತೆಗೆದು, ದೇವಾಗಾರಮಂ ಮಾಡಿಸು, ಅಜ್ಜರೆಯೊಳ್ ಸಿಕ್ಕಿದ ಅನಾಥರಂ ಬಿಡಿಸು, ಮಿತ್ರರಿಗೆ ಇಂಬಗೆಯ ಶಿಷ್ಯರಂ ಪೊರೆ, ನಂಬಿದವರ್ಗೆ ಎರೆವಟ್ಟಾಗಿರು.” ಮೇಲಿನ ತಾಯಿಯ ನುಡಿಮುತ್ತುಗಳ ಆಶೀರ್ವಾದದಿಂದ ಸಿದ್ಧರಾಮರು, ಕಾಯಕ ಯೋಗಿಯಾದರು, ಲೋಕರಾಮರಾದರು, ಲೋಕೇಶ್ವರರಾದರು, ಶಿವಯೋಗಿಯಾದರು.

ತಾಯಿಯ ಮಹದಾಸೆ ಬಯಕೆಯಂತೆ ಜನನಾಯಕರಾಗಿ ಬೆಳೆದ ಸಿದ್ಧರಾಮರು, ತಾಯಿಯ ಕರೆಯನ್ನು ಕಾರ್ಯರೂಪಕ್ಕೆ ತಂದದ್ದು ಹೀಗೆ; “ಮೂರು ಮನೆಗೊಂದು ಬಾವಿ, ನೂರು ಮನೆಗೊಂದು ಶಾಲೆ, ಸಾವಿರ ಮನೆಗೊಂದು ಕೆರೆ”. ಸಿದ್ಧರಾಮರು ಕೈಗೊಂಡ ಈ ಮಹತ್ಕಾರ್ಯಗಳ ಉದ್ದೇಶ ಲೋಕಕಲ್ಯಾಣವೇ ಆಗಿದ್ದಿತು. ಈ ತತ್ವಪಾಲನೆ, ಸಾಧನೆ ಆಚರಣೆಯ ಮೂಲಕ ಶರಣರ ಪುಣ್ಯಕ್ಷೇತ್ರವಾಗಿ ಧರೆಯಲ್ಲಿ ಪ್ರಸಿದ್ಧಿಯಾಗಿದೆ ಗೋಡೆಕೆರೆ.

ಲೋಕೋಪಯೋಗಿ ಇಲಾಖೆಯು ಜನಕರಾದ ಸಿದ್ಧರಾಮರ ತತ್ವವನ್ನು ನೊಳಂಬರು ಶಿರಸಾವಹಿಸಿ ಸ್ವೀಕರಿಸಿದ್ದಾರೆ. ತಮ್ಮ ಆಡಳಿತದಲ್ಲಿ ಪ್ರಮುಖ ಗಮನವನ್ನು ನೀಡಿದ್ದಾರೆ, ಹಾಗೆಯೇ ಪಾಲಿಸಿದ್ದಾರೆ. ಈ ಮೂಲಕ ಸಾಧನೆಗೈದು ಜಗಕ್ಕೆ ತೋರಿರುವ ನೊಳಂಬರಿಂದ ನಿರ್ಮಾಣವಾಗಿರುವ ಕೆರೆ, ಕಟ್ಟೆ, ಬಾವಿಗಳು ಅಂದು ಇಂದು ಮುಂದೆಯೂ ಎಂದೆಂದಿಗೂ ಜೀವಂತ ಹೃದಯಗಳಾಗಿವೆ.

ಲೋಕೋಪಯೋಗಿ ತತ್ವಗಳನ್ನು ಕಾರ್ಯರೂಪಕ್ಕೆ ತಂದ ನೊಳಂಬರು ಗೋಡೆಕೆರೆಯಲ್ಲಿ ನಿರ್ಮಿಸಿರುವ ಕೆರೆ, ಬಾವಿ, ಕಲ್ಯಾಣಿ ಬಹಳ ಮಹತ್ವ ಪಡೆದಿವೆ. ಶ್ರೀಕ್ಷೇತ್ರ ಹಾಗೂ ಸುತ್ತಮುತ್ತಲಿನ ಭೂಪ್ರದೇಶದಲ್ಲಿ ಅಂತರಜಲ ವೃದ್ಧಿಗೂ ಕಾರಣವಾಗಿ ಸಕಲ ಜೀವಾತ್ಮರಿಗೆ ಒಳಿತಾಗಿದೆ.

**ಗುರುಸಿದ್ಧರಾಮರ ಕಲ್ಯಾಣಿ**

ದಾಸೋಹ ಮಹಾಮನೆಯ ಸಮೀಪ ಇರುವ ಪವಿತ್ರ ಕಲ್ಯಾಣಿ ಶುದ್ಧ ಗಂಗೆಯನ್ನು ನೀಡುವ ಪುಣ್ಯ ಸ್ಥಾನ. ತಿಪಟೂರು ತಾಲ್ಲೂಕು, ಬೆಳಗರಹಳ್ಳಿ ಗ್ರಾಮದ ಶರಣರು ದೊಡ್ಡದಾಗಿ ಕಲ್ಯಾಣಿ ನಿರ್ಮಿಸಿ ಶುದ್ಧೀಕರಿಸಿರುವುದು ಕಂಡುಬರುತ್ತದೆ. ಆಯುಧಪೂಜೆಯ ದಿನದಂದು ಪ್ರತಿವರ್ಷ ದೇವರುಗಳ ವಿಗ್ರಹ, ಪೂಜಾ ಸಾಮಗ್ರಿಗಳು ಹಾಗೂ ಆಯುಧಗಳನ್ನು ಇಲ್ಲಿಯೇ ಶುಚಿಗೊಳಿಸಿ ಪೂಜಾ ಆಚರಣೆ ನಡೆಸುವುದು ನಡೆದುಬಂದಿದೆ.

**ಮಜ್ಜನ ಬಾವಿ**

ಶ್ರೀಕ್ಷೇತ್ರದಲ್ಲಿರುವ ತೆಂಗಿನ ತೋಟದ ನಡುವಿರುವ ಚಿಕ್ಕದಾದ ಬಾವಿ ಇದು. ಈ ಬಾವಿಯನ್ನು ನೋಡಿದರೆ ಗಮನವೆಲ್ಲಾ ಬಾವಿಯ ಕಡೆ ಹೋಗುತ್ತದೆ ಹಾಗೂ ಸೋಜಿಗವೆನಿಸುತ್ತದೆ. ಬಾವಿಗೆ ಕಲ್ಲು ಚಪ್ಪಡಿಯ ರಕ್ಷಾಗೋಡೆ ಇದೆ. ಸಿದ್ಧರಾಮೇಶ್ವರರಿಗೆ ತ್ರಿಕಾಲವು ನಡೆಯುವ ಪೂಜೆಗೆ ಪ್ರತಿದಿನ ಈ ಬಾವಿಯು ಗಂಗಾಜಲವನ್ನು ಬಳಸುತ್ತಾರೆಂದು ತಿಳಿಯಬಹುದು.

**ಕಟ್ಟೆಗಳು**

ಬಾವಿಗಳ ಹಾಗೆ ಬೇಸಿಗೆಯಲ್ಲಿ ವನ ಸಂಪತ್ತನ್ನು ರಕ್ಷಿಸಲು ಪ್ರಾಣಿ

ಪಕ್ಷಿಗಳಿಗೆ ಗಂಗಾಮೃತ ನೀಡಲು ಕಟ್ಟೆಗಳನ್ನು ನಿರ್ಮಾಣ ಮಾಡಿದ್ದಾರೆ. ಗೋಡೆಕೆರೆ ಸುತ್ತಮುತ್ತ ಭೂ ವ್ಯಾಪ್ತಿಯಲ್ಲೂ ಅಗತ್ಯ ಸ್ಥಳಗಳಲ್ಲಿ ಕಟ್ಟೆಗಳನ್ನು ಕಾಣಬಹುದು.

**ಕೆರೆ**

ನೊಳಂಬರ ಆರಾಧ್ಯದೈವ ಹೆಂಜೇರೇಶ್ವರರ ಕೃಪೆ, ಗುರುಸಿದ್ಧರಾಮರ ಮಾರ್ಗದರ್ಶನವನ್ನು ನಮ್ಮ ಪೂರ್ವಿಕರು, ಹಿರಿಯರು ತಪ್ಪದೆ ಪಾಲಿಸುತ್ತಾ ಬಂದು, ಜಗತ್ತಿಗೆ ಮಾರ್ಗದರ್ಶಕರಾಗಿ ಸಕಲ ಜನಾಂಗಕ್ಕೂ ಅನುಕರಣೀಯರಾಗಿದ್ದಾರೆ. ಈ ಪ್ರಕೃತಿ ಸಂರಕ್ಷಣಾ ಕಾರ್ಯಗಳನ್ನು ನಾವುಗಳು ಇಂದು ಹಾಗೂ ಮುಂದೆಯೂ ಕೈಗೊಂಡು ಪರಿಸರ ರಕ್ಷಿಸುವ ರಕ್ಷಕರಾಗಿ ಶರಣ ಧರ್ಮ ಪಾಲಕರಾಗಿ ಬಾಳಬೇಕು. ನಾವು ಬದುಕಬೇಕು, ನಮ್ಮಂತೆ ಇತರರು ಬದುಕಲು ಸಹಕಾರಿಯಾಬೇಕು. ಇದೇ ಶರಣ ಧರ್ಮ. ನೊಳಂಬರು ತಮ್ಮ ಬದುಕಿನ ಒಳಿತಿಗೆ ಬಾವಿ ತೆಗೆದುಕೊಂಡರು. ಊರಿನವರ ಒಳಿತಿಗಾಗಿ ಕಟ್ಟೆಗಳ ನಿರ್ಮಿಸಿರುವರು. ಸಕಲ ಜೀವರಾಶಿಗಳ ಒಳಿತಿಗಾಗಿ ಕೆರೆಗಳನ್ನು ನಿರ್ಮಿಸಿರುವರು.

ಕೆರೆಗಳ ನಿರ್ಮಾಣಕ್ಕೆ ಮಹತ್ವ ಕೊಟ್ಟ ರಾಜ ದಿಲೀಪ (ಕ್ರಿ.ಶ. 940–967) ಎಂದು ತಿಳಿಯುತ್ತದೆ. ಈತ ಯಾರ ಕಾಲದಲ್ಲಾದರು ನಿರ್ಮಾಣವಾಗಿರಲಿ ಅವುಗಳನ್ನು ಅಭಿವೃದ್ಧಿ ಮಾಡಿಸುವ ಧೀಮಂತ ರಾಜನಾಗಿದ್ದನು. ಈತನ ಕಾಲದಲ್ಲಿ ಬಹುತೇಕ ನೂರಾರು ಕೆರೆಕಟ್ಟೆಗಳನ್ನು ನಿರ್ಮಾಣ ಮಾಡಿಸಿರುವುದು ಇತಿಹಾಸದಿಂದ ತಿಳಿಯುತ್ತದೆ. ಈ ಕಾಲಘಟ್ಟದಲ್ಲಿಯೇ ಗೋಡೆಕೆರೆ ಕೆರೆ ನಿರ್ಮಾಣವಾಗಿರುವುದಾಗಿ ಹಲವರು ಅಭಿಪ್ರಾಯಪಡುತ್ತಾರೆ.

ಬಹುತೇಕ ಕೆರೆಗಳ ಸನಿಹದಲ್ಲಿ ದೇವಾಲಯ ನಿರ್ಮಿಸಿ, ಶಿವಲಿಂಗ ಹಾಗೂ ಎದುರಿಗೆ ನಂದಿಯನ್ನು ಸ್ಥಾಪಿಸುತ್ತಾರೆ. ನಂದಿ ನೊಳಂಬರ ರಾಜ ಲಾಂಛನ. ಎಲ್ಲಿ ಕೆರೆ, ಕಟ್ಟೆ, ಬಾವಿಗಳ ನಿರ್ಮಿಸಿರುವರೋ ಅಲ್ಲಿ ನಂದಿಯನ್ನು ಪ್ರತಿಷ್ಠಾಪಿಸಿರುವುದನ್ನು ಕಾಣಬಹುದು. ಕೆಲವು ಕಡೆ ಶಿವಲಿಂಗದ ಎದುರು ಇದ್ದರೆ, ಕೆಲವು ಭಾಗಗಳಲ್ಲಿ ನಂದಿ (ಬಸವಣ್ಣನ) ದೇವಾಲಯುಗಳನ್ನೆ ಸೊಗಸಾಗಿ ನಿರ್ಮಿಸಿದ್ದಾರೆ. ದೇವಾಲಯುಗಳಿಗೆ ಕೊಡುವಷ್ಟೇ ಮಹತ್ವವನ್ನು ಕೆರೆ ಕಟ್ಟೆ ಬಾವಿಗಳಿಗೂ ಕೊಟ್ಟಿರುವುದು ಎದ್ದು ಕಾಣುತ್ತದೆ.

ನೊಳಂಬರ ಪುಣ್ಯ ಪ್ರವಾಸಿ ಸ್ಥಳಗಳಾದ ಹೇಮಾವತಿ, ನಂದಿ, ಆವನಿ, ಧರ್ಮಪುರಿ, ಬರಗೂರು, ಅರಳಗುಪ್ಪೆ ಸೇರಿದಂತೆ ಇನ್ನು ಹಲವು ಸ್ಥಳಗಳಲ್ಲಿ ದೇವಾಲಯ ಹಾಗೂ ಕೆರೆ ಕಟ್ಟೆ ಕಲ್ಯಾಣಿಗಳನ್ನು ನಿರ್ಮಿಸಿರುವರು. ಹಲವು ಅಮೂಲ್ಯ ಶಿಲ್ಪಗಳು, ಶಿಲಾವಸ್ತುಗಳು ಇಲ್ಲಿಂದ ಸ್ಥಾನಪಲ್ಲಟವಾಗಿವೆ. ಕೆಲವು ನಾಶವಾಗಿವೆ, ಕೆಲವು ಪರಿವರ್ತನೆಯಾಗಿವೆ, ಕೆಲವು ಶಿಲ್ಪಗಳನ್ನು ಹಲವಾರು ಸಾಹಿತಿಗಳು, ಸಂಶೋಧಕರು, ಘಣ್ಯರುಗಳು ಬೆಂಗಳೂರು, ಮದ್ರಾಸ್ ಹಾಗೂ ಹೇಮಾವತಿ ಪ್ರಾಚ್ಯವಸ್ತು ಸಂಗ್ರಹಾಲಯಗಳಲ್ಲಿ ಸಂರಕ್ಷಿಸಿ ಇಟ್ಟಿದ್ದಾರೆ. ಈ ಪುಣ್ಯಕೆಲಸಗಳನ್ನು ಮಾಡಿ ಇಂದಿನ ಜನಾಂಗಕ್ಕೂ ತಿಳಿಸುವ ಮಹತ್ಕಾರ್ಯ ಮಾಡಿರುವ ಇಲಾಖೆ ಹಾಗೂ ಘಣ್ಯರುಗಳಿಗೆ ಧನ್ಯವಾದ ಸಲ್ಲಿಸಬೇಕು.

ಹಲವು ದೇವಾಲಯುಗಳನ್ನು ನಾಶ ಮಾಡಿರಬಹುದು, ಶಿಲಾವಸ್ತು, ಶಿಲಾಮೂರ್ತಿಗಳು ಸ್ಥಾನ ಪಲ್ಲಟವಾಗಿರಬಹುದು. ಹಾಗೆ ಹಲವು ದೇವಾಲಯಗಳ ಅಭಿವೃದ್ಧಿಯಾಗಿವೆ. ದೇವಾಲಯದಷ್ಟೇ ಶ್ರೇಷ್ಠ ಪುಣ್ಯ ಹಾಗೂ ಜೀವರಾಶಿಗೆ ಜೀವನಾಧಾರವಾದ ಕೆರೆಕಟ್ಟೆ ಬಾವಿಗಳನ್ನು ಸ್ಥಾನಪಲ್ಲಟ ಮಾಡಲಾಗಿಲ್ಲ. ಕೆಲವು ಕಣ್ಮರೆಯಾಗಿವೆ, ಪರಿವರ್ತನೆಯಾಗಿ ನಿವೇಶನ, ಮನೆಗಳು ಅಥವಾ ತೋಟ ಗದ್ದೆಗಳು ಆಗಿವೆ. ಮತ್ತೆ ಕೆಲವು ಜನೋಪಯೋಗಿ ಸ್ಥಳಗಳಾಗಿಯೂ ಇವೆ. ಪೂಜ್ಯ ಸ್ಥಳದ ಬದಲಾಗಿ ತ್ಯಾಜ್ಯ ವಸ್ತುಸಂಗ್ರಹ ಸ್ಥಳಗಳಾಗಿಯೂ ಇವೆ.

ದುಃಸ್ಥಿತಿ ತೊಲಗಿ ಸುಸ್ಥಿತಿ ಬಂದು ನೊಳಂಬರ ಕನಸು, ಉದ್ದೇಶ ಸಫಲವಾದರೆ ಸಕಲ ಜೀವರಾಶಿಗೂ ಒಳಿತಾಗುವುದು. ಜಲದ ಕೊರತೆ ದೂರವಾಗಿ ಜಲಭರಿತ ಕೆರೆಕಟ್ಟೆಗಳಾಗಲಿ ಎಂದು ಎಲ್ಲರ ಆಸೆ. ಪುಣ್ಯ ಪೂಜ್ಯ ಕೆರೆಗಳಲ್ಲಿ ಗೋಡೆಕೆರೆಯ ಕೆರೆಯೂ ಒಂದಾಗಿದೆ. ಕೆರೆಯ ಹೆಸರೇ ಊರಿಗೂ ಇರುವುದು ವಿಶಿಷ್ಟವಾದದ್ದು.

ಲಿಂಗಾಯತ ಧರ್ಮ ಪ್ರಸಾರ ಮಾಡುತ್ತಾ ಗುರು ಸಿದ್ಧರಾಮೇಶ್ವರರು ದಕ್ಷಿಣ ಭಾಗದ ಅಂದಿನ ಕಾರೆಹಳ್ಳಿಗೆ ಆಗಮಿಸುತ್ತಾರೆ. ಅಲ್ಲಿನ ಶರಣರೊಬ್ಬರು ಮನೆ ಕಟ್ಟುತ್ತಿರುವರು. ಅವರ ಬಳಿ ಭಿಕ್ಷೆ ಬೇಡುತ್ತಾರೆ. ಏನು ನೀಡದೆ ಮೌನವಾಗಿ ನಿಂತಾಗ ಈಗ ನಿನ್ನಲ್ಲಿರುವುದನ್ನೇ ನೀಡು ಎಂದು ತಿಳಿಸುತ್ತಾರೆ. ಶರಣ ನನ್ನಲ್ಲಿರುವುದು ಈಗ ಈ ಗೋಡೆ ಎಂದಾಗ, ಅದನ್ನೇ ನೀಡು ಎನ್ನುವರು. ಹಸಿಗೋಡೆಯ ಸ್ವಲ್ಪ ಮಣ್ಣನ್ನು ಸಿದ್ಧರಾಮರ ಕೈಗೆ

**52ನೇ ಪುಟಕ್ಕೆ.............**

# ಜಂಗಮ ಪ್ರಾಣಿ ಬಸವಣ್ಣ – ಒಂದು ವಿಶ್ಲೇಷಣೆ

ಕ್ರಿಯಾವಿಹೀನವಾದ ಜ್ಞಾನವು, ಜ್ಞಾನವಿಹೀನವಾದ ಕ್ರಿಯೆಯು ಬಂಧನವನ್ನುಂಟು ಮಾಡುತ್ತವೆ. ಕ್ರಿಯಾಜ್ಞಾನಗಳ ಸಾಮರಸ್ಯಗಳ ಮಹದ್ವ್ಯಕ್ತಿತ್ವವಿತ್ತು. ನುಡಿದಂತೆ ನಡೆವುದು ಬಸವೇಶ್ವರರ ವ್ಯಕ್ತಿತ್ವದ ಉಸಿರು. ಕ್ರಿಯಾಜ್ಞಾನ ಸಾಮರಸ್ಯಗಳ ಅರಿವುಳ್ಳ ಜಂಗಮನ ಅಸುವು ಹಾರಿದರೆ, ಅವರೊಡನೆ ತನ್ನ ಪ್ರಾಣವನ್ನೂ ಬೆರೆಸುವ ಮನೋಭಾವವುಳ್ಳವನಾದ್ದರಿಂದ ಬಸವಣ್ಣನವರನ್ನು ಜಂಗಮ ಪ್ರಾಣಿಯೆಂದು ಕರೆಯುತ್ತಿದ್ದರು. ಲಿಂಗ ಸ್ವರೂಪವಾಗಿ ಚರಿಸುವ ಲೀಲಾಮೂರ್ತಿ ಬಸವಣ್ಣನು 'ಜಂಗಮ ಲಿಂಗದಲ್ಲಿ ಭಕ್ತಿಯನ್ನಿಟ್ಟು, ಕೂಡಲಸಂಗನ ಶರಣರ ಪಾದಕಮಲದಲ್ಲಿ ಆನು ತುಂಬಿ' ಎನ್ನುವ ಮನೋಗತವುಳ್ಳವನನ್ನು ಪರೀಕ್ಷಿಸಲು, ಒಮ್ಮೆ ಪ್ರಾಣಿ ಕಿನ್ನರಯ್ಯಗಳ ಪ್ರಾಣವು ಇದ್ದಕ್ಕಿದ್ದಂತೆಯೇ ಹಾರಿಹೋಯಿತು. ಶರಣರ ಮನಸ್ಸು ಕಳವಳದಿಂದಿರುವಾಗ ದುಃಖದಿಂದೊಡಗೂಡಿದ ಬಸವೇಶ್ವರರು ಜಂಗಮವೇ ತನ್ನ ಪ್ರಾಣ, ತನ್ನ ಪ್ರಾಣವೇ ಜಂಗಮ, ಇದಕ್ಕೆ ಸಂಗಮನೇ ಸಾಕ್ಷಿ ಎನ್ನುವ ಇವರ ಮನಸ್ಸು ಹೂವಿನಂತೆ ಅತಿ ಮೃದು, ಶಿಲಾಮಯ, ದುಃಖಸಾಗರದಲ್ಲಿ ಮುಳುಗಿರುವ ಬಸವೇಶ್ವರರನ್ನು ಕುರಿತು ಮಾಚಿ ತಂದೆಗಳು "ನೆನೆವುದು ಕಿನ್ನರಾಧೀಶನ ಗುಣಮಂಪೊಣ್ದು ತನ್ನ ಭಾಷೆಯನೀಗಳ್, ನೆನೆಯದೆ ಕಣ್ಬನಿಗಳ ಪೆರ್ವೊನಲಿಂ ನಾಂದಪರೆ ಭಲರೇ ಭಕ್ತವರೇಣ್ಯ" ಎಂದು ಹೇಳುತ್ತಿದ್ದಂತೆ ಬಸವೇಶ್ವರರಿಗೆ ಅರಿವುಂಟಾಗಿ ಇದ್ದಕ್ಕಿದ್ದಂತೆಯೇ ಅವರ ಪ್ರಾಣ ಪಕ್ಷಿಯು ಶಿವನಲ್ಲಡಗುತ್ತದೆ. ಮಾನವ ಸಹಜವಾದ ಮರವೆಯು ಆಗಾಗ ತಲೆದೋರಿ ಶರಣರ ಸಂಗದ ಝುಂಝಾ ಮಾರುತನಾಗಿ ಹಾರಿಹೋಗುತ್ತದೆ. ಅಣ್ಣನವರ ಆಂತರಿಕ ಜೀವನದ ಅಭಿವೃದ್ಧಿಗೆ ತಡೆಯುಂಟಾಗುತ್ತಿರಲಿಲ್ಲ. ಬಸವಣ್ಣನವರ ವ್ಯಕ್ತಿತ್ವದ ವೈಶಿಷ್ಟ್ಯವಡಗಿರುವುದೇ ಇಲ್ಲಿ. ಅವರ ಆಂತರೀಕದ, ಧಾರ್ಮಿಕ ಮಾರ್ಗವು ಚಿಗುರಿ ಪ್ರಫುಲ್ಲಿತವಾಗಿರುವುದನ್ನು ಈ ಸಂದರ್ಭದಲ್ಲಿ ಕಾಣಬಹುದು. ತತ್ಪುರಷಕ್ಕಿಟ್ಟ ತಾಪಸಿಯೇ ಅಪರಂಜಿ ಎನ್ನುವಂತಾಗಿಸುವ ಸನ್ನಿವೇಶವೇ ಇಲ್ಲಿ ವ್ಯಕ್ತವಾಗಿದೆ. ಅಣ್ಣನವರು ಶಿವಯೋಗ ನಿದ್ರಾಮುದ್ರೆ ಯುನ್ನೊಡೆದು, ತನು ಮನಗಳನ್ನೂ ಸಕಲೇಂದ್ರಿಯಗಳನ್ನೂ ಶಿವನಲ್ಲಿ ಬೆರಸಿ ಶರಣ ಸತಿ ಲಿಂಗ ಪತಿಯಾಗಿ, ತಾನೇ ತಾನಾಗುವ ಭಾವವು ವರ್ಣನಾತೀತವಾದುದು. ಪರಮಾತ್ಮನಲ್ಲಿ ಮನಮಗ್ನನಾಗಿ ನೆನೆಯುತ್ತಾ ನೆನೆಯುತ್ತಾ ಭ್ರಮರ ಕೀಟ ನ್ಯಾಯದಂತೆ, ತಾನೇ ತಾನಾಗಿ ಅಂಗವೇ ತಾನಾಗುವನು, ತಾನೇ ಸಂಗನೋ ಸಂಗನೇ ತಾನೋ ಎನ್ನುವಂತೆ. ತ್ರಿವಿಧಾನಂದ ರಸಮಯದಲ್ಲಿ ಭಾವ ಭ್ರಾಂತಿಯಡಗಿ ಪರಮಾನಂದ ಸ್ವರೂಪವಾದ ಜ್ಯೋತಿರ್ಕಳೆಯಲ್ಲಿ ತಾನೇ ತಾನಾಗಿ ಶಿವೈಕ್ಯ ಸೌಖ್ಯ ಸಾಮ್ರಾಟನಾಗಿ ರಾರಾಜಿಸುತ್ತಿರುವುದನ್ನು ಶಿವಮುದ್ರಾ ಯೋಗದಲ್ಲಿ ಕಾಣುತ್ತೇವೆ. ಈ ಭಾಗ್ಯದಲ್ಲಿ ಬಸವೇಶ್ವರರ ಭಾಗ್ಯವೇ ಭಾಗ್ಯ. ಇಂತಹ ಮಹದ್ವ್ಯಕ್ತಿಯನ್ನು ಪಡೆದ ಶರಣರ ಭಾಗ್ಯವನ್ನು ಏನೆಂದು ಹೇಳಲಿ, ಶರಣರೇ ಧನ್ಯರು. ಶರಣರ ಹೃದಯವಿರುವುದು ಬಸವಣ್ಣನವರಲ್ಲಿ, ಬಸವಣ್ಣನವರ ಹೃದಯವಿರುವುದು ಶರಣರಲ್ಲಿ. ಶರಣರ ದಿವ್ಯವಾಣಿಯಲ್ಲಿ ಅಣ್ಣನವರ ವ್ಯಕ್ತಿತ್ವವೆಂಬ ಮರವು ಕವಲು ಕವಲೊಡೆದು ನಾನಾ ರೆಂಬೆ ಕೊಂಬೆಗಳಿಂದ ಚಿಗುರು, ಹೂ, ಹೀಚು, ಕಾಯಿ, ಮಿಡಿ, ಸೋರೆಕಾಯಿ ಹೆಣ್ಣುಗಳಿಂದ ಕಂಗೊಳಿಸಿರುವುದನ್ನು ಕಾಣುತ್ತೇವೆ.

ಕಿನ್ನರಯ್ಯಗಳ ಅಸುವು ಶಿವನಲ್ಲಿ ಬೆರೆದೊಡನೆಯೇ ಜಂಗಮ ಪ್ರಾಣಿಯೆನಿಸಿದ ಬಸವೇಶ್ವರರೂ ತನ್ನಸುವನ್ನು ಶಿವನಲ್ಲಿ ಬೆರೆಸುವರು. ಯಾಕೆ ದೇವರು ಅವರಿಬ್ಬರ ಪ್ರಾಣವನ್ನೂ ಪಡೆಯುವರು. ಆಗ ಶರಣ ವೃಂದವು "ಬೆಸ್ರುಗೆಮಿಗೆ ಜವದೆ ಜಂಗಮ। ದಸುವಿನೊಳಸುವಂ ನಿವೇದಿಸಲ್ಬರ್ಕುಮೆ ಪೇಳ್॥ ಬಸವ ಸಚಿವೇಂದ್ರ ನಿನ್ನವೊಲ ಸದೃಶಮಿದು ಭಕ್ತಿಭಾವ ಮಾರ್ಗಮಶಕ್ಯಂ॥" ಧನವನ್ನು ಮನವನ್ನು ತನುವನ್ನು ಪ್ರಾಣವನ್ನು ಇತರರಿಗೂ ಅರ್ಪಿಸುವುದು ಅತಿ ಕಷ್ಟ. ಧನವನ್ನು ಕೊಡಲು ಮನಸ್ಸು ಬರುವುದೇ ಕಷ್ಟ. ಒಂದು ವೇಳೆ ಕೊಟ್ಟರೂ ಕೊಡಬಹುದು. ತನುವನ್ನು ಕೊಡುವುದಂತೂ ಅಸಾಧ್ಯವಾದ ಕಾಯಕ ತನುವನ್ನಾದರೂ ಕೊಡಬಹುದು, ಮನವನ್ನು ಕೊಡುವುದು ಹೇಗೆ ಸಾಧ್ಯ ? ಇದನ್ನು ಕೊಡಬಹುದೆಂದು ಭಾವಿಸಿದರೂ ಪ್ರಾಣವನ್ನು ಕೊಡುವುದು ಹೇಗೆ? "ಭಾವಿಸಿ ಪರಹಿತ ನಿರತಾತ್ಮನಾದವಂಗರಿದುಂಟೆ?" ದಯೆ ಬಂದರೆ ಏನನ್ನಾದರೂ ಕೊಡಬಹುದು, ದಯವಿಲ್ಲದಿದ್ದರೆ ಧರ್ಮವಾವುದಯ್ಯಾ ಎಂದಿದ್ದಾರೆ ಅಣ್ಣನವರು. ದಯೆ ಬೇಕು, ಇದಿಲ್ಲದಿದ್ದರೆ ಯಾವ ಧರ್ಮವೂ ಸಾಧ್ಯವಿಲ್ಲ. ಗುರು ಲಿಂಗ ಜಂಗಮಕ್ಕಾಗಿ ತನು, ಮನ, ಧನ, ಪ್ರಾಣಗಳನ್ನೇ ಅರ್ಪಿಸಿ ಅರ್ಥ ಪ್ರಾಣಗಳ ಹಂಗನ್ನರಿದು, ಲಿಂಗರೂಪಿ ಯಾದವನು ನಮ್ಮ ಬಸವಣ್ಣ. ಲಿಂಗ ಪ್ರಾಣಿಗಳನ್ನು ಕಾಣಬಹುದಾದರೂ ಜಂಗಮ ಪ್ರಾಣಿಗಳನ್ನು ಕಾಣುವುದು ಅಪರೂಪ. ಜಂಗಮ ಪ್ರಾಣಿಯೆಂದರೇ ಬಸವಣ್ಣ, ಬಸವಣ್ಣನೆಂದರೇ ಜಂಗಮ ಪ್ರಾಣಿ. "ಜೀವ ಜಂಗಮ ಸುರಧ್ರುಮವಾಗಿ ಸದ್ಭಕ್ತಿ ಸಾಮ್ರಾಜ್ಯಕ್ಕೆ ವಿಭುವೆನಿ ಸೊಪ್ಪುತಿರ್ದಂ ವೃಷೇಂದ್ರಂ" ಎಂದರೆ ಬಸವಣ್ಣನವರು ಸದ್ಭಕ್ತ ಸಾಮ್ರಾಜ್ಯದ ವಿಭುವಾಗಿ ಶರಣ ಸಂದೋಹದಲ್ಲಿ ಶರಣರೆಂಬ ಒರೆಗಲ್ಲಿನಲ್ಲಿ ಉಜ್ಜಿ ತಿಕ್ಕಿ ಬರೆದು "ಕುಂಡಣಕ್ಕಿಟ್ಟ ವಜ್ರದಂತೆ" ಥಳಥಳಾಯಮಾನವಾಗಿ ರಂಜಿಸಿದ್ದಾರೆ.

**ವಿದ್ವಾನ್ ಎಸ್.ಷಡಕ್ಷರಯ್ಯ**
ಎಸ್.ಐ.ಟಿ.ಬಡಾವಣೆ, ತುಮಕೂರು. ಮೊ : 9972603985

# ಹೆಂಜೇರು ಸಿದ್ದೇಶ್ವರಸ್ವಾಮಿ ಜಾನಪದ ವೈಭವ

ಶಿರಾ ತಾಲ್ಲೂಕಿನ ದೊಡ್ಡಬಾಣಗೆರೆ ಸಮೀಪದ ಹೇಮಾವತಿ ಹೆಂಜೇರು ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಫೆ. 26ರಿಂದ ಮಾ. 5ರವರೆಗೆ ನಡೆದಿತ್ತು ಎಂದು ಉತ್ಸವ ಸಮಿತಿ ಛೇರ್ಮನ್ ಕೆ.ಕರೇಗೌಡ ತಿಳಿಸಿದರು. ಶಿವರಾತ್ರಿ ಅಂಗವಾಗಿ ಫೆ.26 ರಂದು ಬೆಳಗ್ಗೆ 6 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಮಹಾರುದ್ರಾಭಿಷೇಕ, ಶಾತ್ರಿ 9 ರಿಂದ ಸಹಸ್ರ ಬಿಲ್ವಾರ್ಚನೆ, ಭಜನೆ ನಡೆಯಲಿದೆ. ಫೆ.27 ರಂದು ಬೆಳಗ್ಗೆ 19ಕ್ಕೆ ಭಾನು ಪಲ್ಲಕ್ಕಿ ಉತ್ಸವ, ಫೆ.28 ರಂದು ಬೆಳಗ್ಗೆ 9ರಿಂದ ಸಂಜೆ 6 ರವರೆಗೆ ಅಗ್ನಿಕುಂಡ ಮಹೋತ್ಸವ ನಡೆಯಲಿದೆ. ಮಾ.1 ರಂದು ಸಂಜೆ 4ಕ್ಕೆ ಸಿಡಿಮಾನು ಉತ್ಸವ, ಮಾ.2 ರಂದು ಸಂಜೆ 4. ಗಂಟೆಗೆ ಚಿಕ್ಕತೇರು, ಮಾ.3 ರಂದು ಸಂಜೆ 4.45ಕ್ಕೆ ಕಲ್ಲುಗಾಲಿ ಬ್ರಹ್ಮ ರಥೋತ್ಸವ ನಡೆಯಲಿದೆ. ಮಾ.4 ರಂದು ಸಂಜೆ 4 ಗಂಟೆಗೆ ವಸಂತೋತ್ಸವ, ಮಾ.5 ರಂದು ಬೆಳಗ್ಗೆ 9 ಗಂಟೆಗೆ ಶಯನೋತ್ಸವ ನಡೆಯಲಿದೆ ಎಂದು ಜಾತ್ರಾ ಮಹೋತ್ಸವ ಸಮಿತಿಯ ಛೇರ್‌ಮನ್ ತಿಳಿಸಿದರು. ದೇವಾದಾಯ ಇಲಾಖೆಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ನರಸಿಂಹ ರಾಜು, ಹೆಂಜೇರು ಸಿದ್ದೇಶ್ವರಸ್ಥಾಮಿ ದೇವಾಲಯದ ಅರ್ಚಕರಾದ ಶಿವಕುಮಾರ್, ಸಿದ್ದಲಿಂಗೇಶ್ವರ್, ರವಿಶಂಕರ್ ನೂತನ ರಥದ ನಿರ್ಮಾತೃ ದೊಡ್ಡಹುಲಕುಂಟೆ ಶ್ರೀರಾಮೇಗೌಡ ಹಾಗೂ ದೇವಾಲಯದ ಸಿಬ್ಬಂದಿಗಳು ಇದ್ದರು.

**ಜನಪದ ಹಿನ್ನೆಲೆ**

ನಿಡಗಲ್ಲು ದುರ್ಗದ ಗುಜ್ಜಾರ ಮಾಳಮ್ಮನಿಗೆ ಹೆಂಜಾರಿ ಸಿದ್ದಯ್ಯ, ವದ್ದಿಕೆರೆ ಸಿದ್ದಯ್ಯ, ಮಧ್ಭಗಿರಿ ಸಾಳ್ವರಾಯ, ಅಗ್ರಹಾರದ ಸಿದ್ದಯ್ಯ, ಪರದೇಶಿ ನಿಂಗಣ್ಣ ಎಂಬ 5 ಜನ ಗಂಡು ಮಕ್ಕಳಿದ್ದರು. ಇವರೆಲ್ಲರೂ ಜಂಗಮ ಜ್ಯೋಗಪ್ಪಗಳಾಗಿ ಶಿವಸಂಚಾರಿಗಳಾಗಿ ಭಕ್ತರ ಮನೆಗೆ ತೆರಳಿ ಶಿವಸ್ಮರಣೆ ಮಾಡಿ ಕೋರಣ್ಯ ಭಿಕ್ಷೆ ಬೇಡಿ ಬದುಕಿ ಲೋಕಕಲ್ಯಾಣಕ್ಕಾಗಿ ಶಿವನಲ್ಲಿ ಪ್ರಾರ್ಥಿಸುತ್ತಿದ್ದರು. ಹೆಂಜಾರಿ. ಸಿದ್ದಯ್ಯ ಹೇಮಾವತಿಯ ಬಳಿ ದೇವಮೂಲೆಯ ಮರದ ಕೆಳಗೆ ಕುಳಿತು ಧ್ಯಾನ ಮಾಡಿಕೊಂಡಿದ್ದರು. ಹೆಮನಾಪುರಿ (ಹೇಮಾವತಿ) ಪಟ್ಟಣಕ್ಕೆ ಹಾಲು ತುಪ್ಪ ಮಾರಲು ಶಿರಿವರ(ಶಿವರ) ಗ್ರಾಮದಿಂದ ತಲೆಯ ಮೇಲೆ ಹಾಲು ತುಪ್ಪದ ಕೊಡಗಳನ್ನು ಹೊತ್ತು ಬಂದ ಕಾಡುಗೊಲ್ಲತಿಯರಲ್ಲಿ ಕೆಲವರು ಸಿದ್ದಯ್ಯನಿಗೆ ಹಾಲು ತುಪ್ಪನೀಡಿ ಕೈಮುಗಿದು ಪಟ್ಟಣಕ್ಕೆ ತೆರಳುವುದು ವಾಡಿಕೆಯಾಗಿತ್ತು, ಸಿದ್ಧಯ್ಯನಿಗೆ ಹಾಲು, ತುಪ್ಪ ನೀಡಿದಂದು ಪಟ್ಟಣದಲ್ಲಿ ಹಾಲು ಮೊಸರು, ತುಪ್ಪದ ಮಾರಾಟ ಚೆನ್ನಾಗಿ ನಡೆಯುತ್ತಿತ್ತು. ನಿತ್ಯ ಇದೆ ರೀತಿ ನಡೆದುಕೊಂಡರು. ಕೆಲ ಕಾಲದ ನಂತರ ಕಾಡುಗೊಲ್ಲತಿಯರು ಸಿದ್ದಯ್ಯನಿಗೆ ಹಾಲು ಕೊಡದೆ, ಸಿದ್ದಯ್ಯ ಹಾಲು ಕೊಡಿರವ್ವ ಎಂದು ಕೇಳಿದರು. ಕಾಡುಗೊಲ್ಲತಿಯರು ಕೊಡದಲ್ಲಿ ಹಾಲು ಇಲ್ಲ ನಾವೇನು ಕೊಡುವುದು ಎಂದು ಜಂಬದಿಂದ ಪಟ್ಟಣದತ್ತ ನಡೆದರು. ಆ ದಿನ ಪೇಟೆಗೆ ಹೋಗಿ ಹಾಲು ಮಾರಲು ಮುಂದಾದಾಗ ಕೊಡದಲ್ಲಿ ಹಾಲು ಇರಲಿಲ್ಲ. ಕೊನೆಗೆ ಸಿದ್ದಯ್ಯನಲ್ಲಿಗೆ ಬಂದು ತಪ್ಪಾಯಿತು ಎಂದು ತಪ್ಪು ಕಾಣಿಕೆ ಕೊಟ್ಟ ಮೇಲೆ ಕಾಡುಗೊಲ್ಲತಿಯರ ಕೊಡದಲ್ಲಿ ಹಾಲು ತುಂಬಿತಂತೆ. ಆಸವಲ್ಲದವನು ದೆಸೆವಂತ ಸಿದ್ಧಯ್ಯ ಎಂಬುದನ್ನು ಮನವರಿಕೆ ಮಾಡಿಕೊಂಡ ಕಾಡುಗೊಲ್ಲತಿಯರು ಅಂದಿನಿಂದ ಸಿದ್ದಯ್ಯನಿಗೆಂದು ಪ್ರತ್ಯೇಕ ಕೊಡದಲ್ಲಿ ಮೀಸಲು ಹಾಲು, ಮೀಸಲು ತುಪ್ಪ ತಂದುಕೊಡುವುದನ್ನು ರೂಢಿಸಿಕೊಂಡರು. ಕಾಡುಗೊಲ್ಲತಿಯರು ಶೀಲ ಮತ್ತು ಶೌಚ ಹಾಗೂ ಭಕ್ತಿಗೆ ಒಲಿದ ಸಿದ್ದಯ್ಯ ಗೊಲ್ಲತಿಯರ ಕೊಡದ ಮೇಲೆ ನೊಣದ ರೀತಿಯಲ್ಲಿ ಸಾಗಿ ಬಂದು ನೆಲೆಗೊಂಡದ್ದರಿಂದ ನೊಳಂಬವಾಡಿಯಾಯಿತಂತೆ. ಅಂದಿನಿಂದ ಗೊಲ್ಲತಿಯರಿಗೆ ಒಲಿದ ಸಿದ್ದಯ್ಯ, ಹೆಮನಾಪುರಿ ಪಟ್ಟಣದ ದೇವ ಮೂಲೆಯಲ್ಲಿ ಪುರವರದ ಕೆರೆ ಬಳಿ, ಭಕ್ತರಿಂದ ಗುಡಿ ಕಟ್ಟಿಸಿಕೊಂಡನಂತೆ. ತಾಯಿ ಗುಜ್ಜಾರ ಮಾಳಮ್ಮ ಏನಪ್ಪ ಮಗನೆ ಇಷ್ಟೊಂದು ದೊಡ್ಡ ಗುಡಿ ಕಟ್ಟಿಸಿಕೊಂಡಿದ್ದೀಯ ಅಂದು ಕೇಳಿದಕ್ಕೆ. ದೊಡ್ಡಗುಡಿ ಬಿಟ್ಟು ಮುಂದೆ ಬಂದು ಚಿಕ್ಕಗುಡಿಯಲ್ಲಿ ನೆಲೆನಿಂತ ಸಿದ್ದಯ್ಯ ಸ್ವಾಮಿ ಭಕ್ತರ ಪಾಲಿಗೆ ಭವರೋಗ ನಿವಾರಕನಾಗಿದ್ದಾನೆ ಎಂದು ರಾಜ್ಯ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತೆ ಇಳಿವಯಸ್ಸಿನ ಮಾರಕ್ಕ ಚಿತ್ರಯ್ಯ(98) ತಿಳಿಸಿದರು. ಬಾಲ್ಯದಲ್ಲಿ ಹೇಮಾವತಿ ಹೊಲೆಯರ ತಿಮ್ಮಜ್ಜಿ ಹೇಳಿದ ಜನಪದ ಕಥನ ಕಾವ್ಯವನ್ನು ವಿವರಿಸಿದರು.

**ಚಾರಿತ್ರಿಕ ಹಿನ್ನೆಲೆ**

ಆಂದ್ರಪ್ರದೇಶ, ತಮಿಳುನಾಡು, ಕರ್ನಾಟಕ, ಕೇರಳ ಸೇರಿದಂತೆ 32 ಸಾವಿರ ಹಳ್ಳಿಗಳನ್ನು ಒಳಗೊಂಡ ಸಾಮ್ರಾಜ್ಯವನ್ನು ಆಳಿದ ನೊಳಂಬರು ಕನ್ನಡಿಗ ದೊರೆಗಳು. ಕ್ರಿ.ಶ. 8ರಿಂದ 11ನೇ ಶತಮಾನದವರೆಗೆ ಜನಪರ ಆಡಳಿತ ನಡೆಸಿ, ಕಲೆ, ಸಂಗೀತ, ನೃತ್ಯ, ವಾಸ್ತುಶಿಲ್ಪಗಳಿಗೆ ಕೊಡುಗೆ ನೀಡಿ, ಕೆರೆಕಟ್ಟೆ, ಗುಡಿಗೋಪುರ, ಅರಮನೆ, ಸೆರಮನೆಗಳನ್ನು

ನಿರ್ಮಿಸಿದ್ದಾರೆ. ನೊಳಂಬ ವಂಶದ ಶ್ರೇಷ್ಠ ಅರಸ ಮಹೇಂದ್ರ –1 ಪುರವರದ ಕೆರೆಯ ದೇವಮೂಲೆಯಲ್ಲಿ ಹೆಂಜೇರು ಸಿದ್ದೇಶ್ವರ ಗುಡಿ, ದೊಡ್ಡೇಶ್ವರ ಗುಡಿ ಕಟ್ಟಿಸಿದ ಬಗ್ಗೆ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಪುಣಬ ಘಟ್ಟದ ಕಲ್ಲೇಶ್ವರಗುಡಿ, ಕಲ್ಯಾಣದುರ್ಗದ ಕಂಬದೂರಿನ ಮಲ್ಲಿಕಾರ್ಜುನದೇಗುಲ, ಕಡೂರಿನ ದೇವಾಲಯದಲ್ಲಿ ಶಿಲಾಶಾಸನಗಳಿವೆ. ನೊಳಂಬರು ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಕರ್ನಾಟಕದ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಬೆಳಗಿಸುವುದರಲ್ಲಿಯೂ ಮುಖ್ಯ ಪಾತ್ರವಹಿಸಿದ್ದರು. ಹೆಂಜೇರು ಮತ್ತು ಬರಗೂರು ಜೈನ ಯತಿಗಳಿಗೆ ಶಿಕ್ಷಣ ನೀಡುತ್ತಿದ್ದ ಘಟಿಕಾ ಸ್ಥಾನಗಳಾಗಿದ್ದವು, ಬ್ರಹ್ಮಚಾರಿ ಯತಿಗಳಿಗೆ ಶಿಕ್ಷಣ ನೀಡುವ ಕೇಂದ್ರಗಳು, ಲಕುಲೀಶ ಮತ್ತು ಭಟಾರರಂತಹ ಗುರುಗಳಿದ್ದರು. ನೊಳಂಬರ ರಾಜಧಾನಿ ಹೆಂಜೇರು 12 ಮೈಲಿ ವಿಸ್ತೀರ್ಣ ಪ್ರದೇಶದಲ್ಲಿತ್ತು.

**ದೊರೆಗಳು**

ತ್ರಿನಯನ, ಮಂಗಳ, ಸಿಂಹಹೋತ, ಚಾರು ಪೊನ್ನೇರ, ಒಂದನೆಯ ಪೊಳಲ್ಚೋರ, ನೊಳಂಬಾಧಿರಾಜ ಮಹೇಂದ್ರ ಕ್ರಿ.ಶ. 879ರಿಂದ 897ರವರೆಗೆ ಆಳ್ವಿಕೆ ನಡೆಸಿದ ಶ್ರೇಷ್ಠ ದೊರೆ. ಬರಗೂರಿನಲ್ಲಿದ್ದ ತನ್ನ ಅರಮನೆಯನ್ನೇ ಶಿವನಿಗೆ ಅರ್ಪಿಸಿ, ಮಹೇಂದ್ರೇಶ್ವರ ದೇವಾಲಯವನ್ನಾಗಿಸಿ ದಾತ. ಒಂದನೇ ಅಯ್ಯಪ್ಪದೇವ, ಬೀರ ನೊಳಂಬ ಅಣ್ಣಿಗ, ಇರಿವ ನೊಳಂಬ ದಿಲೀಪ, ನನ್ನಿ ನೊಳಂಬ, ಎರಡನೇ ಪೊಳಲ್ಚೋರ, ಎರಡನೆ ಮಹೇಂದ್ರ, ಇರಿವ ನೊಳಂಬ ಘಟೆಯಂಕಾರ, ಪೆರ್ಮಾಡಿ ಉದಯಾಧಿತ್ಯ, ಜಗದೇಕ ಮಲ್ಲ ಇಮ್ಮಡಿನೊಳಂಬ, ನೊಳಂಬ ಪಲ್ಲವ ಪೆರ್ಮಾನಡಿ ದೊರೆಗಳು ಹೆಂಜೇರು ಪಟ್ಟಣವನ್ನು ರಾಜಧಾನಿ ಮಾಡಿಕೊಂಡು ರಾಜ್ಯಭಾರ ಮಾಡಿರುವ ಬಗ್ಗೆ ಚಾರಿತ್ರಿಕ ದಾಖಲೆಗಳಿವೆ.

ಹೆಂಜಾರಿ ಸಿದ್ದೇಶ್ವರ ದೇಗುಲ ಪಶ್ಚಿಮಾಭಿಮುಖ ವಾಗಿದೆ, ಭರತ ಖಂಡದಲ್ಲಿ ಎಲ್ಲೆಡೆ ಲಿಂಗದ ರೂಪದಲ್ಲಿ ಈಶ್ವರ ಪೂಜಿಸಲ್ಪಟ್ಟರೆ, ಹೆಂಜೇರಿನಲ್ಲಿ ಕುಳಿತ ಭಂಗಿಯಲ್ಲಿ ಮಾನವಾಕೃತಿಯ ವಿಗ್ರಹ ರೂಪದಲ್ಲಿ ಪೂಜಿಸಲ್ಪಡುವುದು ವಿಶೇಷವಾಗಿದೆ, ಪೌಳಿಯ ಒಳಗೆ ದೊಡ್ಡೇಶ್ವರ ಗುಡಿ, ಹಾವು, ಚೇಳಿನ ಭೈರಪ್ಪ, ಈಶ್ವರಗುಡಿ, ನಾಕೋಟಮ್ಮ ದೇಗುಲಗಳಿವೆ, ದೇಗುಲದ ಮುಂಬದಿ ಇರುವ ಮ್ಯೂಸಿಯಂನಲ್ಲಿ ನೊಳಂಬರ ವಂಶಾವಳಿಯ ಶಿಲಾಶಾಸನ, ಐತಿಹ್ಯದ ಅಮೂಲ್ಯ ವಾಸ್ತುಶಿಲ್ಪದ ಸ್ಮಾರಕಗಳು ಮತ್ತು ವಿಗ್ರಹಗಳ ಸಂಗ್ರಹವಿದೆ, ದೇವಾಲಯದ ಕಲ್ಲಿನ ಕಂಬಗಳ ಮೇಲೆ ಮಹಿಷಮರ್ದಿನಿ, ನರ್ತಿಸುವ ನಟರಾಜ, ಸೂರ್ಯನ ಶಿಲ್ಪಗಳಿವೆ, ನೊಳಂಬ ಶೈಲಿಯ ಕಿಟಕಿಯ ಜಾಲಾಂಧ್ರಗಳು, ಆಳೆತ್ತರದ ಗಂದದೊಗಲಿನ ನಂದಿ ವಿಗ್ರಹಗಳು ನೋಡುಗರ ಕಣ್ಮನ ಸೆಳೆಯುತ್ತವೆ.

**ಸಿದ್ದೇಶ್ವರ ಸ್ವಾಮಿ :**

ತಾನು ಚೆಲುವಾನೆಂದು ಕಾಲಿಗೆ ಸಂಕೋಲೆ ತೊಟ್ಟಿರುವ ನೋಡೆ ಹೆಂಜಾರಿ ಭೈರನಾ ಎಂಬ ಜನಪದ ಕಥನ ಕಾವ್ಯವನ್ನು ಇಂದಿಗೂ ಮಾರಕ್ಕ ಸಣ್ಣಚಿತ್ತಯ್ಯ ತಂಡದವರು ಹಾಡುತ್ತಿದ್ದಾರೆ. ಜಟಾ ಮಕುಟಧಾರಿ, ಕಪಾಲ ಮಾಲೆ, ಕುಚಬಂದ, ತೋಲ್ಬಬಂದಿಗಳನ್ನು ತೊಟ್ಟು ಕಾಲಿಗೆ ಸರಪಳಿ ಬಿಗಿದಿರುವ ಮೂರುಕಣ್ಣಯ್ಯ, ಮುಕ್ಕಣ್ಣಪ್ಪ ಹೆಂಜಾರಿ ಸಿದ್ದೇಶ್ವರ ಸ್ವಾಮಿಯ ಜಾತ್ರೆಯಲ್ಲಿ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ತುಮಕೂರು, ಹಿಂದೂಪುರ, ತಮಿಳು ನಾಡಿನ ಧರ್ಮಪುರಿ ಜಿಲ್ಲೆಗಳಿಂದ ಲಕ್ಷಾಂತರ ಭಕ್ತರ ದಂಡೇ ಹರಿದು ಬರುತ್ತದೆ, 20 ದಿನಗಳ ಕಾಲ ನಡೆಯುತ್ತಿದ್ದ ಭಾರಿ ದನಗಳ ಜಾತ್ರೆ ಇಂದು ಕಾಣದಾಗಿದೆ.

ಶಿರಾ, ಬರಗೂರು, ಬಾಣಗೆರೆ ಮಾರ್ಗವಾಗಿ, ಶಿರಾ–ಅಮರಾಪುರ ರಸ್ತೆಯಲ್ಲಿ ಸಾಗಿ ಬಂದರೆ, ಲಕ್ಕನಹಳ್ಳಿ ಮಾರ್ಗವಾಗಿ ಹೇಮಾವತಿ ತಲುಪಬಹುದು, ಶಿರಾ, ಪಾವಗಡ, ಮಡಕಶಿರಾ, ಮಧುಗಿರಿ, ಸ್ಥಾರಗಿರಿ, ಚಳ್ಳಕೆರೆ, ಲಿಂಗದಹಳ್ಳಿ ಮಾರ್ಗವಾಗಿ ಕರ್ನಾಟಕ ಮತ್ತು ಆಂಧ್ರಪ್ರದೇಶದ ಸರ್ಕಾರಿ ಮತ್ತು ಖಾಸಗಿ ಬಸ್ ವ್ಯವಸ್ಥೆ ಇದೆ.

ಹೇಮಾವತಿಯಲ್ಲಿ ಉಳಿದುಕೊಳ್ಳಲು ಕಲ್ಯಾಣ ಮಂಟಪಗಳಿವೆ. ಜಾತ್ರೆಯ ಮುಗಿಸಿಕೊಂಡು, ನಿಡಗಲ್ಲು ದುರ್ಗ, ಲೇಪಾಕ್ಷಿ ನೋಡಿಕೊಂಡು ಸ್ವಸ್ಥಾನಕ್ಕೆ ತೆರಳಬಹುದು. ಜಾತ್ರೆಯಲ್ಲಿ ನಿತ್ಯ ಆಂಧ್ರಪ್ರದೇಶದ ದೇವಾದಾಯ ಇಲಾಖೆ ಮತ್ತು ಧರ್ಮಕರ್ತರ ಭಕ್ತಮಂಡಳಿ ಸಹಯೋಗದಲ್ಲಿ ಅನ್ನಸಂತರ್ಪಣೆ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ತಲುಪುವ ಮಾರ್ಗಕ್ಕಾಗಿ 9480450893 ಇಲ್ಲಿಗೆ ಸಂಪರ್ಕಿಸಬಹುದು. ಮಕ್ಕಳು, ಮನೆಯವರೊಂದಿಗೆ ಬನ್ನಿ, ಕನ್ನಡಿಗರ ಅನನ್ಯ ರಾಜಮನೆತನದ ಬಗ್ಗೆ ಮಕ್ಕಳಿಗೆ ತಿಳಿಸಿಕೊಡಬೇಕು. ಹೆಂಜೇರು ಸಿದ್ದೇಶ್ವರ ಸ್ವಾಮಿಯ ಜನಪದೀಯ, ಐತಿಹಾಸಿಕ, ಸಾಂಸ್ಕೃತಿಕ ಸಂಭ್ರಮದಲ್ಲಿ ಪಾಲ್ಗೊಳ್ಳಿ.

**ದೊಡ್ಡಬಾಣಗೆರೆ ಮಾರಣ್ಣ**

# ಆರೋಗ್ಯಯುತ ಜೀವನಕ್ಕಾಗಿ ಹಣ್ಣುಗಳ ಪೌಷ್ಟಿಕತೆಯ ಮಹತ್ವ ಮತ್ತು ಆರ್ಥಿಕತೆ

'ಹಸಿದು ಹಣ್ಣು ತಿನ್ನು' ಎನ್ನುವ ಮಾತು ಉತ್ತಮ ಆರೋಗ್ಯಕ್ಕಾಗಿ ನಮ್ಮ ಆಹಾರ ಪದ್ಧತಿಯಲ್ಲಿ ಹಣ್ಣು ಸೇವನೆ ಇರಬೇಕು. ಸಮತೋಲಿತ ಆಹಾರಕ್ಕಾಗಿ ಜೀವಸತ್ವಗಳು, ಖನಿಜಗಳು, ನಾರಿನಾಂಶ ಮತ್ತು ಉತ್ಕರ್ಷಣ ನಿರೋಧಕಗಳ ಮಿಶ್ರಣವನ್ನು ನೀಡುವ ವಿವಿಧ ಹಣ್ಣುಗಳನ್ನು ತಿನ್ನಲು ತಜ್ಞರು ಸೂಚಿಸುತ್ತಾರೆ.

ಪ್ರಧಾನ ಮತ್ತು ಅಪ್ರಧಾನ ಹಣ್ಣಿನ ಬೆಳೆಗಳಲ್ಲಿ ಅಗತ್ಯ ಪೋಷಕಾಂಶಗಳು ಹೇರಳವಾಗಿ ಸಿಗುತ್ತವೆ. ಪ್ರಧಾನ ಹಣ್ಣುಗಳಾದ ಮಾವು, ಚಿಕ್ಕು, ಪೇರಲ ಬಾಳೆ, ನಿಂಬೆ ಸೇಬು ಹಾಗೂ ದ್ರಾಕ್ಷಿ ಮುಂತಾದವುಗಳು ವಿವಿಧ ಜೀವಸತ್ವಗಳನ್ನು (ವಿಟಮಿನ್ ಎ, ಬಿ, ಸಿ, ಡಿ) ಹೆಚ್ಚಿನ ಪ್ರಮಾಣದಲ್ಲಿ ಹೊಂದಿದ್ದು, ಇವು ರೋಗನಿರೋಧಕ ಕಾರ್ಯ, ಚರ್ಮದ ಆರೋಗ್ಯ ಮತ್ತು ಶಕ್ತಿಯ ಚಯಾಪಯವನ್ನು ಬೆಂಬಲಿಸುತ್ತವೆ. ಇದಲ್ಲದೇ ಜೀರ್ಣಕಾರಿ ಆರೋಗ್ಯಕ್ಕಾಗಿ ನಾರಿನಾಂಶವನ್ನು ಸಹ ಒದಗಿಸುತ್ತವೆ. ಇದರ ಜೊತೆಗೆ ಹೃದಯದ ಆರೋಗ್ಯ, ಮೂಳೆಗಳ ಸಾಂಧ್ರತೆ ಹಾಗೂ ಸ್ನಾಯುಗಳ ಕಾರ್ಯಕ್ಕೆ ಪ್ರಮುಖವಾಗಿ ಬೇಕಾಗಿರುವ ಪೊಟ್ಯಾಶಿಯಂ, ಕ್ಯಾಲ್ಸಿಯಂ ಮತ್ತು ಮೆಗ್ನೀಶಿಯಂನಂತಹ ಪ್ರಮುಖ ಖನಿಜಗಳನ್ನು ಸಹ ಒದಗಿಸುತ್ತವೆ. ಅನೇಕ ಪ್ರಧಾನ ಹಣ್ಣುಗಳು ಉತ್ಕರ್ಷಣ ನಿರೋಧಕಗಳನ್ನು ಒಳಗೊಂಡಿರುತ್ತವೆ. ಇದರಿಂದ ದೀರ್ಘ ಕಾಲದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ. ಅಪ್ರಧಾನ ಹಣ್ಣುಗಳಾದ ಹಲಸು, ಸೀತಾಫಲ, ಬಳವಲ ಹಣ್ಣು, ಮ್ಯಾಂಗೋಸ್ಟೀನ್, ಸ್ಟಾರ್ ಫ್ರುಟ್, ನೇರಳೆ, ಕವಳೆ ಇವುಗಳನ್ನು ಕಡಿಮೆ ವಿಸ್ತೀರ್ಣದಲ್ಲಿ ಬೆಳೆದಿದ್ದರೂ ಸಹ, ಇವು ಕೂಡ ಜೀವ ಸತ್ವಗಳು, ಉತ್ಕರ್ಷಣ ನಿರೋಧಕಗಳು ಮತ್ತು ವಿವಿಧ ಖನಿಜಗಳನ್ನು (ಮೆಗ್ನೀಶಿಯಂ ಪೊಟ್ಯಾಶಿಯಂ, ಕಬ್ಬಿಣ) ಹೆಚ್ಚಿನ ಪ್ರಮಾಣದಲ್ಲಿ ಒಳಗೊಂಡಿರುತ್ತವೆ. ಇವು ಸಹ ರೋಗ ನಿರೋಧಕ ಕಾರ್ಯ ಹೃದಯದ ಆರೋಗ್ಯ ಮತ್ತು ಮೂಳೆಯನ್ನು ಬಲಪಡಿಸಲು ಅತ್ಯುತ್ತಮ ಮೂಲಗಳಾಗಿವೆ. ಇದಲ್ಲದೆ ಇವು ಸಹ ಜೀರ್ಣಕ್ರಿಯಾ ಕರುಳಿನ ಆರೋಗ್ಯಕ್ಕೆ ಸಹಾಯ ಮಾಡುತ್ತವೆ.



**ಡಾ. ಶಶಿಕುಮಾರ್ ಎಸ್.**
ಪ್ರಾಧ್ಯಾಪಕರು ಹಾಗೂ ಸಂಪಾದಕರು,
ಸಂವಹನ ಕೇಂದ್ರ ತೋವಿವಿ, ಬಾಗಲಕೋಟ.
Email: shashikumar2482@gmail.com
Cell: 9741900255

## ಹಣ್ಣುಗಳು ಪೌಷ್ಟಿಕಾಂಶದ ಅಂಶಗಳು

ಹಣ್ಣುಗಳು ಬರೀ ಸಂತೋಷಕರ ರುಚಿಗೆ ಮಾತ್ರವಲ್ಲದೇ, ಹಲವಾರು ಚಿಕಿತ್ಸಕ ಪ್ರಯೋಜನಗಳನ್ನು ಸಹ ಹೊಂದಿರುತ್ತವೆ. ಏಕೆಂದರೆ ಅವು ಹಲವಾರು ಪೋಷಕಾಂಶಗಳನ್ನು ಒಳಗೊಂಡಿರುತ್ತವೆ. ಬಹಳಷ್ಟು ಪ್ರಮಾಣದ ಹಣ್ಣುಗಳು ಜೀವಸತ್ವ ಸಿ (ಅಸ್ಕೋರ್ಬಿಕ್ ಆಮ್ಲ) ಒಳಗೊಂಡಿದ್ದು, ಅವುಗಳಲ್ಲಿ ಪ್ರಮುಖವಾದದುದು ಕಿತ್ತಳೆ ಹಣ್ಣು. ದಿನಾಲು ಒಂದು ಕಿತ್ತಳೆ ಹಣ್ಣು ಸೇವಿಸಿದರೆ ದೇಹಕ್ಕೆ ಬೇಕಾದ ಜೀವಸತ್ವ ಸಿ ಸಿಕ್ಕಂತಾಗುತ್ತದೆ. ಅಂತೆಯೇ ಇತರ ಹಣ್ಣುಗಳು ಕೆಲವು ನಿರ್ದಿಷ್ಟ ಪೋಷಕಾಂಶಗಳೊಂದಿಗೆ ಸಮೃದ್ಧವಾಗಿವೆ.

ಸಾಮಾನ್ಯವಾಗಿ ಹಣ್ಣುಗಳು 70–89% ತೇವಾಂಶ, 1.5% ಪ್ರೋಟೀನ್‌ಗಳು. 13.15% ಕಾರ್ಬೋಹೈಡ್ರೇಟ್‌ಗಳು, 6% ವರೆಗೆ ಆಹಾರದ ನಾರಿನ ಅಂಶ, 501 ಎಮ್‌ಜಿ ಖನಿಜಗಳು ಹಾಗೂ 90 ಎಮ್‌ಜಿ ವರೆಗೆ ಜೀವಸತ್ವಗಳನ್ನು ಒಳಗೊಂಡಿರುತ್ತದೆ. ಉದಾಹರಣೆಗೆ ಹಣ್ಣಿನ ರಾಜ ಮಾವು 80% ತೇವಾಂಶ, 0.1% ಕೊಬ್ಬು, 0.6% ಪ್ರೋಟೀನ್ ಹಾಗೂ 6.0% ನಾರಿನಾಂಶ ಹೊಂದಿರುತ್ತದೆ. ಅದೇ ರೀತಿ ಪೇರಲವು 77–86% ತೇವಾಂಶ, 9–10% ನಾರಿನಾಂಶ, 1–2% ಪ್ರೋಟೀನ್, 0.5–1% ಕೊಬ್ಬು ಹಾಗೂ 9.5–10% ಕಾರ್ಬೋಹೈಡ್ರೇಟ್ ಇದರ ಜೊತೆಗೆ ಜೀವಸತ್ವ ಹಾಗೂ ವಿವಿಧ ಖನಿಜಗಳನ್ನು ಒಳಗೊಂಡಿರುತ್ತದೆ. ಈ ಹಣ್ಣನ್ನು "ಬಡವರ ಸೇಬು" ಎಂದು ಕರೆಯುತ್ತಾರೆ.

## ಹಣ್ಣುಗಳ ಪೌಷ್ಟಿಕಾಂಶದ ಮೌಲ್ಯ

ಹಣ್ಣುಗಳನ್ನು ಪೌಷ್ಟಿಕ – ಸಮೃದ್ಧವಾದ ಆಹಾರವೆಂದು ಪರಿಗಣಿಸಲಾಗುತ್ತದೆ ಏಕೆಂದರೆ ಅವು ತುಲನಾತ್ಮಕವಾಗಿ ಕಡಿಮೆ ಕ್ಯಾಲೋರಿ ಅಂಶಗಳೊಂದಿಗೆ ಅಗತ್ಯವಾದ ಪೋಷಕಾಂಶಗಳನ್ನು ಒದಗಿಸುತ್ತದೆ.

**1. ಜೀವಸತ್ವಗಳು:–**

**ಜೀವಸತ್ವ ಸಿ :** ಪ್ರತಿಕ್ಷಣಾ ಕಾರ್ಯ, ಗಾಯದ ಚಿಕಿತ್ಸೆ ಹಾಗೂ ಚರ್ಮದ

ಆರೋಗ್ಯಕ್ಕೆ ಅವಶ್ಯಕ. ಉದಾ: ಪೇರಲ, ಪಪಾಯ, ಕಿತ್ತಳೆ, ಸ್ಟ್ರಾಬೆರಿ, ಕಿವಿಹಣ್ಣು ಇತ್ಯಾದಿ.

**ಜೀವಸತ್ವ ಎ:** ಕಣ್ಣಿನ ದೃಷ್ಟಿ, ಪ್ರತಿಕ್ಷಣಾ ಕಾರ್ಯ ಹಾಗೂ ಚರ್ಮದ ಆರೋಗ್ಯಕ್ಕೆ ಮುಖ್ಯವಾಗಿದೆ.

ಉದಾ: ಮಾವು, ಪಪಾಯ, ಎಪ್ರಿಕಾಟ್, ಗ್ರೇಪ್ ಪ್ರೂಟ್ ಮುಂತಾದವುಗಳು

**ಜೀವಸತ್ವ ಕೆ :** ರಕ್ತ ಹೆಪ್ಪುಗಟ್ಟುವಿಕೆ ಹಾಗೂ ಮೂಳೆಗಳ ಆರೋಗ್ಯವನ್ನು ಬೆಂಬಲಿಸುತ್ತದೆ. ಉದಾ: ಕಿವಿ ಪ್ರೂಟ್, ಬ್ಲ್ಯಾಕ್ ಬೆರ್ರಿ, ದ್ರಾಕ್ಷಿ, ಅವಕ್ಯಾಡೊ, ಅಂಜೂರ, ದಾಳಿಂಬೆ ಮುಂತಾದವುಗಳು.

**2. ಖನಿಜಗಳು :–**

**ಅ) ಪೊಟ್ಯಾಶಿಯಂ :** ಸರಿಯಾದ ಹೃದಯ ಕಾರ್ಯ ಹಾಗೂ ದ್ರವ ಸಮತೋಲನವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಉದಾ: ಬಾಳೆ, ಕಿತ್ತಳೆ, ಅವಕಾಡೊ ಮತ್ತು ಒಣಗಿದ ಎಪಿಕ್ರಾಟ್ ಮುಂತಾದವುಗಳು

**ಆ) ಮೆಗ್ನೇಶಿಯಂ :** ಸ್ನಾಯು ಮತ್ತು ನರಗಳ ಕಾರ್ಯ ಬೆಂಬಲಿಸುವದಲ್ಲದೇ ಮೂಳೆಯ ಆರೋಗ್ಯವನ್ನು ಕಾಪಾಡುತ್ತದೆ. ಉದಾ: ಬಾಳೆ, ಅವಕಾಡೊ, ನಟ್ಸ್ ಮುಂತಾದವುಗಳು

**ಇ) ಕಬ್ಬಿಣ :** ರಕ್ತದಲ್ಲಿನ ಆಮ್ಲಜನಕ ಸಾಗಾಣಿಗೆ ಸಹಾಯ ಮಾಡುತ್ತದೆ. ಉದಾ: ದಾಳಿಂಬೆ, ಕವಳೆ, ಒಣಗಿದ ಎಪ್ರಕ್ರಾಟ್, ಖರ್ಜೂರ ಇತ್ಯಾದಿ

**ಈ) ಕ್ಯಾಲ್ಸಿಯಂ :** ಮೂಳೆ ಮತ್ತು ಹಲ್ಲುಗಳ ಆರೋಗ್ಯಕ್ಕೆ ಪ್ರಮುಖವಾದುದು. ಉದಾ: ಅಂಜೂರ, ಕಿತ್ತಳೆ, ಪೇರಲ, ಒಣಗಿದ ಎಪಿಕ್ರಾಟ್ ಮುಂತಾದವುಗಳು.

**ಉ) ನಾರು :** ಡಯಟರಿ ಪೈಬರ್ : ಜೀರ್ಣಕಾರಿ ಆರೋಗ್ಯವನ್ನು ಕಾಪಾಡಿಕೊಳ್ಳು ಮಲಬದ್ಧತೆಯನ್ನು ನಿಯಂತ್ರಿಸಲು ಹಾಗೂ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಉದಾ: ಸೇಬು, ಪೇರು, ಅವಕಾಡೊ, ಬಾಳೆ, ಮೊಸಂಬಿ, ಕಿವಿ, ಮಾವು ಇತ್ಯಾದಿ.

**3. ಉತ್ಕರ್ಷಣ ನಿರೋಧಕಗಳು :–**

ಹಣ್ಣುಗಳು ವಿವಿಧ ರೀತಿಯ ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿದೆ. ಉದಾಹರಣೆಗೆ ಫ್ಲೇವನಾಯ್ಡಗಳು, ಕ್ಯಾರೋಟಿನಾಯ್ಡ್‌ಗಳು ಮತ್ತು ಪಾಲಿಫಿನಾಲಗಳು. ಈ ಸಂಯುಕ್ತಗಳು ಉತ್ಕರ್ಷಣಶೀಲ ಒತ್ತಡ ಹಾಗೂ ಊರಿಯೂತವನ್ನು ಕಡಿಮೆ ಮಾಡಲು ಸಹಾಯ ಮಡುತ್ತವೆ. ಹೃದಯ ರೋಗಗಗಳನ್ನು ಹಾಗೂ ಕ್ಯಾನ್ಸರ್ ನಂತಹ ದೀರ್ಘಕಾಲದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ.

ಉದಾ: ದ್ರಾಕ್ಷಿ, ದಾಳಿಂಬೆ, ಬೆರ್ರಿ ಮುಂತಾದವುಗಳು

**4. ನೈಸರ್ಗಿಕ ಸಕ್ಕರೆಗಳು :–**

ಹಣ್ಣುಗಳು ನೈಸರ್ಗಿಕ ಸಕ್ಕರೆಗಳನ್ನು ಒಳಗೊಂಡಿರುತ್ತದೆ. ಅವುಗಳಲ್ಲಿ ಫ್ರಕ್ಟೋಸ್, ಇದು ಸಂಸ್ಕರಿಸಿದ ಸಕ್ಕರೆಗಳಿಗೆ ಆರೋಗ್ಯಕರ ಪರ್ಯಾಯವಾಗಿದೆ. ಈ ಸಕ್ಕರೆಗಳು ತ್ವರಿತವಾಗಿ ಶಕ್ತಿಯನ್ನು ಒದಗಿಸುತ್ತದೆ.

**ಹಣ್ಣಿಗಳ ಪೌಷ್ಟಿಕಾಂಶದ ಮೌಲ್ಯ**

**ಪೌಷ್ಟಿಕಾಂಶ**

**ಜೀವಸತ್ವ** ಎ (B–ಕ್ಯಾಲೋಟಿನ್ ) ಮಾವು (4800–)> ಹಣ್ಣುಗಳು (100 ಗ್ರಾಂ) ಪಪಾಯ (2020––)

**ಜೀವಸತ್ವ ಬಿ** 1 ಗೋಡಂಬಿ (360)> ಅಕ್ರೂಟ್ (450 mg)

**ಜೀವಸತ್ವ** – ಬಿ2–ಪತ್ರಿಕಾಯಿ (1191 mg) >ಪಪಾಯ (250 mg)>

**ಜೀವಸತ್ವ** ಸಿ –ಬಾರ್ಬಡೋಸ್ ಚೆರ್ರಿ (100–400 mg) > ನೆಲ್ಲಿ (600 mg)>

**ಜೀವಸತ್ವ** ಸಿ–ಪೇರಲ (299 mg)

**ಕಾರ್ಬೋಹೈಡ್ರೇಟ್ಸ್** – ಒಣದ್ರಾಕ್ಷಿ (77.3%)> ಒಣಗಿದ ಎಪ್ರಿಕಾಟ್ (72.8%), ಒಣಗಿದ ಕವಳೆ (67.% > ಕಾರಿಕ (67.8%)

**ಪ್ರೋಟೀನ್**– ಗೋಡಂಬಿ (21.2%)> ಬದಾಮಿ (20.88%)

**ಕೊಬ್ಬು**– ಅಕ್ರೋಟ್ (64.54%) > ಬದಾಮಿ (58.9%)

**ನಾರು**– ಅಂಜೂರ (17.%) > ಪೇರಲ>(69%) ಬದಾಮಿ (0.23%)

**ಕ್ಯಾಲ್ಸಿಯಂ**– ಲಿಚಿ(0.24%)> ಒಣಗಿದ ಕವಳೆ (0.16%)

**ರಂಜಕ**– ಬದಾಮಿ (0. 49%) > ಗೋಡಂಬಿ (0.45%)> ಅಕ್ರೂಟ (687mg)>

ಕಬ್ಬಿಣ ಒಣಗಿದ ಕವಳೆ ( 39.1%) > ಕಾರಿಕ (10.6%)

ಕ್ಯಾಲೋರಿಫಿಕ್ ಮೌಲ್ಯ ಅಕ್ರೂಟ್ (687 mg)>ಬದಾಮಿ (655 mg)>

ಗೋಡಂಬಿ (596 mg)> ಕಾರಿಕ (283 mg)

ಅತ್ಯುತ್ತಮ ಆರೋಗ್ಯವನ್ನು ಉತ್ತೇಜಿಸಲು ಎಷ್ಟರ ಮಟ್ಟಿಗೆ ಹಣ್ಣುಗಳನ್ನು ಹಾಗೂ ಇತರೆ ಆಹಾರ ಗುಂಪುಗಳನ್ನು ಬಳಕೆ ಮಾಡಬೇಕೆಂದು ಶಿಫಾರಸ್ಸು ಮಾಡಲಾದ ಆಹಾರ ಪದ್ಧತಿಗಳ (RDA) ಆಧಾರದ

ಮೇಲೆ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ(ICMR)ರವರು ಸಾಮಾನ್ಯ ಆಹಾರ ಮಾರ್ಗಸೂಚಿಗಳನ್ನು ಒದಗಿಸಿದೆ ವಯಸ್ಸಿನ ಆಧಾರದ ಮೇಲೆ, ಲಿಂಗ ಹಾಗೂ ವಿಭಿನ್ನ ಜನಸಂಖ್ಯೆಯ ಅಗತ್ಯಗಳನ್ನು ಮನದಲ್ಲಿಟ್ಟುಕೊಂಡು ICMRನವರು ಹಣ್ಣು ಸೇವನೆಗೆ ವ್ಯಾಪಕವಾದ ಶಿಫಾರಸ್ಸುಗಳನ್ನು ನೀಡಿದೆ.

ಹಣ್ಣುಗಳು ಆರೋಗ್ಯಕರ ಹಾಗೂ ಸಮತೋಲಿತ ಆಹಾರದ ಭಾಗವಾಗಿದೆ ಎಂದು ICMR ಹಾಗೂ ನ್ಯಾಷನಲ್ ಇನಸ್ಟಿಟ್ಯೂಟ್ ಆಫ್ ನ್ಯೂಟ್ರೀಷನ್ (NIN) ರವರು ಶಿಫಾರಸ್ಸು ಮಾಡಿರುತ್ತಾರೆ.

**ಹಣ್ಣಿನ ಸೇವನೆಗೆ ಸಾಮಾನ್ಯ ಮಾರ್ಗಸೂಚಿ**

**ವಯಸ್ಕರಿಗೆ :** ICMR ಸಾಮಾನ್ಯವಾಗಿ ವಯಸ್ಕರಿಗೆ ಸರಾಸರಿ ದಿನಕ್ಕೆ 200–250 ಗ್ರಾಂ ಹಣ್ಣುಗಳನ್ನು ಸೇವನೆ ಮಾಡಬಹುದು.

**ಮಕ್ಕಳು ಮತ್ತು ಹದಿಹರೆಯದವರಿಗೆ :** ವಯಸ್ಸಿನ ಆಧಾರದ ಮೇಲೆ 1–3 ವರ್ಷ ವಯಸ್ಸಿನ ಮಕ್ಕಳಿಗೆ : ದಿನಕ್ಕೆ ಸುಮಾರು 100–150 ಗ್ರಾಂ ಹಣ್ಣು

**4–6 ವರ್ಷ ವಯಸ್ಸಿನ ಮಕ್ಕಳಿಗೆ :** ದಿನಕ್ಕೆ ಸುಮಾರು 150–200 ಗ್ರಾಂ ಹಣ್ಣು

**ಹದಿಹರೆಯದವರಿಗೆ ( 10–18 ವರ್ಷ) :** ದಿನಕ್ಕೆ ಸುಮಾರು 200–250 ಗ್ರಾಂ ಹಣ್ಣು

ಒಂದೇ ತರನಾದ ಹಣ್ಣನ್ನು ಹೆಚ್ಚಿನ ಪ್ರಮಾಣದಲ್ಲಿ ಅಲ್ಲದೇ ವಿವಿಧ ತೆರನಾದ ಹಣ್ಣುಗಳನ್ನು ಸೇವನೆ ಮಾಡಬೇಕೆಂದು ICMRನವರು ಒತ್ತಿ ಹೇಳುತ್ತಾರೆ. ವಿವಿಧ ರೀತಿಯ ಹಣ್ಣುಗಳನ್ನು ತಿನ್ನುವದರಿಂದ ದೇಹಕ್ಕೆ ಬೇಕಾದ ಉತ್ಕರ್ಷಣ ನಿರೋಧಕತೆಯನ್ನು ಹಾಗೂ ವಿವಿಧ ಖನಿಂಜಾಂಶಗಳು ದೇಹಕ್ಕೆ ಲಭಿಸುತ್ತವೆ.

ವಿವಿಧ ಬಣ್ಣವಿರುವ ಹಣ್ಣುಗಳನ್ನು ಸೇವಿಸುವುದರಿಂದ ವಿವಿಧ ರೀತಿಯ ಫೈಟೋನ್ಯೂಟ್ರಿಯಂಟಗಳನ್ನು ದೇಹಕ್ಕೆ ಲಭಿಸುತ್ತವೆ ಉದಾಹರಣೆಗೆ ಕೆಂಪು, ಹಳದಿ ಹಾಗೂ ಕೇಸರಿ ಬಣ್ಣವಿರುವ ಹಣ್ಣುಗಳಲ್ಲಿ ಜೀವಸತ್ವ ಎ ಸಮೃದ್ಧವಾಗಿರುತ್ತದೆ. ಅದೇ ರೀತಿ ನೇರಳೆ ಮತ್ತು ನೀಲಿ ಬಣ್ಣದ ಹಣ್ಣುಗಳಲ್ಲಿ ಫ್ಲೇವನಾಯ್ಡ್ ಮತ್ತು ಅಂಥೋನಯಾನಿನ್‌ಗಳು ಹೇರಳವಾಗಿರುತ್ತವೆ. ಇದಲ್ಲದೆ ಹಸಿರು ಬಣ್ಣದ ಹಣ್ಣುಗಳಲ್ಲಿ ಪೋಲೆಟ್ ಮತ್ತು ನಾರಿನಂಶ ಜಾಸ್ತಿ ಇರುತ್ತವೆ.

**ಪ್ರಮುಖ ಹಣ್ಣುಗಳ ಪೋಷಕಾಂಶ ಮತ್ತು ಉಪಯೋಗಗಳು :–**

**ಮಾವು :** ಮಾವು ಜೀವಸತ್ವ ಎ ಮತ್ತು ಜೀವಸತ್ವ ಸಿ ಯು ಸಮೃದ್ಧ ಮೂಲವಾಗಿದೆ. ಈ ಹಣ್ಣು ಉತ್ಕರ್ಷಣ ನಿರೋಧಕಗಳುಗಳಲ್ಲಿ ಸಮೃದ್ಧವಾಗಿದೆ *ಇದು ದೇಹದ ಶುದ್ಧೀಕರಣದಲ್ಲಿ ಸಹಕಾರಿಯಾಗುತ್ತದೆ.

* ಇದು ಮೂತ್ರವರ್ಧಕವಾಗಿ ಕಾರ್ಯ ನಿರ್ವಹಿಸುತ್ತದೆ.
* ಇದು ಹೊಟ್ಟೆಯ ಆಮ್ಲೀಯತೆಯನ್ನು ಕಡಿಮೆಗೊಳಿಸುತ್ತದೆ.
* ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.
* ಇದು ಕ್ಯಾನ್ಸರ್ ಸಂಭವವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ದ್ರಾಕ್ಷಿ :** ಜೀವಸತ್ವ ಎ, ಜೀವಸತ್ವ ಸಿ ಮತ್ತು ಫ್ಲೇವ ನಾಯ್ಡ್‌ಗಳು ಹಾಗೂ ಉತ್ಕರ್ಷಣ ನಿರೋಧಕಗಳಗಳಲ್ಲಿ ಸಮೃದ್ಧವಾಗಿದೆ.

* ದೇಹದಲ್ಲಿನ ಗೆಡ್ಡೆಗಳಂತಹ ಸಮಸ್ಯೆಗಳ ನಿವಾರಣೆಯಲ್ಲಿ ಸಹಕಾರಿಯಾಗಿದೆ. ರಕ್ತವನ್ನು ಶುದ್ಧೀಕರಿಸಿ ನಮ್ಮ ದೇಹದ ರೋಗ ನಿರೋಧಕತೆ. ದ್ರಾಕ್ಷಿಯು ಕರುಳಿನ ಕ್ರಿಯೆಯನ್ನು ಉತ್ತೇಜಿಸುತ್ತದೆ. ಲಿವರ್‌ಅನ್ನು ಸ್ವಚ್ಛಗೊಳಿಸಿ, ಮೂತ್ರಪಿಂಡದ ಕಾರ್ಯಗಳಿಗೆ ಸಹಾಯ ಮಾಡಿ ನರಮಂಡಲವನ್ನು ಸಕ್ರಿಯಗೊಳಿಸುತ್ತದೆ. ರಕ್ತದ ಪ್ರಮಾಣ ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ.

**ಬಾಳೆಹಣ್ಣು :** ಸಕ್ಕರೆ, ಖನಿಜಾಂಶ (ಪೊಟ್ಯಾಸಿಯಮ್ ಮತ್ತು ಮೆಗ್ನೀಸಿಯಮ್) ಸಮೃದ್ಧ ಮೂಲವಾಗಿದೆ. ಈ ಹಣ್ಣಿನಲ್ಲಿ ಜೀವಸತ್ವ ಎ ಮತ್ತು ಸಿ ಸಾಧಾರಣ ಪ್ರಮಾಣದಲ್ಲಿದೆ.

* ಇದು ರಕ್ತದೊತ್ತಡವನ್ನು ನಿಯಂತ್ರಿಸುತ್ತದೆ
* ದೇಹಕ್ಕೆ ಬೇಗ ಶಕ್ತಿ ಬಿಡುಗಡೆಗೊಳಿಸುತ್ತದೆ.
* ಉತ್ತಮ ತ್ರಾಣ ಮತ್ತು ಮಲಬದ್ಧತೆಯನ್ನು ನಿರ್ವಸುವಲ್ಲಿ ಸಹಕಾರಿಯಾಗಿದೆ (ಮಾಗಿದ ಬಾಳೆಹಣ್ಣು)
* ಹಸಿ ಬಾಳೆಹಣ್ಣು ಅತಿಸಾರವನ್ನು ತಡೆಯುತ್ತದೆ
* ಇದು ನಿದ್ರೆಗೆ ಸಹಾಯ ಮಾಡುತ್ತದೆ
* ರಕ್ತಹೀನತೆಗೆ ಚಿಕಿತ್ಸೆ ನೀಡಲು ಅತ್ಯುತ್ತಮ ಹಣ್ಣು

**ಚಿಕ್ಕು (ಸಪೋಟ) :** ಹಣ್ಣಿನಲ್ಲಿ ನೈಸರ್ಗಿಕ ಸಕ್ಕರೆಗಳ ಹೆಚ್ಚಾಗಿ ಹೊಂದಿದೆ. ಸಪೋಟಾದಲ್ಲಿ ಜೀವಸತ್ವ 'ಎ', ಜೀವಸತ್ವ

'ಸಿ' ಮತ್ತು ಹಲವಾರು 'ಬಿ' ಜೀವಸತ್ವಗಳಂತಹ ಅಗತ್ಯ ಜೀವಸತ್ವಗಳ ಹೆಚ್ಚಿನ ಪ್ರಮಾಣದಲ್ಲಿದೆ. ಇದು ಕ್ಯಾಲ್ಸಿಯಂ, ಕಬ್ಬಿಣ, ಮೆಗ್ನೀಸಿಯಮ್, ರಂಜಕ ಮತ್ತು ಪೊಟ್ಯಾಸಿಯಮ್ ನಂತಹ ಪ್ರಮುಖ ಪೋಷಕಾಂಶಗಳನ್ನು ಕೂಡ ಒಳಗೊಂಡಿದೆ ಸಕ್ಕರೆ ಅಂಶಗಳಾದ ಫ್ರಕ್ಟೋಸ್ ಮತ್ತು ಸುಕ್ರೋಸ್ ರೂಪದಲ್ಲಿರುವುದರಿಂದ ತ್ವರಿತ ಶಕ್ತಿಯನ್ನು ಒದಗಿಸುತ್ತದೆ. ಈ ಹಣ್ಣಿನಲ್ಲಿ ನಾರಿನ ಪ್ರಮಾಣ ಹೆಚ್ಚಾಗಿ ಸಿಗುತ್ತದೆ ಎಂದು ಹೇಳುತ್ತಾರೆ. ಉರಿಯೂತದ ನಿರೋಧಕ ಗುಣಲಕ್ಷಣಗಳು ಹೊಂದಿವೆ ಚರ್ಮಕ್ಕೆ ಮತ್ತು ತಲೆ ಕೂದಲಿನ ಬೆಳವಣಿಗೆಗೆ ಒಳ್ಳೆಯದು. ರಕ್ತದ ಒತ್ತಡ ಮತ್ತು ಕ್ಯಾನ್ಸರ್‌ದಿಂದ ದೂರವಿಡುತ್ತದೆ. ಆರೋಗ್ಯಕರವಾದ ಮೂಳೆಗಳು ಹಾಗೂ ನಂಜಾಣು ಮತ್ತು ಶೀಲಿಂದ್ರ ಬಾಧೆಗಳಿಂದ ದೂರವಿಡುತ್ತದೆ.

**ಪೇರಲ :** ಜೀವಸತ್ವ ಸಿ ಮತ್ತು ಕ್ಯಾರೊಟಿನಾಯ್ಡ್‌ನ ಉತ್ತಮ ಮೂಲವಾಗಿದೆ.
* ಇದು ರೋಗ ನಿರೋಧ'ಕತೆ ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ.
* ದೇಹಕ್ಕೆ ಕಬ್ಬಿಣಾಂಶ ಹೀರಿಕೊಳ್ಳಲು ಸಹಾಯ ಮಾಡುತ್ತದೆ.
* ಸೋಂಕನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ನಿಂಬೆ :** ನಿಂಬೆ ಹಣ್ಣಿನಲ್ಲಿ ಪೊಟ್ಯಾಸಿಯಮ್ ಮತ್ತು ಜೀವಸತ್ವ ಸಿ ಯಥೇಚ್ಚವಾಗಿದೆ. ಹೆಚ್ಚು ಕರಗುವ ನಾರಿನಾಂಶ ಮತ್ತು ಪೆಕ್ಟಿನ್ ಸಹ ಹೊಂದಿದೆ.

* ನಂಜು ಮತ್ತು ರೋಗ ನಿರೋಧಕತೆ ಹೆಚ್ಚಿಸುತ್ತದೆ.
* ಹೊಟ್ಟೆ ಮತ್ತು ಕರುಳಿನ ಕ್ರೀಯೆ ಹೆಚ್ಚಿಸುವಲ್ಲಿ ಸಹಕಾರಿಯಾಗಾಲಿದೆ.
* ಜ್ವರದ ಸಮಯದಲ್ಲಿ ಇದು ದೇಹಕ್ಕೆ ಶುದ್ದೀಕರಣ ಆಗಿ ಕಾರ್ಯನಿರ್ವಹಿಸುತ್ತದೆ
* ಗಂಟಲಿನ ತೊಂದರೆ ನಿವಾರಿಸಲು ರಾಮಬಾಣವಾಗಿದೆ. ರೋಗ ನಿರೋಧಕತೆ ಹೆಚ್ಚಿಸುತ್ತದೆ.

**ಕಿತ್ತಳೆ :** ಜೀವಸತ್ವ ಸಿ ಮತ್ತು ಫೋಲೇಟ್ನB ಕಾಂಪ್ಲೆಕ್ಸ್ ಜೀವಸತ್ವವನ್ನು ಸಹ ಹೊಂದಿದೆ. ಅತ್ಯುತ್ತಮ ನಾರಿನಾಂಶ ಮತ್ತು ಪೊಟ್ಯಾಸಿಯಮ್‌ನ ಉತ್ತಮ ಮೂಲವಾಗಿದೆ.

* ಇದು ದೇಹಕ್ಕೆ ಬಲವಾದ ರಕ್ಷಣೆಯನ್ನು ಒದಗಿಸುತ್ತದೆ.
* ಸೋಂಕನ್ನು ತಡೆದುಕೊಳ್ಳಿ.
* ಕಬ್ಬಿಣವನ್ನು ಹೀರಿಕೊಳ್ಳಲು ಸಹಾಯ ಮಾಡುತ್ತದೆ
* ಇದು ಪ್ರಬಲವಾದ ಉತ್ಕರ್ಷಣ ನಿರೋಧಕ ಶಕ್ತಿಯನ್ನು ಹೊಂದಿದೆ.
* ಕ್ಯಾನ್ಸರ್ ತಡೆಯುವ ಸಾಮರ್ಥ್ಯ (ವಿಶೇಷವಾಗಿ ಹೊಟ್ಟೆ) ಹೊಂದಿದೆ.
* ದೇಹದ ಕೊಬ್ಬಿನಾಂಶದ ಮಟ್ಟವನ್ನು ಕಡಿಮೆಗೊಳಿಸುತ್ತದೆ.
* ರಕ್ತನಾಳಗಳನ್ನು ಸುಧಾರಿಸಬಹುದು ಮತ್ತು ಬಲಪಡಿಸಬಹುದು
* ಕೋಶ ಗೋಡೆಯ ಬಲವನ್ನು ಕಾಪಾಡಿಕೊಳ್ಳಿ
* ರಕ್ತನಾಳಗಳ ಪರಿಚಲನೆಗೆ ಸಹಾಯಲ್ಲಿ ಸಹಾಯ ಮಾಡುವುದು.
* ದೇಹದ ಪಿತ್ತ ಮತ್ತು ಮಲಬದ್ಧತೆಗೆ ಅತ್ಯುತ್ತಮವಾಗಿದೆ.

**ಪಪ್ಪಾಯಿ :** ಇದು ಕಿಣ್ವ (ಪೆಪ್ಸಿನ್) ಹೊಂದಿದೆ. ಈ ಹಣ್ಣಿನಲ್ಲಿ ಯಥೇಚ್ಚವಾದ ಜೀವಸತ್ವ ಎ ಯಿದ್ದು ಸರಳ ಪ್ರಮಾಣದ ಸಿ ಹಾಗೂ ಕ್ಯಾಲ್ಸಿಯಂ ಮತ್ತು ಶರ್ಕರಪಿಷ್ಟಗಳಲ್ಲಿ ಸಮೃದ್ಧವಾಗಿದೆ.

* ಇದು ಜೀರ್ಣಕಾರಿ ಅಂಗದ ಶುದ್ದೀಕರಿಸಲು ಸಹಾಯ ಮಾಡುತ್ತದೆ
* ಇದು ಮೂತ್ರವರ್ಧಕ ಹಾಗೂ ವಿರೇಚಕವಾಗಿ ನಿರ್ವಹಿಸುತ್ತದೆ.
* ದೇಹದಲ್ಲಿ ಆಮ್ಲ-ಕ್ಷಾರೀಯ ಸಮತೋಲನ ಕಾಪಾಡುತ್ತದೆ
* ಕಣ್ಣಿಗೆ ಸಂಬಂಧಪಟ್ಟ ಸಮಸ್ಯೆಗಳಿಗೆ ರಾಮಬಾಣವಾಗಿದೆ.
* ಪಪ್ಪಾಯಿ ಔಷಧೀಯ ಹಾಗೂ ಸೌಂದರ್ಯ ವರ್ಧಕಗಳಾಗಿ ಉಪಯೋಗಿಸಲಾಗುತ್ತದೆ.

**ಅನಾನಸ್ :** ಇದು ಜೀವಸತ್ವ ಸಿ ಯಲ್ಲಿ ಸಮೃದ್ಧವಾಗಿದೆ. ಜೀವಸತ್ವ ಎ ಯಲ್ಲಿ ಮಧ್ಯಮವಾಗಿದೆ. ಆಹಾರದ ನಾರಿನ ಉತ್ತಮ ಮೂಲ

* ರುಮಟಾಯ್ಡ್ ಸಂಧಿವಾತವನ್ನು ಗುಣಪಡಿಸಲು ಬಳಸಲಾಗುತ್ತದೆ
* ಮಧುಮೇಹದ ಹುಣ್ಣು ಗುಣಪಡಿಸಲು ಮತ್ತು ಸಾಮಾನ್ಯ ಶಸ್ತ್ರಚಿಕಿತ್ಸೆಯಲ್ಲಿ ಬಳಸಲಾಗುತ್ತದೆ
* ಬ್ರೊಮೆಲೈನ್ ಕಿಣ್ವದ ಉಪಸ್ಥಿತಿಯಿಂದಾಗಿ ಇದು ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ.

**ದಾಳಿಂಬೆ :** ಕಡಿಮೆ ಕ್ಯಾಲೋರಿ ಮತ್ತು ಜೀವಸತ್ವ ಸಿ ವುಳ್ಳ ಹಣ್ಣು ಇದಾಗಿದೆ. ಪೊಟ್ಯಾಸಿಯಮ್ ಮತ್ತು ಫ್ಲೇವನಾಯ್ಡ್‌ಗಳ ಉತ್ತಮ ಮೂಲವಾಗಿದೆ.
* ಹೃದಯ, ಯಕೃತ್ತಿನ ಸೋಂಕನ್ನು ತಡೆಯುತ್ತದೆ.

* ಅತೀ ಹೆಚ್ಚು ಉತ್ಕರ್ಷಣ ಗುಣ ಹೊಂದಿರುವುದರಿಂದ ರೋಗ ನಿರೋಧಕತೆ ಹೆಚ್ಚಿಸುವುದರ ಜೊತೆಗೆ ಅತಿಸಾರವನ್ನು ಮತ್ತು ಕ್ಯಾನ್ಸರ್ ನಿಯಂತ್ರಿಸಬಹುದಾಗಿದೆ.

**ಹಲಸಿನ ಹಣ್ಣು :** ಇದು ಜೀವಸತ್ವ ಬಿ ಮತ್ತು ಸಿ, ಪೊಟ್ಯಾಸಿಯಮ್, ಕ್ಯಾಲ್ಸಿಯಂ, ಕಬ್ಬಿಣ, ಪ್ರೋಟೀನ್‌ಗಳು ಮತ್ತು ಉನ್ನತ ಮಟ್ಟದ ಶರ್ಕರಪಿಷ್ಟ ಸಮೃದ್ಧವಾಗಿದೆ.

ನಮ್ಮ ಮುಖ್ಯ ಆಹಾರಕ್ಕೆ ಕೈಗೆಟುಕುವ ಮತ್ತು ಸುಲಭವಾಗಿ ಲಭ್ಯವಿರುವ ಪ್ರಮಾಣದಲ್ಲಿದೆ. ಜಾಕಾಲಿನ್ ಕರುಳಿನ ಕ್ಯಾನ್ಸರ್, ಏಡ್ಸ್ ತಡೆಗಟ್ಟುವಲ್ಲಿ ಉಪಯುಕ್ತವಾಗಿದೆ. ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ ಮತ್ತು ಕೊಬ್ಬನ್ನು ಕಡಿಮೆ ಮಾಡುತ್ತದೆ. ಶಕ್ತಿಯುತ ಹಣ್ಣು ಮತ್ತು ಮೂಳೆಯನ್ನು ಸುಧಾರಿಸುತ್ತದೆ ರಕ್ತದೊತ್ತಡವನ್ನು ನಿಯಂತ್ರಿಸುತ್ತದೆ ಮತ್ತು ರಕ್ತಹೀನತೆ ನಿವಾರಣೆಗೆ ಸಹಕಾರಿ.

**ನೆರಳೆ ಹಣ್ಣು :** ಈ ಹಣ್ಣಿನಲ್ಲಿ ಉತ್ಕರ್ಷಣ ನಿರೋಧಕಗಳು, ಜೀವಸತ್ವಗಳು ಮತ್ತು ಖನಿಜಗಳಿಂದ ಸಮೃದ್ಧವಾಗಿವೆ, ಇದು ಪೌಷ್ಟಿಕಾಂಶದ ಅತ್ಯುತ್ತಮ ಮೂಲವಾಗಿದೆ. ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿ ಮತ್ತು ರಕ್ತದೊತ್ತಡವನ್ನು ಸಮತೋಲನಗೊಳಿಸಲು ಸಹಕಾರಿಯಾಗಲಿದೆ. ಹಣ್ಣುಗಳು ಮತ್ತು ಬೀಜಗಳು ಸೇವನೆಯಿಂದ ಮಧುಮೇಹ ನಿವಾರಿಸುತ್ತದೆ. ಜೊತೆಗೆ ಜ್ವರ, ಅತಿಸಾರ ಮತ್ತು ಚರ್ಮದ ಸ್ಥಿತಿಯನ್ನು ನಿವಾರಿಸುತ್ತದೆ.

**ಸ್ಟ್ರಾಬೆರಿ :** ಅವು ಜೀವಸತ್ವ ಸಿ, ಫೋಲಿಕ್ ಆಮ್ಲ ಮತ್ತು ನಾರಿನಾಂಶ ಸಮೃದ್ಧವಾಗಿವೆ ಮತ್ತು ಯಾವುದೇ ಕೊಬ್ಬನ್ನು ಹೊಂದಿರುವುದಿಲ್ಲ.
* ಮೂತ್ರವರ್ಧಕ ಮತ್ತು ಮೂತ್ರಪಿಂಡದ ಮೇಲೆ ಅತ್ಯುತ್ತಮ ಪರಿಣಾಮ.
* ಸಂಧಿವಾತ ನಿವಾರಿಸಲು ಸಹಕಾರಿಯಾಗಿದೆ.
* ಹಣ್ಣು ಹೃದಯ ಸಂಬಂಧಿತ ರೋಗಗಳ ನಿರ್ವಹಣೆಯಲ್ಲಿ ಸಹಕಾರಿಯಾಗಿದೆ.

**ಕದಂಬ :** (ಪ್ಯಾಶನ್ ಹಣ್ಣು) ಇದು ಪೊಟ್ಯಾಸಿಯಮ್‌ನ ಉತ್ತಮ ಮೂಲವಾಗಿದೆ.
* ಇದು ವಿಶ್ರಾಂತಿಗೆ ಸಹಾಯ ಮಾಡುತ್ತದೆ
* ಇದು ಉತ್ತಮ ನಿದ್ರೆಗೆ ಸಹಾಯ ಮಾಡುತ್ತದೆ.

**ನೆಲ್ಲಿಕಾಯಿ** : ಇದು ಜೀವಸತ್ವ ಸಿ ಯಥೇಚ್ಚ ಹೊಂದಿದ್ದು, ಪ್ರಮಾಣದಲ್ಲಿ ಎರಡನೆ ಸ್ಥಾನದಲ್ಲಿದೆ. ಜೀವಸತ್ವ ಎ, ಪೊಟ್ಯಾಸಿಯಮ್ ಮತ್ತು ಫ್ಲೇವನಾಯ್ಡ್‌ಗಳು ಉತ್ತಮ ಮೂಲವಾಗಿದೆ.
* ಅಧಿಕ ರಕ್ತದೊತ್ತಡ ಮತ್ತು ಮಧುಮೇಹ ರೋಗಿಗಳಿಗೆ ಒಳ್ಳೆಯದು.
* ರೋಗನಿರೊಧಕ ಮಾತ್ತು ಕ್ಯಾನ್ಸರ್ ನಂಥ ರೋಗ ಗುಣಪಡಿಸಲು ಸಹಕಾರಿಯಾಗಿವೆ.
* ದೇಹದ ಆಮ್ಲೀಯತೆಯನ್ನು ಕಡಿಮೆಗೊಳಿಸುತ್ತದೆ.

**ಸೇಬು :** ಸೇಬುಗಳು ಪೆಕ್ಟಿನ್, ಹೆಮಿಸೆಲ್ಯುಲೋಸ್ ಮತ್ತು ಸೆಲ್ಯುಲೋಸ್‌ನಂತಹ ಕರಗಬಲ್ಲ ಮತ್ತು ಕರಗದ ಫೈಬರ್‌ನಲ್ಲಿ ಸಮೃದ್ಧವಾಗಿವೆ. ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿರ್ವಹಿಸಲು, ಉತ್ತಮ ಜೀರ್ಣಕ್ರಿಯೆಯನ್ನು ಉತ್ತೇಜಿಸಲು ಮತ್ತು ಕರುಳು ಮತ್ತು ಹೃದಯದ ಆರೋಗ್ಯವನ್ನು ಬೆಂಬಲಿಸಲು ಸಹಾಯ ಮಾಡುತ್ತದೆ ಹೃದ್ರೋಗ, ಪಾರ್ಶ್ವವಾಯು, ಕ್ಯಾನ್ಸರ್, ಅಧಿಕ ತೂಕ, ಸ್ಥೂಲಕಾಯತೆ ಮತ್ತು ನರ ವೈಜ್ಞಾನಿಕ ಅಸ್ವಸ್ಥತೆಗಳ ಅಪಾಯವನ್ನು ಕಡಿಮೆಗೊಳಿಸಲಿವೆ.

**ಡ್ರ್ಯಾಗನ್ ಹಣ್ಣು :** ಹಣ್ಣು ಫೈಬರ್, ಕಬ್ಬಿಣ, ಮೆಗ್ನೀಸಿಯಮ್ ಮತ್ತು ಜೀವಸತ್ವ ಸಿ ಮತ್ತು ಇ ಸೇರಿದಂತೆ ಅನೇಕ ಪೋಷಕಾಂಶಗಳಲ್ಲಿ ಸಮೃದ್ಧವಾಗಿದೆ. ಇದು ಲೈಕೋಪೀನ್ ಮತ್ತು ಬೀಟಾಕ್ಯಾರೋಟಿನ್ ನಂತಹ ಕ್ಯಾರೊಟಿನಾಯ್ಡ್‌ಗಳ ಹಾಗೂ ಉತ್ಕರ್ಷಣಗಳ ಮೂಲವಾಗಿದೆ.
* ಡ್ರ್ಯಾಗನ್ ಹಣ್ಣು ಮಧುಮೇಹವನ್ನು ನಿಯಂತ್ರಿಸುತ್ತದೆ
* ಕ್ಯಾನ್ಸರ್ ಅಪಾಯಗಳನ್ನು ಕಡಿಮೆ ಮಾಡುತ್ತದೆ
* ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ
* ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ.
* ಹೃದಯದ ಆರೋಗ್ಯವನ್ನು ಸುಧಾರಿಸುತ್ತದೆ.
* ವಯಸ್ಸಾದ ಚರ್ಮದ ವಿರುದ್ಧ ಹೋರಾಡುತ್ತದೆ.

**ಬೆಣ್ಣೆ ಹಣ್ಣು :** (ಅವಕಾಡೆ) ಹೆಚ್ಚಿನ ಪ್ರಮಾಣದ ಪೊಟ್ಯಾಸಿಯಮ್, ನಾರಿನಾಂಶ, ಜೀವಸತ್ವ B6, ಜೀವಸತ್ವ ಇ ಮತ್ತು ಏ ಹಾಗೂ ಫೋಲೇಟ್ ಮತ್ತು ಲ್ಯುಟೀನ್ ಮತ್ತು ಜಿಯಾಕ್ಸಾಂಥಿನ್ ಎಂದು ಕರೆಯಲ್ಪಡುವ ಎರಡು ಕ್ಯಾರೊಟಿನಾಯ್ಡ್‌ಗಳು ಬೊಜ್ಜು, ಮಧುಮೇಹ, ಹೃದ್ರೋಗ ಮತ್ತು ಒಟ್ಟಾರೆ ಗುಣಪಡಿಸುವಲ್ಲಿ ಸಹಕಾರಿಯಾಗಿವೆ. ಬಣ್ಣ ಮತ್ತು ಕೂದಲುಗಳ ಬೆಳವಣಿಗೆ ಜೊತೆಗೆ ತೂಕದ ನಿಯಂತ್ರಿಸುವಲ್ಲಿ ಸಹಕಾರಿಯಾಗಿರುವುದು.

**ಲಿಚ್ಚಿ :** ಇದು ಜೀವಸತ್ವ ಅ, ಪೊಟ್ಯಾಸಿಯಮ್, ನಾರಿನಾಂಶ ಮತ್ತು ಉರಿಯೂತದ ಮತ್ತು ಉತ್ಕರ್ಷಣ ನಿರೋಧಕ ಗುಣಲಕ್ಷಣಗಳನ್ನು ಹೊಂದಿರುವ ಅನೇಕ ಪಾಲಿಫಿನಾಲ್‌ಗಳ ಸಮೃದ್ಧ ಮೂಲವಾಗಿದೆ. ತೂಕವನ್ನು ಕಡಿಮೆಗೊಳಿಸುವುದರ ಜೊತೆಗೆ ಮತ್ತು ಚರ್ಮವನ್ನು ರಕ್ಷಿಸುತ್ತದೆ. ರಕ್ತದ ಚಲನೆ ಮತ್ತು ರೋಗ ನಿರೋಧಕ ಶಕ್ತಿಯನ್ನು ಸುಧಾರಿಸುತ್ತದೆ.

**ಮೆಕಾಡಾಮಿಯಾ :** ಮೊನೊ–ಸ್ಯಾಚುರೇಟೆಡ್ ಕೊಬ್ಬುಗಳು ಮತ್ತು ಪ್ರೊಟೀನ್‌ಗಳ ಪ್ರಮಾಣ ಯಥೇಚ್ಛವಾಗಿದೆ. ಒಮೆಗಾ –7 ಪಾಲ್ಮಿಟೋಲಿಕ್ ಆಮ್ಲ. ಇದು ಜೀವಸತ್ವಗಳು (B1, B2, B6) ಸಕ್ಕರೆಗಳು, ಆಹಾರದ ನಾರಿನಾಂಶ, ಕ್ಯಾಲ್ಸಿಯಂ, ರಂಜಕ, ಪೊಟ್ಯಾಸಿಯಮ್ ಮತ್ತು ಇತರ ಖನಿಜಗಳನ್ನು ಸಹ ಒಳಗೊಂಡಿದೆ. ಉರಿಯೂತ ನಿವಾರಕವಾಗಿ ಕಾರ್ಯ ನಿರ್ವಹಿಸುತ್ತದೆ.

* ಇದು ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆಗೊಳಿಸುತ್ತದೆ.
* ಇದು ರಕ್ತದ ಗ್ಲೂಕೋಸ್ ಅನ್ನು ಕಡಿಮೆಗೊಳಿಸುತ್ತದೆ.
* ಇದು ಚರ್ಮವನ್ನು ಹಗುರಗೊಳಿಸಲು ಸಹಾಯ ಮಾಡುತ್ತದೆ.
* ರಕ್ತ ಹೆಪ್ಪುಗಟ್ಟುವಿಕೆ ರಚನೆಗೆ ಸಹಾಯ ಮಾಡುತ್ತದೆ.
* ಇದು ಹೃದಯವನ್ನು ರಕ್ಷಿಸಲು ಸಹಾಯ ಮಾಡುತ್ತದೆ.
* ಇದು ತೂಕ ನಿರ್ವಹಣೆಯಲ್ಲಿ ಸಹಾಯ ಮಾಡುತ್ತದೆ.

**ಕವಳೆ ಹಣ್ಣು :** ಈ ಹಣ್ಣು ಕಡಿಮೆ ಪ್ರಾಮುಖ್ಯತೆ ಹೊಂದಿರುವ ಹಣ್ಣುಗಳಲ್ಲಿ ಒಂದಾಗಿದೆ. ಈ ಹಣ್ಣಿನಲ್ಲಿ ಯಥೇಚ್ಛ ಪ್ರಮಾಣದ ಕಬ್ಬಿಣ, ಕ್ಯಾಲ್ಸಿಯಂ ಮೆಗ್ನಿಷಿಯಂ ಹಾಗೂ ರಂಜಕಗಳು ಹೇರಳವಾಗಿ ದೊರೆಯುತ್ತವೆ. ಕವಳೆ ಹಣ್ಣಿನ ಜೀವಸತ್ವ ಸಿ ಸಾಂದ್ರತೆಯು ಉತ್ಕರ್ಷಕ ನಿರೋಧಕ ಶಕ್ತಿಯ ಮೂಲವಾಗಿದೆ. ಈ ಹಣ್ಣಿನಲ್ಲಿ ಹೆಚ್ಚು ಹೆಚ್ಚಿನ ಪ್ರಮಾಣದ ಕಬ್ಬಿನಾಂಶ ಇರುವುದರಿಂದ ಅನಿಮಿಯಾದಂತ ರೋಗಗಳ ದೂರ ಇಡಬಹುದು. ಜೀವಸತ್ವ ಸಿ ಹೆಚ್ಚಾಗಿ ಹೊಂದಿರುವುದರಿಂದ ರೋಗ ನಿರೋಧಕತೆ ಸಹಕಾರಿಯಾಗಿದೆ.

**ಪ್ರಮುಖ ಹಣ್ಣಿನ ಬೆಳೆಗಳ ಆರ್ಥಿಕತೆ**

| ಬೆಳೆ | ಇಳುವರಿ (ಟನ್/ಹೇ.) | ಆದಾಯ ಪ್ರಮಾಣ |
|---|---|---|
| ಮಾವು | 8–10 | ಹೆಚ್ಚು |
| ಬಾಳೆ | 30–40 | ಹೆಚ್ಚು |
| ಪೇರಲ | 15–20 | ಮಧ್ಯಮ |
| ದಾಳಿಂಬೆ | 20–25 | ಹೆಚ್ಚು |
| ಡ್ರ್ಯಾಗನ್ ಹಣ್ಣು | 15–17 | ಹೆಚ್ಚು |
| ದ್ರಾಕ್ಷಿ | 30–35 | ಹೆಚ್ಚು |
| ಪಪ್ಪಾಯಿ | 20–25 | ಹೆಚ್ಚು |
| ಆವಕಾಡೊ | 8–10 | ಹೆಚ್ಚು |
| ಚಿಕ್ಕು | 10–12 | ಮಧ್ಯಮ |

**43ನೇ ಪುಟದಿಂದ ಮುಂದುವರೆದಿದೆ...........**
ನೀಡುತ್ತಾನೆ. ಸ್ವೀಕರಿಸಿದ ಸಿದ್ಧರಾಮರು ಕೈಯಲ್ಲಿ ಹಿಡಿದು ಕಟ್ಟುತ್ತಿದ್ದ ಗೋಡೆಯ ಮೇಲೆ ಕುಳಿತುಕೊಳ್ಳುತ್ತಾರೆ. ಆ ಗೋಡೆ ಕುದುರೆಯಂತೆ ಚಲಿಸುತ್ತಾ ಬಂದು ಊರಿಗೆ ಪ್ರದಕ್ಷಿಣೆ ಬಂದು ಕೆರೆಯ ನಡುವೆ ನಿಲ್ಲುತ್ತದೆ. ಈ ದೃಶ್ಯವನ್ನು ಕಂಡು ಆಶ್ಚರ್ಯಚಕಿತರಾದ ಗ್ರಾಮಸ್ಥರು ಸಿದ್ಧರಾಮರಿಗೆ ಶರಣಾಗಿ ಅವರ ಆದೇಶದಂತೆ ಊರಿಗೆ ಗೋಡೆಕೆರೆ ಎಂದು ಕರೆಯುವರು. ಇದು ಹಿಂದಿನಿಂದಲೂ ಬಂದಿರುವ ಮಾತು. ಮಣ್ಣು ಕಲ್ಲಿನಿಂದ ಗೋಡೆಯನ್ನು ಕಟ್ಟಿ ಏರಿಯನ್ನು ನಿರ್ಮಿಸಿ ಕೆರೆಯನ್ನು ಕಟ್ಟಲಾಗಿದೆ. ಈ ಕಾರಣದಿಂದಲೂ ಊರಿಗೆ ಗೋಡೆಕೆರೆ ಎಂದು ಕರೆಯಲಾಗಿ ಎಂಬ ಮಾತೂ ಇದೆ. ಈ ಸ್ಥಳವು ಇಂದು ಶರಣರ ಪುಣ್ಯ ಸ್ಥಳವಾಗಿದೆ.

ಬೆಟ್ಟದ ಸಾಲಿನ ಮಡಿಲಲ್ಲಿರುವ ಇಲ್ಲಿ ಸುತ್ತ ಮುತ್ತಲಿನ ಪ್ರದೇಶಗಳಿಗಿಂತ ಅಧಿಕ ಮಳೆಯಾಗುವುದು ಸಹಜವಾಗಿದೆ. ಪ್ರಕೃತಿದತ್ತವಾಗಿ ಜಲಸಮೃದ್ಧಿ ಪಡೆದಿರುವ ಗ್ರಾಮದ ಸುತ್ತಮುತ್ತಲಿನ ಜನಾಂಗಕ್ಕೆ ಶ್ರೀಕ್ಷೇತ್ರದ ಪರಮಪೂಜ್ಯರುಗಳ ಕೃಪಾಶೀರ್ವಾದ ಹಾಗೂ ನೆರವಿನಿಂದ ಸಹಸ್ರಾರು ಮಕ್ಕಳಿಗೆ ಜ್ಞಾನಗಂಗೆಯ ಸೌಭಾಗ್ಯ ದೊರೆತು ಬಾಳನ್ನು ಬಂಗಾರ ಮಾಡಿಕೊಂಡಿದ್ದಾರೆ.

ಗೋಡೆಕೆರೆಯಲ್ಲಿ ಇರುವಂತೆ ಅರಳಗುಪ್ಪೆ ಹಾಗೂ ತಿಪಟೂರು, ಏಳುನಾಡು (ಯಳನಾಡು) ಸೇರಿದಂತೆ ಕಲ್ಪತರು ನಾಡಿನ ಬಹುತೇಕ ಗ್ರಾಮಗಳಲ್ಲಿ ಕೆರೆಗಳಿರುವುದನ್ನು ಕಾಣಬಹುದು. ಕೆಲವು ಜಾಗಗಳಲ್ಲಿ ಶಾಸನಗಳು ಲಭ್ಯವಿದ್ದರೆ ಬಹುತೇಕ ಸ್ಥಳಗಳಲ್ಲಿ ಶಾಸನಗಳು ನಾಶವಾಗಿವೆ. ಶಾಸನಗಳು ನಾಶವಾದರೂ ಕೆರೆಕಟ್ಟೆ ಬಾವಿಗಳು ನಾಶವಾಗದೆ ಇಂದು ಸಕಲ ಜೀವರಾಶಿಗೂ ಜೀವಜಲವನ್ನು ನೀಡಿ ಪರಿಸರವನ್ನು ಸಂರಕ್ಷಸುತ್ತಿವೆ. ಕೆರೆಕಟ್ಟೆ ಬಾವಿಗಳ ಪರಿಶುದ್ಧತೆ ಸಂರಕ್ಷಣೆಯ ಮಹತ್ವ ಎಲ್ಲರಿಗೂ ತಿಳಿದು ಜಾಗೃತಿ ಮೂಡಲೆಂದು ಆಶಿಸೋಣ.

## ಸಂಘದ ಕಾರ್ಯದರ್ಶಿಗಳೊಂದಿಗೆ ಎಂ.ಎಲ್.ಸಿ. ಸಿ.ಟಿ.ರವಿ ಮತ್ತು ಮಾಜಿ ಶಾಸಕ ಬೆಳ್ಳಿಪ್ರಕಾಶ್ ಕಡೂರಿನಲ್ಲಿ ನಿರ್ಮಿಸುತ್ತಿರುವ ಸಮುದಾಯ ಭವನದ ನಿರ್ಮಾಣ ಕಾರ್ಯ ವೀಕ್ಷಿಸಿದರು






## ನೊಳಂಬ ಲಿಂಗಾಯತ ಸಂಘ ಮತ್ತು ಕೆ.ಬಿ.ಸಿ. ಸೇವಾಟ್ರಸ್ಟ್, ಶಿವಮೊಗ್ಗ ಇವರು ಏರ್ಪಡಿಸಿದ್ದ ನೊಳಂಬ ಶಾಸನ – ಒಂದು ಅಧ್ಯಯನ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ







**Vol-15 Issue No. : 2** **Periodical**

**RNI No. KARKAN-2012/53684/Dtd. 19-12-2013, Nolamba Vani - Kannada Quarterly**
**April, May, June 2025, Number of Pages 56**









**ಲಿಂಗೈಕ್ಯ ಪರಮಪೂಜ್ಯ ಶ್ರೀ ಶ್ರೀ ಶ್ರೀ ಬಸವರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಪುಣ್ಯಸ್ಮರಣೆ ಕಾರ್ಯಕ್ರಮ, ಶ್ರೀಮಠ, ಪುಷ್ಪಗಿರಿ.**

ಗೆ,

**Published, Printer and Owner : B.K.Chandrashekar, NOLAMBA ADHYAYANA KENDRA**
**Owned by on behalf of Nolamba Lingayatha Sangha (R.), # 1/A, 1st Cross, 3rd Stage, 4th Block, Basaveshwaranagar, Bengaluru-79, Karnataka.**
**Published from : Nolamba Lingayatha Sangha (R.), # 1/A, 1st Cross, 3rd Stage, 4th Block, Basaveshwaranagar, Bengaluru-79, Karnataka.**
**Printed at : Kala Offset Printers, # 1203, 1st Main, 1st Cross, M.C.Layout, Vijayanagar, Bengaluru - 560 040.**
**Editor : Dr. Rakesh B.C.**